بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ **ಬದರ್** ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 11–12

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

14–21 ಮಾರ್ಚ್ 2024, 14–21 ಅಮಾನ್ 1403 ಹಿಜರಿ ಶಮ್ಸಿ,
03–10 ರಮಝಾನ್ 1445 ಹಿಜರಿ ಖಮರಿ.


### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ


### ಅಲ್ಲಾಹನ ಉಪದೇಶ

وَآخَرِينَ مِنْهُمْ لَمَّا يَلْحَقُوا بِهِمْ ۚ وَهُوَ الْعَزِيزُ الْحَكِيمُ ○ ذٰلِكَ فَضْلُ اللّٰهِ يُؤْتِيهِ مَنْ يَشَاءُ ۚ وَاللّٰهُ ذُو الْفَضْلِ الْعَظِيمِ ○ (سورة جمعه: 4تا5)

(ಅಲ್–ಜುಮುಅ: 04–05)

ಅಂದರೆ: ಅವರೊಂದಿಗೆ ಇಷ್ಟರ ವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ. ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ.
5. ಅದು ಅಲ್ಲಾಹನ ಅನುಗ್ರಹವಾಗಿದೆ. ತಾನಿಚ್ಛಿಸುವವರಿಗೆ ಅವನು ಅದನ್ನು ದಯಪಾಲಿಸುತ್ತಾನೆ. ಅಲ್ಲಾಹನು ಅಪಾರವಾದ ಅನುಗ್ರಹದ ಒಡೆಯನಾಗಿದ್ದಾನೆ.

# ಉಮ್ಮತ್ತಿನ ಹಿರಿಯರ ದೃಷ್ಟಿಯಲ್ಲಿ ಹಝ್ರತ್ ಇಮಾಮ್ ಮಹದಿ ಮತ್ತು ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮ್ ಅವರ ಸ್ಥಾನಮಾನ



## ಇಮಾಮ್ ಮಹದಿ ಅವರ ಅಂತರಂಗವು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರ ಅಂತರಂಗವಾಗಿರುತ್ತದೆ.

ಹಝ್ರತ್ ಇಮಾಮ್ ಮುಹಿಯುದ್ದೀನ್ ಇಬ್ನೆ ಅರಬಿ ರೆಹ್ಮತುಲ್ಲಾಹ್ ಅಲೈಹ್ ಹೇಳುತ್ತಾರೆ: "ಕೊನೆಯ ಕಾಲಘಟ್ಟದಲ್ಲಿ ಬರುವ ಇಮಾಮ್ ಮಹದಿಯು ಶರೀಅತ್ ನಿಯಮಗಳಲ್ಲಿ ಹಝ್ರತ್ ಪೈಗಂಬರ್(ಸ.ಅ) ಅವರಿಗೆ ಒಳಪಟ್ಟಿರುತ್ತಾರೆ ಮತ್ತು ದೈವಜ್ಞಾನ, ಜ್ಞಾನ ಮತ್ತು ಸತ್ಯಾಂಶದಲ್ಲಿ ಅವರನ್ನು ಹೊರತುಪಡಿಸಿ ಪ್ರವಾದಿಗಳು ಮತ್ತು ಸಂತರು ಎಲ್ಲರು ಅವರ ಅಧೀನರಾಗಿರುತ್ತಾರೆ.... ಏಕೆಂದರೆ ಇಮಾಮ್ ಮಹದಿ ಅವರ ಅಂತರಂಗವು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರ ಅಂತರಂಗವಾಗಿರುತ್ತದೆ."

(ಶರಹ್ ಫುಸೂಸುಲ್ ಹಕಮ್, ಅಝ್ಝಾಹಿರ್ ಮಿಸ್‌ರಿಯಾ, ಪುಟ–51)

## ಉಮ್ಮತೆ ಮುಹಮ್ಮದಿಯಾದಲ್ಲಿ ಆಗಮಿಸಬೇಕಾದ ಮಸೀಹ್ ಮೌಊದ್ ಅವರಲ್ಲಿ ಸಯ್ಯಿದುಲ್ ಮುರ್‌ಸಲೀನ್(ಸ) ಅವರ ದಿವ್ಯ ಪ್ರಕಾಶದ ಪ್ರತಿಬಿಂಬವಿರುತ್ತದೆ

**ಹಝ್ರತ್ ಶಾ ವಲಿಯುಲ್ಲಾ ಮುಹದ್ದಿಸ್ ದೆಹಲವಿ ರೆಹ್ಮತುಲ್ಲಾಹ್ ಅಲೈಹ್ (1114 ರಿಂದ 1175 ಹಿಜ್ರಿ) ನುಡಿಯುತ್ತಾರೆ:**

"ಉಮ್ಮತೆ ಮುಹಮ್ಮದಿಯಾದಲ್ಲಿ ಆಗಮಿಸಬೇಕಾದ ಮಸೀಹ್ ಮೌಊದ್ ಅವರಲ್ಲಿ ಸಯ್ಯಿದುಲ್ ಮುರ್‌ಸಲೀನ್(ಸ) ಅವರ ದಿವ್ಯ ಪ್ರಕಾಶವು ಪ್ರತಿಬಿಂಬಿಸುವ ಹಕ್ಕಿದೆ. ಮಸೀಹ್ ಮೌಊದ್ ಜಗತ್ತಿಗೆ ಆಗಮಿಸಿದಾಗ ಅವರ ಸ್ಥಾನಮಾನವು ಕೇವಲ ಉಮ್ಮತಿಯಾಗಿರುವುದು ಎಂದು ಸಾಮಾನ್ಯ ಜನರು ಭಾವಿಸುತ್ತಾರೆ, ಆದರೆ ಇದು ಹಾಗಲ್ಲ, ಬದಲಿಗೆ ಅವರು ಮುಹಮ್ಮದ್ ಹೆಸರಿನಲ್ಲಿರುವ ಸಂಪೂರ್ಣ ಗುಣಗಳನ್ನು ಹೊಂದಿರುವರು ಮತ್ತು ಅದು ಇನ್ನೊಂದು ಆವೃತ್ತಿಯಾಗಿರುವುದು. ಆದ್ದರಿಂದ ಅವನ ಮತ್ತು ಸಾಮಾನ್ಯ ಉಮ್ಮತಿಯ ನಡುವೆ ಬಹಳ ವ್ಯತ್ಯಾಸವಿದೆ."

(ಅಲ್‌ಖೈರುಲ್ ಕಸೀರ್, ಹಝ್ರತ್ ಶಾ ವಲಿಯುಲ್ಲಾಹ್ ಮುಹದ್ದಿಸ್ ದೆಹ್ಲವಿ, ಪುಟ–72, ಮದೀನಾ ಪ್ರೆಸ್ ಬಿಜ್ನೂರ್)

## ಎಲ್ಲಾ ಪ್ರವಾದಿಗಳೊಂದಿಗೆ ಇಮಾಮ್ ಮಹದಿಯ ಸಂಬಂಧ:

**ಹಝ್ರತ್ ಇಮಾಮ್ ಬಾಕಿರ್ ಅಲೈಹಿಸ್ಸಲಾಮ್ (51 ರಿಂದ 114 ಹಿಜ್ರಿ) ಹೇಳುತ್ತಾರೆ:**

"ಇಮಾಮ್ ಮಹದಿ ಬಂದಾಗ ಅವರು ಹೀಗೆ ಘೋಷಣೆ ಮಾಡುವರು. ಓ ಜನರೇ ! ಯಾರಾದರು ಇಬ್ರಾಹೀಮ್(ಅ) ಮತ್ತು ಇಸ್ಮಾಯೀಲ್(ಅ) ರನ್ನು ನೋಡಲು ಬಯಸಿದರೆ, ಆಲಿಸಿರಿ, ನಾನೇ ಆ ಇಬ್ರಾಹೀಮ್ ಮತ್ತು ಇಸ್ಮಾಯೀಲ್ ಆಗಿರುವೆನು. ನಿಮ್ಮ ಪೈಕಿ ಯಾರಾದರೂ ಮೋಶೆ (ಮೂಸಾ) ಮತ್ತು ಯಹೋಶೂರವರನ್ನು ನೊಡಲು ಬಯಸಿದರೆ, ಆ ಮೋಶೆ ಮತ್ತು ಯಹೋಶರವನು ನಾನೇ ಆಗಿದ್ದೇನೆ. ನಿಮ್ಮ ಪೈಕಿ ಯಾರಾದರು ಯೇಸು ಮತ್ತು ಸೈಮನ್ ಅನ್ನು ನೋಡಲು ಬಯಸಿದರೆ, ಆ ಯೇಸು ಮತ್ತು ಸೈಮನ್ ನಾನೇ ಆಗಿದ್ದೇನೆ. ನಿಮ್ಮ ಪೈಕಿ ಯಾರಾದರೂ ಮುಹಮ್ಮದ್ ಮುಸ್ತಫಾ(ಸ) ಮತ್ತು ಅಮಿರುಲ್ ಯುಮಿನೀನ್(ಅಲಿ) ರನ್ನು ನೋಡಲು ಬಯಸಿದರೆ, ಆಲಿಸಿರಿ. ಆ ಮುಹಮ್ಮದ್ ಮುಸ್ತಫಾ(ಸ) ಮತ್ತು ಅಮೀರುಲ್ ಮುಮಿನೀನ್ ನಾನೇ ಆಗಿದ್ದೇನೆ."

(ಬಹಾರುಲ್ ಅನ್ವಾರ್, ಸಂಪುಟ–43, ಪುಟ–202)

## ಕನ್ನಡ ವಾರಪತ್ರಿಕೆ ಬದರ್ "ಮಸೀಹ್ ಮೌಊದ್(ಅ) ವಿಶೇಷ ಸಂಚಿಕೆ"

ವಿಷಯ ಸೂಚಿಕೆ


| | ವಿಷಯ | ಪುಟ |
|---|---|---|
| * | ಉಮ್ಮತ್ತಿನ ಹಿರಿಯರ ದೃಷ್ಟಿಯಲ್ಲಿ ಹಝ್ರತ್ ಇಮಾಮ್ ಮಹದಿ ಮತ್ತು ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮ್ ಅವರ ಸ್ಥಾನಮಾನ | 1 |
| * | ವಿಷಯ ಸೂಚಿಕೆ ಮತ್ತು ಸಂಪಾದಕೀಯ | 2 |
| * | ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅತಬಅ)ರವರ ಖುತ್‌ಬ ಜುಮುಅ | 3 |
| * | ಪವಿತ್ರ ಖುರ್‌ಆನ್‌ನ ಬೆಳಕಿನಲ್ಲಿ ಹಝ್ರತ್ ಮಾಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವನಚರಿತ್ರೆ | 10 |
| * | ದೈವಿಕ ಅನುಗ್ರಹಗಳ ಅವತರಣಿಕೆ ಮತ್ತು ಅಹ್ಮದಿಯಾ ಜಮಾಅತ್ತಿನ ಪ್ರಗತಿಗಳು | 15 |
| * | ಷರತ್ತು ಅನ್ವಯ ಚಂದಾದ ಪ್ರಾಮುಖ್ಯತೆ ಹಾಗೂ ನಿಝಾಮೆ ವಸಿಯ್ಯತ್ತಿನ ಅನುಗ್ರಹಗಳು | 20 |


# ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ವ ಮಹದಿ ಮೌಊದ್ ಅಲೈಹಿಸ್ಸಲಾಮ್ ಅವರ ಮಹೋನ್ನತವಾದ ಸ್ಥಾನಮಾನ

ಪವಿತ್ರ ಖುರ್‌ಆನ್, ಹದೀಸ್ ಮತ್ತು ಗತಕಾಲ ಪುಸ್ತಕಗಳ ಭವಿಷ್ಯವಾಣಿಯ ಪ್ರಕಾರ, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಇಮಾಮ್ ಮಹ್ದಿ ಮತ್ತು ವಾಗ್ದಾತ್ತ ಮಸೀಹ್ ಎಂದು ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಕಳುಹಿಸಿದನು, ಇದು ಅತ್ಯಂತ ಅಂಧಕಾರಮಯ ಮತ್ತು ಅವಿಶ್ವಾಸ ಹಾಗೂ ಅಧರ್ಮದ ಕಾಲವಾಗಿತ್ತು. ನಿಮ್ಮ ಮಹಾನ್ ಧ್ಯೇಯವನ್ನು ಪವಿತ್ರ ಖುರ್‌ಆನ್ ಈ ಪದಗಳಲ್ಲಿ ವಿವರಿಸಿದೆ:

**ಲಿಯುಝ್‌ಹಿರಹು ಅಲದ್ದೀನಿ ಕಿಲ್ಲಿಹೀ** (ಸೂರತ್ ಅಲ್–ಸಾಫ್) ಎಂದರೆ ಇಸ್ಲಾಂ ಧರ್ಮವು ಪ್ರಪಂಚದ ಎಲ್ಲಾ ಧರ್ಮಗಳ ಮೇಲೆ ಮೇಲುಗೈ ಸಾಧಿಸುವಂತೆ ಮಾಡುವುದು. ಮತ್ತು ಹಝ್ರತ್ ಪೈಗಂಬರ್(ಸ)ರವರು ಈ ಪದಗಳಲ್ಲಿ ಅವರ ಮಹಾನ್ ಧ್ಯೇಯವನ್ನು ವಿವರಿಸಿದ್ದಾರೆ:

**ಲೌಕಾನಲ್ ಈಮಾನು ಇಂದಸ್ಸುರೈಯ ಲನಾಲಹೂ ರಜುಲುನ್ ಔ ರಿಜಾಲುನ್ ಮಿನ್ ಹಾಉಲಾಇ**

ಅಂದರೆ: ಈಮಾನ್ (ವಿಶ್ವಾಸವು) ಸುರಯ್ಯಾ (ಕೃತ್ತಿಕಾ) ನಕ್ಷತ್ರಕ್ಕೆ ಹೋಗಿದ್ದರೆ, ಇಮಾಮ್ ಮಹದಿ ಅದನ್ನು ಮತ್ತೆ ಭೂಮಿಯ ಮೇಲೆ ಸ್ಥಾಪಿಸುತ್ತಾರೆ. ಮೇಲಿನ ಆಯತ್ ಮತ್ತು ಹದೀಸ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮಹೋನ್ನತವಾದ್ದ ಸ್ಥಾನಮಾನವನ್ನು ಸೂಚಿಸುತ್ತದೆ. ಇಡೀ ಪ್ರಪಂಚದ ಆಲೋಚನೆಗಳನ್ನು ಬದಲಾಯಿಸುವುದಕ್ಕಿಂತ ಒಬ್ಬ ವ್ಯಕ್ತಿಯ ಆಲೋಚನೆಗಳನ್ನು ಸಹ ಬದಲಾಯಿಸುವುದು ಬಹಳ ಕಷ್ಟದ ಕೆಲಸವಾಗಿದೆ. ಆದರೆ ಇಸ್ಲಾಂ ಧರ್ಮದ ದೇವರು ಏನನ್ನಾದರೂ ಉದ್ದೇಶಿಸಿದಾಗ, ಅದನ್ನು ಮಾಡಲಾಗುತ್ತದೆ. ಅವನಿಗೆ ಏನೂ ಕಷ್ಟವಿಲ್ಲ. ಅಲ್ಪಾವಧಿಯಲ್ಲಿ ಇಸ್ಲಾಂ ಧರ್ಮವನ್ನು ಪ್ರಪಂಚದಾದ್ಯಂತ ಹರಡಿದವನಿಗೆ ಇನ್ನೂ ಸಹ ಪ್ರಪಂಚದ ದೃಷ್ಟಿಕೋನಗಳನ್ನು ಬದಲಾಯಿಸುವ ಶಕ್ತಿ ಇದೆ. ಅಲ್ಲಾನು ಬಯಸಿದರೆ, ಅವನು ಏಕದೇವತೆಯ ಗಾಳಿಯನ್ನು ಇಡೀ ವಿಶ್ವದಲ್ಲಿ, ಬ್ರಹ್ಮಾಂಡದ ಮೂಲೆ ಮೂಲೆಗಳಲ್ಲಿ ಹರಡಬಹುದು. ಅವನು ಬಯಸಿದರೆ, ಪ್ರತಿ ಹೃದಯ ಮತ್ತು ಪ್ರತಿ ಪ್ರಕೃತಿಯಲ್ಲಿ ಹುದುಗಿರುವ ಏಕದೇವೋಪಾಸನೆಯ ತಂತಿಯನ್ನು ಅಲ್ಲಾಡಿಸುವ ಮೂಲಕ ತನ್ನ ಪ್ರೀತಿಯಲ್ಲಿ, ಸೃಷ್ಟಿಕರ್ತ ಮತ್ತು ಭಗವಂತನ ಪ್ರೀತಿಯಲ್ಲಿ ಮನುಕುಲವನ್ನು ಬಂಧಿಸಬಹುದು, ಇದರಿಂದ ಅವರು ಹುಚ್ಚುಚ್ಚಾಗಿ ಓಡಿ ಅವನ ಆಶ್ರಯದಲ್ಲಿ ಬೀಳುತ್ತಾರೆ. ಇಸ್ಲಾಮಿನ ದೇವರಲ್ಲಿ, ಹೌದು, ಇಸ್ಲಾಂನ ದೇವರಲ್ಲಿ ಮಾತ್ರ, ಈ ಶಕ್ತಿ ಇದೆ ಮತ್ತು ಅವನು ಎಲ್ಲದರ ಸರ್ವಶಕ್ತ. **ವಹುವ ಅಲಾಕುಲ್ಲಿ ಶೈಯಿನ್ ಖದೀರ್**.

ಮತ್ತು ಇದಕ್ಕಾಗಿ, ಅಂದರೆ, ಇಡೀ ಜಗತ್ತಿನಲ್ಲಿ ಇಸ್ಲಾಂ ಧರ್ಮದ ಪ್ರಾಬಲ್ಯದ ಧ್ಯೇಯವನ್ನು ಪೂರ್ಣಗೊಳಿಸಲು, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಮತ್ತು ಮಹದಿ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಕಳುಹಿಸಿದನು. ನೀವು(ಅ) ಅದಕ್ಕಾಗಿ ಬೀಜವನ್ನು ಬಿತ್ತಿದ್ದೀರಿ, ಈ ಸಸ್ಯವು ಈಗ ಬೆಳೆಯುತ್ತಿದೆ, ಅರಳುತ್ತಿದೆ ಮತ್ತು ಅದರ ಶಾಖೆಗಳು ಪ್ರಪಂಚದ ಇನ್ನೂರಕ್ಕೂ ಹೆಚ್ಚು ದೇಶಗಳಲ್ಲಿ ಹರಡಿಕೊಂಡಿವೆ, ಅಲ್‌ಹಮ್‌ದುಲಿಲ್ಲಾಹ್. ಹಝ್ರತ್ ಮಸೀಹ್ ಮೌಊದ್(ಅ) ಅವರ ಆಗಮನ ಮತ್ತು ನಿಮ್ಮ(ಅ)ರ ಮೇಲೆ ವಿಶ್ವಾಸ ಇಡುವುದರ ಪ್ರಾಮುಖ್ಯತೆಯ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕೆಲವು ಉಪದೇಶಗಳು ಕೆಳಗೆ ನೀಡಲಾಗಿದೆ. ಸೈಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

ಇಸ್ಲಾಮಿಕ್ ನಂಬಿಕೆಗಳು ಭಿನ್ನಾಭಿಪ್ರಾಯಗಳಿಂದ ತುಂಬಿರುವಂತಹ ಸಮಯದಲ್ಲಿ ನಾನು ಆಗಮಿಸಿದ್ದೇನೆ ಮತ್ತು ಯಾವುದೇ ನಂಬಿಕೆಯು ಭಿನ್ನಾಭಿಪ್ರಾಯಗಳಿಂದ ಮುಕ್ತವಾಗಿರಲಿಲ್ಲ ... ನನ್ನ ಸತ್ಯಕ್ಕೆ ಬೇರೆ ಯಾವುದೇ ಪುರಾವೆಯನ್ನು ಪ್ರಸ್ತುತಪಡಿಸುವ ಅಗತ್ಯವಿಲ್ಲ ಏಕೆಂದರೆ ಅವಶ್ಯಕತೆಯೇ ಪುರಾವೆಯಾಗಿದೆ. (ಝುರೂರತುಲ್ ಇಮಾಮ್, ರುಹಾನಿ ಖಝಾಇನ್, ಸಂಪುಟ–13, ಪುಟ–495)

ಅವರು ಅಲೈಹಿಸ್ಸಲಾಮ್ ಹೇಳಿದರು:

ಸರ್ವಶಕ್ತನಾದ ಅಲ್ಲಾಹನು, ಈ ಯುಗವನ್ನು ಕತ್ತಲೆಯಾಗಿ ಕಂಡು ಮತ್ತು ಜಗತ್ತು ನಿರ್ಲಕ್ಷ್ಯ, ಅಪನಂಬಿಕೆ ಮತ್ತು ಬಹುದೇವತೆಗಳಲ್ಲಿ ಮುಳುಗುತ್ತಿರುವುದನ್ನು ನೋಡಿ, ನಂಬಿಕೆ, ಪ್ರಾಮಾಣಿಕತೆ, ಧರ್ಮನಿಷ್ಠೆ ಮತ್ತು ಸದಾಚಾರಗಳು ಕಣ್ಮರೆಯಾಗುತ್ತಿರುವುದನ್ನು ನೋಡಿ, ಅವನು ಪುನಃ ಜಗತ್ತಿನಲ್ಲಿ ಜ್ಞಾನದರೂಪದಲ್ಲಿ, ಪ್ರಾಯೋಗಿಕರೂಪದಲ್ಲಿ ಮತ್ತು ನೈತಿಕತೆ ಧಾರ್ಮಿಕ ಸತ್ಯತೆಯನ್ನು ಸ್ಥಾಪಿಸಲು ನನ್ನನ್ನು ಕಳುಹಿಸಿದ್ದಾನೆ. ( ಆ ಇ ನ ಾ ಕಂಆಲಾತ್ ಇಸ್ಲಾಂ, ರುಹಾನಿ ಖಝಾಇನ್, ಸಂಪುಟ–5, ಪುಟ–251)

ಅವರು(ಅ) ಹೇಳಿದರು: ನಾನು ಭೂಮಿಯ ಮೇಲೆ ವಾಸಿಸುವ ಎಲ್ಲಾ ಜನರಿಗಾಗಿ ಕಳುಹಿಸಲ್ಪಟ್ಟಿದ್ದೇನೆ. ಅವರು ಏಷ್ಯಾ ನಿವಾಸಿಗಳಾಗಿರಬಹುದು ಅಥವಾ ಅವರು ಯೂರೋಪ್ ಅಥವಾ ಅಮೆರಿಕದವರಾಗಲಿ ಎಲ್ಲರಿಗೂ ಕಳುಹಿಸಲ್ಪಟ್ಟಿದ್ದೇನೆ. (ತಿರ್ಯಾಖುಲ್ ಖುಲೂಬ್, ರೂಹಾನಿ ಖಝಾಇನ್, ಸಂಪುಟ–15, ಪುಟ–515)

ಅದೇ ರೀತಿ ಅವರು(ಅ) ಒಂದೆಡೆ ಹೇಳುತ್ತಾರೆ: ನೀವು ಸತ್ಯವಿಶ್ವಾಸಿಗಳಾಗಿದ್ದರೆ ಕೃತಜ್ಞತೆ ಅರ್ಪಿಸಿರಿ ಮತ್ತು ಕೃತಜ್ಞತೆಯರ್ಪಿಸುವ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿರಿ. ಯಾವ ಕಾಲವನ್ನು ಪ್ರತೀಕ್ಷಸುತ್ತಾ ನಿಮ್ಮ ಹಿರಿಯರು ತಂದೆ ತಾತಂದಿರು ಗತಿಸಿ ಹೋದರೋ ಅಂಖ್ಯಾತ ಆತ್ಮಗಳು ಈ ಅಭಿಲಾಷೆಯನ್ನು ಹೊಂದಿದ್ದು ಪರಲೋಕವಾಸಿಗಳಾದರೋ ಅಮತಹ ಮಹತ್ವ ಪೂರ್ಣವಾಯವನ್ನು ನೀವುಗಳಿಸಿದಿರಿ. ಅದಕ್ಕೆ ಮಹತ್ವ ಸೀಡುವುದು ನೀಡದೆ ಇರುವುದು. ಅದರಿಂದ ಲಾಭ ಪಡೆಯುವುದು ಲಾಭ ಪಡೆಯದೆ ಇರುವುದು ನಿಮ್ಮ ಕೈಯಲ್ಲಿದೆ. ನಾನು ಪದೇ ಪದೇ ಹೇಳುತ್ತೇನೆ. ಇದನ್ನು ಪ್ರಕಟಿಸದೆ ಇರಲಾರೆ. ನಾನು ಮನುಷ್ಯನ ಸುಧಾರಣೆಗೋಸ್ಕರ ಕಳುಹಿಸಲ್ಪಟ್ಟವನಾಗಿದ್ದೇನೆ. ಧರ್ಮವನ್ನು ಪುನಶ್ಚೇತನ ಮಾಡಿ ಜನರ ಹೃದಯಗಳಲ್ಲಿ ಸ್ಥಾಪಿಸಲಿಕ್ಕೋಸ್ಕರ ನಾನು ಕಳುಹಿಸಲ್ಪಟ್ಟಿರುವೆನು. (ಫತಹ್ ಇಸ್ಲಾಂ, ರೂಹಾನಿ ಖಝಾಇನ್, ಸಂಪುಟ–3, ಪುಟ–8)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ಉಪದೇಶವು ನಮಗೆ ಹಝ್ರತ್ ಮಸೀಹ್ ಮೌಊದ್(ಅ) ಅವರ ಕಾಲಘಟ್ಟವನ್ನು ನಾವು ಪಡೆದುಕೊಂಡಿದ್ದೇವೆ ಎಂದು ಚಿಂತನೆಗೆ ಒಳಪಡಿಸುತ್ತದೆ, ಈ ಮಹಾನ್ ಧಯೆಯಕ್ಕಾಗಿ ಮತ್ತು ಮಹಾ ಸರಪಳಿಯ ಅಭಿವೃದ್ಧಿ ಹಾಗೂ ಪ್ರಕಟಣೆಗಾಗಿ ನಾವು ಸಂಪೂರ್ಣ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಅಥವಾ ಇಲ್ಲವೇ? ಅಥವಾ ಛಂದದಲ್ಲಿ ಸ್ವಲ್ಪ ಹಣವನ್ನು ಪಾವತಿಸುವ ಮೂಲಕ, ನಾವು ನಮ್ಮನ್ನು ಎಲ್ಲಾ ಜವಾಬ್ದಾರಿಗಳಿಂದ ಮುಕ್ತಗೊಳಿಸುತ್ತಿದ್ದೇವೆ ಎಂದು ಭಾವಿಸುತ್ತಿದ್ದೇವೆಯೇ. ಸಯ್ಯಿದುನಾ ಹಝ್ರತ್ ಮಾಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಶ್ರೇಷ್ಠ ಸ್ಥಾನಮಾನಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ಕೆಳಗೆ ನೀಡಲಾಗಿದೆ.

ಸುರಾ ಜುಮುಆದಲ್ಲಿ, **ಆಖರೀನ ಮಿನ್‌ಹುಮ್** ಪದಗಳಲ್ಲಿ, ಪ್ರವಾದಿ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಪುನಃ ಆಗಮನದ ಭವಿಷ್ಯವಾಣಿ ಇದೆ ಅವರು ವಾಸ್ತವವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಿದ್ದಾರೆ. ಅಂದರೆ, ನಿಮ್ಮ ಅಲೈಹಿಸ್ಸಲಾಮ್ ಅವರ ಆಗಮನವು ಸಾದೃಶ್ಯರೂಪದಲ್ಲಿ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಆಗಮನವಾಗಿದೆ. ನಿಮ್ಮ(ಅ)ರ ಆಗಮನವು ಮುಹಮ್ಮದ್ ಮುಸ್ತಫಾ(ಸ) ಅವರ ಆಗಮನವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನಾನು ಪದೇ ಪದೇ ಹೇಳಿರುವೆನು **ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್** ಅವರೊಂದಿಗೆ ಇಷ್ಟರವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ (ಪವಿತ್ರ ಖುರ್‌ಆನ್ 12:4) ಎಂಬ ಪವಿತ್ರ ಖುರ್‌ಆನ್ ವಚನದ ಪ್ರಕಾರ ನಾನು ಬರೂಝೀ (ತದ್ರೂಪ) ಪ್ರಕಾರ ಅದೇ ಖಾತಮುಲ್ ಅಂಬಿಯಾ ಆಗಿರುವೆನು. ಇಂದಿನಿಂದ ಇಪ್ಪತ್ತು ವರ್ಷಗಳ ಹಿಂದೆ ಬರಾಹೀನೆ ಅಹ್ಮದಿಯಾದಲ್ಲಿ ನನ್ನ ಹೆಸರು ಮುಹಮ್ಮದ್ ಮತ್ತು ಅಹ್ಮದ್ ಎಂದು ಅಲ್ಲಾಹನು ಇರಿಸಿದ್ದಾನೆ. ನನ್ನನ್ನು ಹಝ್ರತ್ ಮುಹಮ್ಮದ್

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಆ ಪರಿಶುದ್ಧ ಮನುಷ್ಯ(ಸ) ಅವರ ಕಿವಿಗಳಲ್ಲಿ ಹುಬುಲಿನ ಜೈಕಾರದ ಶಬ್ದ ಕೇಳಿ ಬಂದಾಗ ಅವರ ಏಕದೇವ ವಿಶ್ವಾಸದ ಭಾವನೆ ಆವೇಶಭರಿತಗೊಂಡಿತು. ಏಕೆಂದರೆ ಈಗ ಇಲ್ಲಿ ವಿಷಯ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರದ್ದು ಆಗಿರಲಿಲ್ಲ, ಈಗ ವಿಷಯ ಅಬೂಬಕರ್(ರ) ಮತ್ತು ಉಮರ್(ರ)ರದ್ದು ಆಗಿರಲಿಲ್ಲ. ಈಗ ಅಲ್ಲಾಹನ ಗೌರವದ ವಿಷಯವಾಗಿತ್ತು. ಹಝ್ರತ್ ಪೈಗಂಬರ್(ಸ) ಬಹಳ ಆವೇಶದಿಂದ ಹೇಳಿದರು: ನೀವೇಕೆ ಉತ್ತರಿಸುತ್ತಿಲ್ಲ? ನಾವು ಹೇಗೆ ಉತ್ತರಿಸಬೇಕು ಎಂದು ಸಹಾಬಿಯರು ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇಳಿರಿ, **ಅಲ್ಲಾಹು ಅಝ್ಝು ವ ಜಲ್ಲ್** – ಅಲ್ಲಾಹನು ಆದರಣೀಯನೂ ವೈಭವಶಾಲಿಯೂ ಆಗಿದ್ದಾನೆ. ಹುಬುಲ್ ಏನೂ ಅಲ್ಲ. ಅಲ್ಲಾಹನ ಮಹಿಮೆ ಅತ್ಯುನ್ನತವಾಗಿದೆ. ಅಲ್ಲಾಹನ ವೈಭವ ಉನ್ನತ ಮಟ್ಟದ್ದಾಗಿದೆ.

ಅಲ್ಲಾಹನು ನಮ್ಮೊಳಗೂ ಪ್ರವಾದಿ ಪ್ರೇಮದ ಈ ಸ್ಫೂರ್ತಿಯನ್ನು ಉಂಟುಮಾಡಲಿ. ಈ ಒಂದು ಯೋಚನೆ ಇದ್ದರೆ ಅಲ್ಲಾಹನೊಂದಿಗೆ ಇರುವ ನಮ್ಮ ಸಂಬಂಧವೂ ಸುದೃಢವಾಗುವುದು ಹಾಗೂ ನಮ್ಮ ಆರಾಧನೆಗಳಲ್ಲಿ, ನಮ್ಮ ನೈತಿಕಗುಣಗಳಲ್ಲಿ ಮತ್ತು ನಮ್ಮ ನಡವಳಿಕೆಗಳಲ್ಲಿ ಸರಿಯಾದ ಇಸ್ಲಾಮಿನ ರೂಪವನ್ನು ಉಂಟುಮಾಡಲಿಕ್ಕಾಗಿ ನಮ್ಮ ದೌರ್ಬಲ್ಯಗಳನ್ನು ದೂರಮಾಡಲು ಕೂಡ ನಿಜವಾಗಿಯೂ ಪ್ರಯತ್ನಿಸುವವರಾಗುವೆವು. ಅಲ್ಲಾಹನು ನಮಗೆ ತೌಫೀಕ್ ನೀಡಲಿ.

## ಉಹುದ್ ಯುದ್ಧದಲ್ಲಿ ಸಹಾಬಿಗಳ ಜೀವಬಲಿದಾನದ ವಿವರಾತ್ಮಕ ಪ್ರಸ್ತಾವನೆ

ಯೆಮನ್‌ನ ಮೊದಲ ಶಹೀದ್ ಮಕರ್ರಮ್ ಡಾ॥ ಮನ್ಸೂರ್ ಶುಬೂತಿ ಸಾಹಿಬ್, ಮುಕರ್ರಮ್ ಸಲಾಹುದ್ದೀನ್ ಮುಹಮ್ಮದ್ ಸಾಲೆಹ್ ಅಬ್ದುಲ್ ಖದೀರ್ ಸಾಹಿಬ್ ಆಫ್ ಕಬಾಬೀರ್ ಮತ್ತು ಮುಕರ್ರಮಾ ರೀಹಾನಾ ಫರ್ಹತ್ ಸಾಹಿಬಾ ಆಫ್ ರಬ್ವಾ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09-02-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ ۔ بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಉಹುದ್ ಯುದ್ಧಕ್ಕೆ ಸಂಬಂಧಪಟ್ಟು ಅಬೂಸುಫ್‌ಯಾನಿನ ಜೈಕಾರದ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಅದರಲ್ಲಿ ಆತನು ತನ್ನ ಮೂರ್ತಿಗಳ ದೊಡ್ಡತನವನ್ನು ಹೇಳುತ್ತಿದ್ದನು ಮತ್ತು ಅದನ್ನು ಆಲಿಸಿ ಹಝ್ರತ್ ಪೈಗಂಬರ್(ಸ) ಅಲ್ಲಾಹನಿಗಾಗಿ ತನ್ನ ಧರ್ಮಾಭಿಮಾನವನ್ನು ಪ್ರಕಟಿಸಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹದೀಸುಗಳಲ್ಲಿ ಈ ರೀತಿ ವರದಿಗಳು ಬಂದಿವೆ. ಉಹುದ್ ಯುದ್ಧದಲ್ಲಿ ಅಬೂಸುಫ್‌ಯಾನ್ ಬಹಳ ಜೋರಾಗಿ ಹೀಗೆ ಹೇಳಿದನು: ನಮ್ಮ ನೆರವಿಗಾಗಿ ನಮ್ಮ ಉಝ್ಝಾ ಮೂರ್ತಿ ಇದೆ. ಆದರೆ ನಿಮ್ಮ ನೆರವಿಗಾಗಿ ಯಾವುದೇ ಮೂರ್ತಿಯಿಲ್ಲ. ಆಗ ಹಝ್ರತ್ ಪೈಗಂಬರ್(ಸ) ಮುಸ್ಲಿಮರೊಡನೆ ಹೇಳಿದರು: ನೀವು ಹೇಳಿರಿ – **ಲನಾ ಮೌಲಾ, ವಲಾ ಮೌಲಾ ಲಕುಮ್**. ನಮ್ಮ ಮಾಲಿಕ ಮತ್ತು ನಮ್ಮ ಸಹಾಯಕ ಅಲ್ಲಾಹನಾಗಿದ್ದಾನೆ. ಅವನು ಜೀವಂತನು ಮತ್ತು ಎಲ್ಲರನ್ನೂ ನೆಲೆನಿಲ್ಲಿಸುವವನು. ಆದರೆ ನಿಮಗೆ ಯಾವುದೇ ಯಜಮಾನ ಅಥವಾ ಸಹಾಯಕನಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇದು ಸತ್ಯತೆಗೆ ಎಂತಹ ಕೃತಿರೂಪದ ಪುರಾವೆಯಾಗಿದೆ! ಖಡ್ಗಗಳ ನೆರಳಿನಲ್ಲೂ "ನಮ್ಮನ್ನು ಅಲ್ಲಾಹನು ರಕ್ಷಿಸಬಲ್ಲನು" ಎಂದು ಅವರು ಹೇಳಿದರು.

(ತಫ್ಸೀರೆ ಕಬೀರ್, ಸಂಪುಟ-2, ಪುಟ-660, 2004)

ಮತ್ತೊಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಶಹೀದ್ ಆದರು ಎಂಬ ಮಾತು ಮುಸ್ಲಿಮರ ಕಿವಿಗಳಿಗೆ ಮುಟ್ಟಿದಾಗ ಅವರು ಬೇಗ ಬೇಗನೇ ಮರಳಿ ಹೋದರು. ಅವರು ಹಝ್ರತ್ ಪೈಗಂಬರ್(ಸ)ರ ಮೇಲಿನಿಂದ ಮೃತದೇಹಗಳನ್ನು ನೀಗಿಸಿದಾಗ ಹಝ್ರತ್ ಪೈಗಂಬರ್(ಸ) ಜೀವಂತರಾಗಿರುವರು ಎಂದು ಅವರಿಗೆ ಗೊತ್ತಾಯಿತು. ಆ ವೇಳೆ ಒಬ್ಬ ಸಹಾಬಿ ತನ್ನ ಹಲ್ಲುಗಳಿಂದ ಹಝ್ರತ್ ಪೈಗಂಬರ್(ಸ)ರ ಮುಖಕವಚದ ಕಂಬಿಯನ್ನು ಹೊರತೆಗೆದರು. ಆಗ ಅವರ ಎರಡು ಹಲ್ಲುಗಳು ಮುರಿದುಹೋದುವು. ನಂತರ ಅವರ(ಸ) ಮುಖಕ್ಕೆ ನೀರು ಚಿಮುಕಿಸಿದಾಗ ಅವರಿಗೆ ಪ್ರಜ್ಞೆ ಬಂದಿತ್ತು. ಹೆಚ್ಚಿನ ಸಹಾಬಿಯವರು ಚದುರಿಹೋಗಿದ್ದರು ಕೆಲವೇ ಸಹಾಬರವರ ಗುಂಪು ನಿಮ್ಮ(ಸ)ರ ಬಳಿ ಉಳಿದಿದ್ದರು. ನಾವು ಈಗ ಪರ್ವತದ ಬುಡಕ್ಕೆ ಹೋಗೋಣ ಎಂದು ಹಝ್ರತ್ ಪೈಗಂಬರ್(ಸ)ರು ಹೇಳಿದರು. ಹಾಗಾಗಿ ಹಝ್ರತ್ ಪೈಗಂಬರ್(ಸ) ಅವರನ್ನು ಕರೆದುಕೊಂಡು ಪರ್ವತದ ಬುಡಕ್ಕೆ ಕರೆದುಕೊಂಡು ಹೋದರು ಮತ್ತು ನಂತರ ಉಳಿದ ಸೈನ್ಯವೂ ನಿಧಾನವಾಗಿ ಸೇರಲು ಪ್ರಾರಂಭಿಸಿತು. ಅವಿಶ್ವಾಸಿಗಳ ಸೈನ್ಯ ಹಿಂತಿರುಗುತ್ತಿದ್ದಾಗ ಅಬುಸುಫ್ಯಾನ್ ಜೋರಾಗಿ ಹಝ್ರತ್ ಪೈಗಂಬರ್(ಸ)ರ ಹೆಸರನ್ನು ಕರೆದು, ನಾವು ಅವರನ್ನು ವಧಿಸಿದ್ದೇವೆ ಎಂದು ಹೇಳಿದನು. ಸಹಾಬಿಯವರು ಉತ್ತರಿಸಲು ಬಯಸಿದ್ದರು ಆದರೆ ಹಝ್ರತ್ ಪೈಗಂಬರ್(ಸ)ರು ಅವರನ್ನು ತಡೆದರು. ಅವರು(ಸ) ಹೇಳಿದರು: ಇದು ಸಂದರ್ಭವಲ್ಲ. ನಮ್ಮ ಪುರುಷರು ಚದುರಿಹೋಗಿದ್ದಾರೆ, ಕೆಲವರು ಕೊಲ್ಲಲ್ಪಟ್ಟಿದ್ದಾರೆ ಮತ್ತು ಕೆಲವರು ಗಾಯಗೊಂಡಿದ್ದಾರೆ. ನಾವು ಕೆಲವೇ ಕೆಲವರು ಇಲ್ಲಿದ್ದೇವೆ ಮತ್ತು ಎಲ್ಲರು ಆಯಾಸಗೊಂಡಿದ್ದಾರೆ. ಅವಿಶ್ವಾಸಿಗಳ ಸೈನ್ಯವು ಮೂರು ಸಾವಿರ ಸಂಖ್ಯೆಯಲ್ಲಿದ್ದಾರೆ ಮತ್ತು ಅವರು ಸಂಪೂರ್ಣವಾಗಿ ಸುರಕ್ಷಿತರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಉತ್ತರಿಸುವುದು ಸೂಕ್ತವಲ್ಲ. ಅವರು ನನ್ನನ್ನು ವಧಿಸಿದ್ದಾರೆ ಎಂದು ಹೇಳಿದರೆ ಅವರು ಹಾಗೆ ಹೇಳಲಿ. ಆದ್ದರಿಂದ, ಹಝ್ರತ್ ಪೈಗಂಬರ್(ಸ)ರ ಸೂಚನೆಗಳ ಪ್ರಕಾರ, ಸಹಾಬಿಗಳು ಮೌನವಾಗಿದ್ದರು. ಅಬು ಸುಫ್ಯಾನ್‌ಗೆ ಉತ್ತರ ಸಿಗದಿದ್ದಾಗ, "ನಾವು ಅಬೂಬಕರ್‌ನನ್ನೂ ಸಹ ವಧಿಸಿದ್ದೇವೆ" ಎಂದು ಹೇಳಿದನು. ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಮತ್ತೆ ಉತ್ತರಿಸದಂತೆ ಸಹಾಬಗಳನ್ನು ತಡೆದು, "ಮೌನವಾಗಿರಿ" ಎಂದು ಹೇಳಿದರು. ಅವರು ಹೇಳಿದರೆ ಹೇಳಲಿ. ಸಹಾಬಿಗಳು ಈ ಬಗ್ಗೆಯೂ ಮೌನ ವಹಿಸಿದ್ದರು. ಅಬುಸುಫ್ಯಾನ್ ಯಾವುದೇ ಉತ್ತರವನ್ನು ಪಡೆಯದಿದ್ದಾಗ, "ನಾವು ಉಮರ್ ಅವರನ್ನು ವಧಿಸಿದ್ದೇವೆ" ಎಂದು ಹೇಳಿದನು. ಹಝ್ರತ್ ಉಮರ್(ರ) ಬಹಳ ತೀಕ್ಷ್ಣ ಸ್ವಭಾವದವರಾಗಿದ್ದರು. ಅವರು ಹೇಳಲು ಪ್ರಾರಂಭಿಸಿದರು, ಆದರೆ ಹಝ್ರತ್ ಪೈಗಂಬರ್(ಸ)ರು ಅವರನ್ನು ತಡೆದರು. ನಂತರ ನೀವು ಹೇಳಿದರು," ಹಝ್ರತ್ ಉಮರ್ ನಂತರ ಹೇಳಿದರು, "ಉಮರ್‌ನನ್ನು ನಾವು ವಧಿಸಿದ್ದೇವೆ ಎಂದು ನೀವು ಹೇಳುತ್ತೀರಿ, ಆದರೂ ನಿಮ್ಮ ತಲೆ ಒಡೆಯಲು ಉಮರ್ ಇನ್ನೂ ಜೀವಂತವಾದ್ದಾರೆ." ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಅವರು ಉತ್ತರಿಸುವುದನ್ನು ಸಹ ತಡೆದರು. ಇದಕ್ಕೆ ಯಾವುದೇ ಉತ್ತರ ಬರುತ್ತಿಲ್ಲ ಎಂದು ಕಂಡಾಗ 'ಹುಬುಲ್‌ನ ವೈಭವ ಉನ್ನತಗೊಳ್ಳಲಿ' ಎಂದು ಅಬೂಸುಫ್‌ಯಾನ್ ಜೈಕಾರ ಹಾಕಿದನು. ಮಾತನಾಡುವುದರಿಂದ ಮತ್ತು ಉತ್ತರ ಕೊಡುವುದರಿಂದ ಸಹಾಬಿಯರನ್ನು ಹಝ್ರತ್ ಪೈಗಂಬರ್(ಸ) ತಡೆದಿದ್ದ ಕಾರಣದಿಂದ ಅವರು ಆಗ ಸುಮ್ಮನಿದ್ದರು. ತನ್ನ ಮರಣದ ಬಗ್ಗೆ ಹೇಳಿದಾಗಲೂ, ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ಮರಣದ ಬಗ್ಗೆ ಹೇಳಿದಾಗಲೂ ಸುಮ್ಮನಿರಲು ಹಾಗೂ ಉತ್ತರಿಸದೇ ಇರಲು ಅಲ್ಲಾಹನ ಪ್ರವಾದಿ ಹೇಳಿದ್ದರು. ಈಗ ನಮ್ಮ ಸೇನೆ ಚದುರಿ ಹೋಗಿದೆ ಮತ್ತು ಶತ್ರುಗಳು ಪುನಃ ದಾಳಿ ನಡೆಸಬಹುದಾದ ಅಪಾಯ ಸಾಧ್ಯತೆ ಇದೆ, ಆದ್ದರಿಂದ ಸುಮ್ಮನಿದ್ದು ಆತನ ಮಾತುಗಳನ್ನು ಕೇಳುತ್ತಾ ಹೋಗಿರಿ ಎಂದು ಪುನಃ ಪುನಃ ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರು.

ಆದರೆ ಆ ಪರಿಶುದ್ಧ ಮನುಷ್ಯನ ಕಿವಿಗಳಲ್ಲಿ ಹುಬುಲಿನ ಜೈಕಾರದ ಶಬ್ದ ಕೇಳಿ ಬಂದಾಗ ಅವರ ಏಕದೇವ ವಿಶ್ವಾಸದ ಭಾವನೆ ಆವೇಶಭರಿತಗೊಂಡಿತು. ಏಕೆಂದರೆ ಈಗ ಇಲ್ಲಿ ವಿಷಯ ಮುಹಮ್ಮದ್

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರದ್ದು ಆಗಿರಲಿಲ್ಲ, ಈಗ ವಿಷಯ ಅಬೂಬಕರ್(ರ) ಮತ್ತು ಉಮರ್(ರ)ರದ್ದು ಆಗಿರಲಿಲ್ಲ. ಈಗ ಅಲ್ಲಾಹನ ಗೌರವದ ವಿಷಯವಾಗಿತ್ತು. ಹಝ್ರತ್ ಪೈಗಂಬರ್(ಸ) ಬಹಳ ಆವೇಶದಿಂದ ಹೇಳಿದರು: ನೀವೇಕೆ ಉತ್ತರಿಸುತ್ತಿಲ್ಲ? ನಾವು ಹೇಗೆ ಉತ್ತರಿಸಬೇಕು ಎಂದು ಸಹಾಬಿಯರು ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇಳಿರಿ, **ಅಲ್ಲಾಹು ಅಅ್ಲ್ಲು ವ ಅಜಲ್ಲ್** – ಅಲ್ಲಾಹನು ಆದರಣೀಯನೂ ವೈಭವಶಾಲಿಯೂ ಆಗಿದ್ದಾನೆ. ಹುಬುಲ್ ಏನೂ ಅಲ್ಲ. ಅಲ್ಲಾಹನ ಮಹಿಮೆ ಅತ್ಯುನ್ನತವಾಗಿದೆ. ಅಲ್ಲಾಹನ ವೈಭವ ಉನ್ನತ ಮಟ್ಟದ್ದಾಗಿದೆ.

ಇದು ಹಝ್ರತ್ ಪೈಗಂಬರ್(ಸ)ರಿಗೆ ದೇವನ ಏಕತೆಯ ಬಗ್ಗೆ ಇರುವ ಆವೇಶದ ಎಷ್ಟು ವೈಭವಶಾಲಿ ಪ್ರಕಟಣೆಯಾಗಿದೆ! ಸಹಾಬಿಯರನ್ನು ಉತ್ತರಿಸುವುದರಿಂದ ಹಝ್ರತ್ ಪೈಗಂಬರ್(ಸ) ಮೂರು ಬಾರಿ ತಡೆದಿದ್ದರು. ಅಪಾಯದ ತೀವ್ರತೆ ಬಗ್ಗೆ ಹಝ್ರತ್ ಪೈಗಂಬರ್(ಸ)ರಿಗೆ ಪೂರ್ಣ ಅರಿವು ಇತ್ತು ಎಂದು ಇದರಿಂದ ತಿಳಿದುಬರುತ್ತದೆ. ಇಸ್ಲಾಮಿನ ಸೇನೆ ಚದುರಿಹೋಗಿದೆ ಎಂದೂ ಬಹಳ ಕಡಿಮೆ ಜನರು ಮಾತ್ರ ತನ್ನ ಜೊತೆಗೆ ಇರುವವರು ಎಂದೂ ಅವರಲ್ಲೂ ಬಹುತೇಕ ಸಹಾಬಿಯರು ಗಾಯಾಳು ಆಗಿರುವವರು ಎಂದೂ ಉಳಿದವರೂ ಆಯಾಸಗೊಂಡಿರುವವರು ಎಂದೂ ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಿತ್ತು. ಇಸ್ಲಾಮಿನ ಸೇನೆಯ ಒಂದು ಭಾಗ ಒಟ್ಟುಗೂಡಿದೆ ಎಂದು ಶತ್ರುಗಳಿಗೆ ಗೊತ್ತಾಗಿ ಅವರು ಪುನಃ ದಾಳಿ ನಡೆಸಲು ಧೈರ್ಯ ಪಡದಿರಲಿ ಎಂಬ ಮುನ್ನೆಚ್ಚರಿಕೆಯನ್ನು ಹಝ್ರತ್ ಪೈಗಂಬರ್(ಸ) ವಹಿಸಿಕೊಂಡಿದ್ದರು. ಆದರೆ ಈ ಎಲ್ಲ ಸ್ಥಿತಿಗಳಿದ್ದೂ ಅಲ್ಲಾಹನ ಗೌರವದ ವಿಷಯ ಬಂದಾಗ ಸುಮ್ಮನೆ ಇರುವುದನ್ನು ಹಝ್ರತ್ ಪೈಗಂಬರ್(ಸ) ಸಹಿಸಲಿಲ್ಲ. ಶತ್ರುಗಳಿಗೆ ಗೊತ್ತಾದರೂ ಇಲ್ಲದಿದ್ದರೂ ಅವರು ದಾಳಿ ನಡೆಸಿ ನಮ್ಮನ್ನು ನಾಶಮಾಡಿದರೂ ಕೂಡ ಈಗ ನಾವು ಮೌನವಾಗಿ ಇರುವುದಿಲ್ಲ ಎಂದು ತೀರ್ಮಾನಿಸಿದರು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಕೇಳಿದರು: ನೀವೇಕೆ ಸುಮ್ಮನಿದ್ದೀರಿ? ಅಲ್ಲಾಹನ ಮಹಿಮೆ ಮಹೋನ್ನತವಾದುದು ಎಂದು ನೀವೇಕೆ ಹೇಳುತ್ತಿಲ್ಲ? (ತಫ್ಸೀರೆ ಕಬೀರ್, ಸಂಪುಟ-10, ಪುಟ-341-342, 2004) ಈ ಸಂಪೂರ್ಣ ವಿವರಣೆಯ ಹಝ್ರತ್ ಮುಸ್ಲಿಹ್ ಮೌಊದ್(ರ)ರವರು ಪವಿತ್ರ ಖುರ್‌ಆನ್‌ನ ಸೂರ ಕೌಸರ್‌ನ ತಫ್ಸೀರ್‌ನಲ್ಲಿ ವಿವರಿಸಿದ್ದಾರೆ. ಅದರ ವಿವರಣೆ ತಿಳಿದುಕೊಳ್ಳಬೇಕಾದರೆ ತಫ್ಸೀರ್ ಕಬೀರ್‌ನಿಂದ ಓದಬಹುದು.

ಒಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ವಧಿಸಲು ಬಯಸಿದ ಮಕ್ಕಾದ ದೊಡ್ಡ ದೊಡ್ಡ ಜನರ ಹೆಸರನ್ನು ಸ್ಮರಿಸುವವರು ಇಂದು ಲೋಕದಲ್ಲಿ ಯಾರಾದರೂ ಇದ್ದಾರೆಯೇ? ಉಹುದ್ ಸ್ಥಳದಲ್ಲಿ ಅಬುಸುಫ್ಯಾನ್ ಕರೆದು ಹೇಳಿದನು, ನಿಮ್ಮ ನಡುವೆ ಮುಹಮ್ಮದ್(ಸ) ಇದ್ದಾರೆಯೇ? ಅದಕ್ಕೆ ಅವನು ಉತ್ತರವನ್ನು ಪಡೆಯದಿದ್ದಾಗ, ಅವನು ಹೇಳಿದನು, "ನಾವು ಮುಹಮ್ಮದ್(ಸ) ವಧಿಸಿದ್ದೇವೆ. ತದನಂತರ ಅವನು ಕರೆದನು. ನಿಮ್ಮ ನಡುವೆ ಅಬೂಬಕರ್(ರ) ಇದ್ದಾರೆಯೇ? ಅದಕ್ಕೂ ಉತ್ತರವೂ ಸಿಗದಿದ್ದಾಗ, ನಾವು ಅಬೂಬಕರ್ ಅವರನ್ನೂ ವಧಿಸಿದ್ದೇವೆ ಎಂದು ಹೇಳಿದನು. ನಂತರ ಅವನು ಉಮರ್(ರ) ನಿಮ್ಮ ನಡುವೆ ಇದ್ದಾರೆಯೇ ಎಂದು ಕೇಳಿದನು. ಅದಕ್ಕೆ ಉತ್ತರ ಸಿಗದಿದ್ದಾಗ, ನಾವು ಉಮರ್ ಅವರನ್ನೂ ಕೊಂದಿದ್ದೇವೆ ಎಂದು ಹೇಳಿದನು. (ಬುಖಾರಿ ಕಿತಾಬುಲ್ ಮಗ್ಹಾಝಿ, ಗಝ್ವ ಉಹುದ್ ಅಧ್ಯಾಯ) ಆದರೆ ಇಂದು ನೀವು ನಿಮ್ಮಲ್ಲಿ ಅಬು ಜಹ್ಲ್ ಇದ್ದಾನೆಯೇ? ಎಂದು ಕೂಗಿ ಕೇಳಿರಿ. ನೀವು ನೋಡುವಿರಿ, ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರನ್ನು ಕೋಟಿಗಟ್ಟಲೆ ಧ್ವನಿಗಳು ಮೊಳಗಿಸುವುವು. ಹೌದು, ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಮ್ಮ ನಡುವೆ ಇರುವವರು ಎಂದು ಲೋಕವು ಹೇಳುವುದು. ಏಕೆಂದರೆ ಹಝ್ರತ್ ಪೈಗಂಬರ್(ಸ)ರ ಪ್ರತಿನಿಧಿಯಾಗುವ ಭಾಗ್ಯ ನಮಗೆ ಲಭಿಸಿದೆ. ಆದರೆ ಅಬೂಜಹಲಿನ ಹೆಸರನ್ನು ಹೇಳುವಾಗ ನಿಮಗೆ ಯಾವುದೇ ಮೂಲೆಯಿಂದಲೂ ಶಬ್ದ ಕೇಳಿ ಬರದು. ಅಬುಜಹ್ಲ್‌ನ ಸಂತತಿ ಇಂದಿಗೂ ಜಗತ್ತಿನಲ್ಲಿ ಇದ್ದಾರೆ, ಆದರೆ ನಾನು ಅಬುಜಹ್ಲ್‌ನ ಸಂತತಿಯಲ್ಲಿ ಒಬ್ಬ ಎಂದು ಹೇಳುವ ಧೈರ್ಯ ಯಾರಿಗೂ ಇಲ್ಲ. ಬಹುಶಃ ಉತ್ಬಾ ಮತ್ತು ಶೈಬಾ ಅವರ ವಂಶಸ್ಥರು ಸಹ ಇಂದು ಜಗತ್ತಿನಲ್ಲಿದ್ದಾರೆ, ಆದರೆ ನಾನು ಉತ್ಬಾ ಮತ್ತು ಶೈಬಾ ಅವರ ವಂಶಸ್ಥ ಎಂದು ಯಾರಾದರೂ ಹೇಳುತ್ತಾರೆಯೇ? (ತಫ್ಸೀರೆ ಕಬೀರ್, ಸಂಪುಟ-2, ಪುಟ-290-291, 2004) ಒಟ್ಟಿನಲ್ಲಿ ಹಝ್ರತ್ ಪೈಗಂಬರ್(ಸ)ರವರ ಹೆಸರು ಮಾತ್ರ ಸರ್ವಶಕ್ತನಾದ ಅಲ್ಲಾಹನು ಉತ್ತುಂಗಕ್ಕೇರಿಸಿದೆ ಮತ್ತು ಉತ್ತುಂಗಕ್ಕೆ ಏರಿಸಲ್ಪಡುತ್ತದೆ.

ಈ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪ್ರವಾದಿಗಳಿಗೆ ಉಂಟಾಗುವ ಕಷ್ಟತೆಗಳಲ್ಲೂ ಅಲ್ಲಾಹನು ಸಾವಿರಾರು ರಹಸ್ಯಗಳನ್ನು ಇರಿಸಿರುತ್ತಾನೆ. ಹಝ್ರತ್ ಪೈಗಂಬರ್(ಸ) ಮೇಲೂ ಅನೇಕ ಆಪತ್ತುಗಳು ಉಂಟಾಗುತ್ತಿದ್ದುವು. ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಎಪ್ಪತ್ತು ಗಾಯಗಳು ಆಗಿದ್ದುವು ಎಂದು ಒಂದು ವರದಿಯಲ್ಲಿ ಬಂದಿದೆ. ಮುಸ್ಲಿಮರ ಬಾಹ್ಯ ಸ್ಥಿತಿ ಕೆಟ್ಟದ್ದಾಗಿ ಕಂಡು ಸತ್ಯನಿಷೇಧಿಗಳಿಗೆ ಬಹಳ ಸಂತೋಷ ಉಂಟಾಯಿತು. ಆದ್ದರಿಂದ, ಹಝ್ರತ್ ಪೈಗಂಬರ್(ಸ) ಮತ್ತು ಅವರ ಎಲ್ಲಾ ಮಹಾನ್ ಸಹಾಬಿಗಳು ಹುತಾತ್ಮರಾಗಿದ್ದಾರೆ ಎಂದು ಓರ್ವ ಅವಿಶ್ವಾಸಿ ತಿಳಿದು ಉಚ್ಚ ಸ್ವರದಲ್ಲಿ ನಿಮ್ಮಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಇದ್ದಾರೆಯೇ? ಎಂದು ಕೂಗಿದನು ಅದಕ್ಕೆ ಹಝ್ರತ್ ಪೈಗಂಬರ್(ಸ) ಮೌನವಾಗಿರಲು ಅದಕ್ಕೆ ಉತ್ತರ ನೀಡದೆ ಇರಲು ತಡೆದರು. ಆ ಮೌನದ ಕಾರಣದಿಂದ ಅವನಿಗೆ ಇವರು ವಧಿಸಿದ್ದಾರೆ ಆದ್ದರಿಂದ ಯಾವುದೇ ಉತ್ತರ ಲಭಿಸಲಿಲ್ಲ ಎಂದು ಸಂತೋಷಪಟ್ಟನು. ತದನಂತರ ಅವನು ಅದೇ ರೀತಿಯಲ್ಲಿ ಹಝ್ರತ್ ಅಬೂಬಕರ್(ರ) ಅವರ ಬಗ್ಗೆ ಹೇಳಿದನು. ಆಗಲೂ ಇಲ್ಲಿಂದ ಮೌನ ವಹಿಸಲಾಯಿತು. ನಂತರ ಅವನು ಪುನಃ ಹಝ್ರತ್ ಉಮರ್ ಬಗ್ಗೆ ಕೇಳಿದನು. ಹಝ್ರತ್ ಉಮರ್(ರ) ಅವರಿಗೆ ಮೌನವಾಗಿರಲು ಸಾಧ್ಯವಾಗದೆ: ಎಲೈ ದುರ್ದೈವ ನೀನು ಏನು ಹೇಳುತ್ತಿದ್ದೀಯಾ. ನಾವೆಲ್ಲರು ಜೀವಂತವಾಗಿದ್ದೇವೆ ಎಂದು ಹೇಳಿದರು. ಇಂತಹ ಕಹಿ ಅನುಭವಗಳು ಉಂಟಾಗುವುದು ಕೂಡ ಅವಶ್ಯಕವಾಗಿರುತ್ತದೆ. ಆದರೆ ಅದರ ಫಲಿತಾಂಶವೆಂದರೆ ಹಝ್ರತ್ ಪೈಗಂಬರ್(ಸ) ಇದಾದ ನಂತರ ಮುಶ್ರಿಕೀನರು ನಮ್ಮ ಮೇಲೆ ದಾಳಿ ಮಾಡುವುದಿಲ್ಲ ಎಂದು ಹೇಳಿದರು. ಹೀಗೆ ಕಂದಕ ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ಹೇಳಿರಬಹುದು. ಉಹುದ್ ನಂತರ ಕಂದಕದ ಯುದ್ಧ ನಡೆಯಿತು. ಮಕ್ಕಾದಿಂದ ಹೊರಡುವಾಗ ಹಝ್ರತ್ ಪೈಗಂಬರ್(ಸ)ರ ಮೇಲೆ ಅದು ಎಂತಹ ಕಹಿಯಾದ ಸಮಯವಾಗಿತ್ತು! (ಮಲ್‌ಫೂಝಾತ್, ಸಂಪುಟ-9, ಪುಟ-266-267, 2022) ಆದರೆ ಅನಂತರ ಅಲ್ಲಾಹನು ಸ್ಥಿತಿಗತಿಗಳನ್ನು ಬದಲಾಯಿಸಿದನು.

ಹಝ್ರತ್ ಹನ್‌ಝುಲ(ರ) ಶಹೀದ್ ಆದ ಘಟನೆಯನ್ನು ವಿವರಿಸಲಾಗಿದೆ. ಅದೇ ಯುದ್ಧದಲ್ಲಿ ಮತ್ತೊಬ್ಬ ಸಹಾಬಿಯ ತ್ಯಾಗ, ಶೌರ್ಯ ಮತ್ತು ಹಝ್ರತ್ ಪೈಗಂಬರ್(ಸ)ರ ಪ್ರೀತಿಗಾಗಿ ತನ್ನ ಪ್ರಾಣವನ್ನು ಸಹ ತ್ಯಾಗ ಮಾಡಿದ ಘಟನೆ ಇದೆ. ಅವರ ಪತ್ನಿ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಯುದ್ಧಕ್ಕಾಗಿ ಹೊರಟಿರುವರು ಎಂದು ನನ್ನ ಪತಿಗೆ ಗೊತ್ತಾಯಿತು. ಆ ಸಮಯದಲ್ಲಿ ನನ್ನ ಪತಿಗೆ ಜನಾಬತ್ ಸ್ನಾನ ಮಾಡುವುದು ಕಡ್ಡಾಯವಾಗಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಹೊರಟ ಸುದ್ದಿ ಕೇಳಿ ಅವರು ಎಷ್ಟು ಅವಸರದಿಂದ ಮತ್ತು ಚಿಂತಿತರಾಗಿ ಮನೆಯಿಂದ ಹೊರಟು ಹೋದರು ಎಂದರೆ, ಸ್ನಾನ ಮಾಡುವುದು ಕೂಡ ಅಗತ್ಯವೆಂದು ಅವರಿಗೆ ಅನಿಸಲಿಲ್ಲ ಮತ್ತು ಖಡ್ಗವೆತ್ತಿ ಯುದ್ಧ ಮೈದಾನದ ಕಡೆಗೆ ಹೊರಟರು. ಅವರನ್ನು ಶದ್ದಾದ್ ಬಿನ್ ಅಸ್ವದ್ ಶಹೀದ್ ಮಾಡಿದನು. ಅವರ ಶಹಾದತಿನ ಬಗ್ಗೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: "ಆಕಾಶ ಮತ್ತು ಭೂಮಿಯ ನಡುವೆ ನಿಂತುಕೊಂಡು ಬೆಳ್ಳಿಯ ಪಾತ್ರೆಗಳಿಂದ ನೀರನ್ನು ಹೊತ್ತು ದೇವದೂತರು ಹನ್‌ಝುಲ(ರ)ರ ಸ್ನಾನ ಮಾಡಿಸುವುದನ್ನು ನಾನು ನೋಡುತ್ತಿದ್ದೇನೆ."

ಹಝ್ರತ್ ಹನ್‌ಝುಲ(ರ) ಅವರ ಪತ್ನಿಯ ಹೆಸರು ಜಮೀಲಾ ಎಂದಾಗಿತ್ತು. ಮತ್ತು ಇವರು ಕಪಟಿಗಳ ನಾಯಕ ಅಬ್ದುಲ್ಲಾ ಬಿನ್ ಉಬೈ ಬಿನ್ ಸಲೂಲ್ ಅವರ ಮಗಳು ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಅವರ ಸಹೋದರಿ ಆಗಿದ್ದರು. ಹಝ್ರತ್ ಜಮೀಲ(ರ) ಹೇಳುತ್ತಾರೆ ಅವರು ಅಂದರೆ ಹಝ್ರತ್ ಹನ್‌ಝುಲ(ರ) ಅವರು ಜನಾಬಾತ್ ಸ್ಥಿತಿಯಲ್ಲಿಯೇ ಯುದ್ಧಭೂಮಿಗೆ ಬಂದಿದ್ದರು, ಅಂದರೆ ಅವರಿಗೆ ಸ್ನಾನ ಮಾಡುವುದು ಕಡ್ಡಾಯವಾಗಿತ್ತು. ಹಝ್ರತ್ ಪೈಗಂಬರ್(ಸ) ಅವರು ಹಜರತ್ ಜಮೀಲಾ(ರ) ಅವರ ಧ್ವನಿಯನ್ನು ಕೇಳಿ ಹೇಳಿದರು, "ಅದಕ್ಕಾಗಿಯೇ ದೇವದೂತರು ಅವರನ್ನು ಸ್ನಾನ ಮಾಡಿಸುತ್ತಿದ್ದರು." ಇದು ಹಝ್ರತ್ ಜಮೀಲಾ(ರ) ಅವರೊಂದಿಗೆ ಹಝ್ರತ್ ಹನ್‌ಝುಲಾ(ರ) ಅವರ ವಿವಾಹದ ಮೊದಲ ರಾತ್ರಿಯಾಗಿತ್ತು, ಬೆಳಿಗ್ಗೆ ಉಹುದ್ ಯುದ್ಧ ನಡೆಯಿತು.

ಒಂದು ವರದಿಯ ಪ್ರಕಾರ ಹಝ್ರತ್ ಜಮೀಲಾ(ರ) ಹೇಳಿದರು: ಹನ್‌ಝುಲಾ(ರ)ರವರು ಶತ್ರುಗಳೊಂದಿಗೆ ಹೋರಾಡಲು ಘೋಷಣೆಯನ್ನು ಕೇಳಿದಾಗ, ಅವರು ತಕ್ಷಣ ಸ್ನಾನ ಮಾಡದೆ ಎದ್ದುನಿಂತರು. ಅದೇ ರಾತ್ರಿ ಹಝ್ರತ್ ಜಮೀಲಾ(ರ) ಅವರು ಹೀಗೆ ಕನಸು ಕಂಡರು, ಅಂದರೆ ಇದ್ದಕ್ಕಿದ್ದಂತೆ ಆಕಾಶದಲ್ಲಿ ಬಾಗಿಲು ತೆರೆಯಿತು ಮತ್ತು ಅವರ ಪತಿ ಹಝ್ರತ್ ಹನ್‌ಝುಲಾ(ರ) ಅವರು ಈ ಬಾಗಿಲನ್ನು ಪ್ರವೇಶಿಸಿದರು. ತದನಂತರ ತಕ್ಷಣವೇ ಬಾಗಿಲು ಮುಚ್ಚಲಾಯಿತು. ಒಂದು ವರದಿಯಲ್ಲಿ ಹಝ್ರತ್ ಜಮೀಲಾ(ರ) ಅವರು ತಮ್ಮ ಸಮುದಾಯದ ನಾಲ್ಕು ಮಹಿಳೆಯರನ್ನು ಹನ್‌ಝುಲಾ ಅವರು ನನ್ನೊಂದಿಗೆ ಸಂಭೋಗಿಸಿದರು ಎಂದು ಸಾಕ್ಷಿಯನ್ನಾಗಿ ಮಾಡಿದರು. ಆಕೆಯ ಗರ್ಭಧಾರಣೆಯ ಬಗ್ಗೆ ಜನರು ಅನುಮಾನಿಸದಂತೆ ಅವರು ಇದನ್ನು ಮಾಡಬೇಕಾಗಿತ್ತು. ಅನುಮಾನಗಳೂ ಜನರಲ್ಲಿ ಮೂಡುತ್ತವೆ. ಜನರು ಹಲವಾರು ವಿಷಯಗಳನ್ನು ಕೂಡ ಮಾಡುತ್ತಾರೆ. ಇಂದಿಗೂ ಆರೋಪ ಮಾಡುವವರಿದ್ದಾರೆ. ಆದಾಗ್ಯೂ,

ಈ ಅನುಮಾನವನ್ನು ಹೋಗಲಾಡಿಸಲು ಹಝ್ರತ್ ಜಮೀಲಾ(ರ) ಅವರೇ ಸ್ವತಃ ಸಾಕ್ಷಿಗಳನ್ನು ಸಿದ್ಧಗೊಳಿಸಿದರು. ಹಝ್ರತ್ ಜಮೀಲಾ(ರ) ಸ್ವತಃ ಹೇಳುತ್ತಾರೆ: ನಾನು ಹೀಗೆ ಮಾಡುವುದಕ್ಕೆ ಕಾರಣ ಆಕಾಶದಲ್ಲಿ ಒಂದು ಬಾಗಿಲು ತೆರೆದಿದೆ ಅದರಲ್ಲಿ ಅವರು (ಹನ್‌ಝುಲಾ) ಪ್ರವೇಶಿಸಿದ್ದರು ಮತ್ತು ತಕ್ಷಣ ಆ ಬಾಗಿಲು ಮುಚ್ಚಲ್ಪಟ್ಟಿತ್ತು ಎಂದು ಕನಸ್ಸಿನಲ್ಲಿ ನೋಡಿದೆ. ಆದ್ದರಿಂದ ಹನ್‌ಝುಲಾ(ರ) ಅವರ ಸಮಯ ಸಮೀಪಿಸಿದೆ ಎಂದು ನನಗೆ ಅರ್ಥವಾಯಿತು ಆದ್ದರಿಂದ ಆ ರಾತ್ರಿ ನಾನು ಅವರಿಂದ ಗರ್ಭಿಣಿಯಾದೆ. ಅಬ್ದುಲ್ಲಾ ಬಿನ್ ಹನ್‌ಝುಲಾ ಈ ಗರ್ಭದಿಂದ ಜನಿಸಿದರು. ಖುರೈಶ್ ಹಝ್ರತ್ ಹನ್‌ಝುಲಾ(ರ) ಅವರನ್ನು ವಧಿಸಿದ ನಂತರ ಅವರ ಮೃತದೇಹವನ್ನು ಮುಸಲ್ಲ (ವಿರೂಪ) ಮಾಡಿರಲಿಲ್ಲ ಅಂದರೆ ಅವರು ಅವರ ಕಣ್ಣು, ಕಿವಿ, ಮೂಗನ್ನು ಕತ್ತರಿಸಲಿಲ್ಲ, ಏಕೆಂದರೆ ಅವರ ತಂದೆ ಅಬು ಆಮೀರ್ ರಾಹಿಬ್ ಖುರೈಶ್‌ಗಳೊಂದಿಗೆ ಇದ್ದನು. (ಅಸ್ಸೀರತುಲ್ ಹಲಬೀಯ್ಯ, ಸಂಪುಟ-2, ಪುಟ-327-328, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಸಅದ್ ಬಿನ್ ರಬೀಅ್(ರ)ರವರ ಶಹಾದತ್ತಿನ ಘಟನೆಯೂ ಇದೆ. ಸಅದ್ ಬಿನ್ ರಬೀಅ್(ರ) ಬದ್ರ್ ಮತ್ತು ಉಹುದ್ ಯುದ್ಧದಲ್ಲಿ ಭಾಗವಹಿಸಿದ್ದರು ಮತ್ತು ಉಹುದ್ ಯುದ್ಧದಲ್ಲಿ ಶಹೀದ್ ಆದರು. ಉಹುದ್ ಯುದ್ಧದ ದಿನದಂದು ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಬಳಿ ಸಅದ್ ಬಿನ್ ರಬೀಅ್(ರ) ಅವರ ಸುದ್ದಿ ಯಾರು ತರುತ್ತಾರೆ? ವ್ಯಕ್ತಿಯೊಬ್ಬರು ನಾನು ತರುವೆನು ಎಂದು ಹೇಳಿದರು. ಹೀಗಾಗಿ ಅವರು ಯುದ್ಧ ಭೂಮಿಯಲ್ಲಿ ಮೃತದೇಹಗಳಲ್ಲಿ ಹುಡುಕಾಡಲು ಪ್ರಾರಂಭಿಸಿದರು. ಹಝ್ರತ್ ಸಾದ್(ರ) ಆ ವ್ಯಕ್ತಿಯನ್ನು ಕಂಡು ನೀವು ಹೇಗಿದ್ದೀರಿ? ಎಂದು ಕೇಳಿದರು. ಅವರು ಹೇಳಿದರು ನನಗೆ ಹಝ್ರತ್ ಪೈಗಂಬರ್(ಸ)ರವರು ನಿಮ್ಮ ಬಗ್ಗೆ ಸುದ್ದಿ ತರಲು ಕಳುಹಿಸಿದ್ದಾರೆ. ಅದಕ್ಕೆ ಹಝ್ರತ್ ಸಅದ್ ಬಿನ್ ರಬೀಅ್(ರ) ಹೇಳಿದರು ಹಝ್ರತ್ ಪೈಗಂಬರ್(ಸ) ಅವರಿಗೆ ನನ್ನ ಸಲಾಮ್ ಅನ್ನು ಸಲ್ಲಿಸಿರಿ ಮತ್ತು ನಾನು ಈಟಿಯಿಂದ ಹನ್ನೆರಡು ಗಾಯಗಳನ್ನು ಹೊಂದಿದ್ದೇನೆ ಮತ್ತು ನನ್ನೊಂದಿಗೆ ಹೋರಾಡಿದವರು ನರಕಕ್ಕೆ ಹೋಗಿದ್ದಾರೆ ಅಂದರೆ ನಾನು ಅವರನ್ನು ಕೊಂದಿದ್ದೇನೆ ಎಂದು ತಿಳಿಸಿರಿ. ಮತ್ತು ರಸೂಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಶಹೀದ್ ಆದರೆ ಮತ್ತು ನಿಮ್ಮಲ್ಲಿ ಒಬ್ಬರು ಬದುಕಿದ್ದರೆ ಅಲ್ಲಾಹನ ಸನ್ನಿಧಿಯಲ್ಲಿ ಅವರಿಗೆ ಯಾವುದೇ ಕ್ಷಮೆ ಇಲ್ಲ ಎಂದು ನನ್ನ ಸಮುದಾಯದವರಿಗೆ ತಿಳಿಸಿರಿ.

ಅವರ ಬಳಿಗೆ ಹೋದವರು ಹಝ್ರತ್ ಉಬೈ ಬಿನ್ ಕಅಬ್(ರ) ಎಂದು ನಿರೂಪಿಸಲಾಗಿದೆ. ಹಝ್ರತ್ ಸಅದ್(ರ) ಅವರು ಹಝ್ರತ್ ಅಬಿ ಬಿನ್ ಕಅಬ್(ರ) ಅವರಿಗೆ ಹೇಳಿದರು. ನನ್ನ ಜನರಿಗೆ ಹೇಳಿರಿ: ಸಅದ್ ಬಿನ್ ರಬೀಅ್ ಹೇಳುತ್ತಾನೆ: ಅಲ್ಲಾಹನಿಗೆ ಭಯಪಡಿರಿ. ಇನ್ನೊಂದು ವರದಿ ಹೀಗಿದೆ ಅಖಬಾದ ರಾತ್ರಿಯಲ್ಲಿ ನೀವು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಮಾಡಿದ ಪ್ರತಿಜ್ಞೆಯನ್ನು ನೆನಪಿಸಿಕೊಳ್ಳಿ, ಅಲ್ಲಾಹನ ಆಣೆ! ನಿಮ್ಮಲ್ಲಿ ಒಂದು ಕಣ್ಣು ಜೀವಂತವಾಗಿದ್ದಾಗ ಅಂದರೆ ನಿಮ್ಮಲ್ಲಿ ಒಬ್ಬರಾದರು ಜೀವಂತವಾಗಿದ್ದ ಸದರ್ಭದಲ್ಲಿ ಅವಿಶ್ವಾಸಿಗಳು ನಿಮ್ಮ ಪ್ರವಾದಿ ಹಝ್ರತ್ ಪೈಗಂಬರ್(ಸ) ಅವರನ್ನು ಸಮೀಪಿಸಿದರೆ ಅಲ್ಲಾಹನ ಸಮ್ಮುಖದಲ್ಲಿ ನಿಮಗೆ ಯಾವುದೇ ಕ್ಷಮೆ ಇಲ್ಲ.

ಅಂದರೆ, ಅಲ್ಲಾಹನ ಸಂದೇಶವಾಹಕರು(ಸ) ಅವರಿಗಾಗಿ ಮತ್ತು ಅವರ ಧರ್ಮಕ್ಕಾಗಿ ನೀವು ನಿಮ್ಮ ಜೀವನವನ್ನು ತ್ಯಾಗ ಮಾಡಬೇಕು. ಮರಣದ ಸಮಯದಲ್ಲೂ ಅಲ್ಲಾಹನ ಸಂದೇಶವಾಹಕರು ಮಾತ್ರ ನಮ್ಮಿಂದ ರಕ್ಷಿಸಲ್ಪಡಲಿ ಎಂದು ಸಹಾಬಿಗಳ ಭಾವನೆಯಾಗಿತ್ತು. ಹಝ್ರತ್ ಅಬಿ ಬಿನ್ ಕಅಬ್(ರ) ಅವರು ಹೇಳುವಂತೆ ನಾನು ಇನ್ನೂ ಅಲ್ಲಿಯೇ ಇದ್ದೆ, ಅಂದರೆ ಹಝ್ರತ್ ಸಅದ್ ಬಿನ್ ರಬೀಅ್(ರ) ನಿಧನರಾದಾಗ ನಾನು ಹಝ್ರತ್ ಸಅದ್ ಜೊತೆಗಿದ್ದೆ. ಆ ಸಮಯದಲ್ಲಿ ಅವರು ಗಾಯಗಳಿಂದ ಬಳಲುತ್ತಿದ್ದರು. ನಾನು ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ಹಿಂತಿರುಗಿದೆ ಮತ್ತು ಈ ಸಂಭಾಷಣೆ ನಡೆದಿದೆ ಎಂದು ಅವರಿಗೆ ತಿಳಿಸಿದೆ. ಇದು ಅವರ ಸ್ಥಿತಿಯಾಗಿತ್ತು ಮತ್ತು ಹೀಗೆ ಅವರು ಶಹೀದ್ ಆದರು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಅವನ ಮೇಲೆ ಕರುಣಿಸಲಿ. ಅವರು ಜೀವನದಲ್ಲಿ ಮತ್ತು ಮರಣದ ನಂತರ ಸರ್ವಶಕ್ತನಾದ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಹಿತಚಿಂತಕರಾಗಿದ್ದರು.

ಹಝ್ರತ್ ಸಅದ್ ಬಿನ್ ರಬೀಅ್(ರ) ಮತ್ತು ಹಝ್ರತ್ ಖಾರ್ಜಾ ಬಿನ್ ಝೈದ್(ರ) ಅವರನ್ನು ಒಂದೇ ಖಬರ್‌ನಲ್ಲಿ ದಫನ್ ಮಾಡಲಾಯಿತು.

(ಅತ್ತಬಖಾತಲ್ ಕುಬ್ರ, ಸಂಪುಟ-3, ಪುಟ-396, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಲ್‌ಇಸ್ತಿಯಾಬ್, ಸಂಪುಟ-2, ಪುಟ-590,591, ದಾರುಲ್ ಜೀಲ್ ಬೈರುತ್) (ಅಸದುಲ್- ಗ್ಹಾಬಾಹ್, ಸಂಪುಟ-2, ಪುಟ-433, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಈಗ ಹಝ್ರತ್ ಪೈಗಂಬರ್(ಸ) ಸಹ ಮೈದಾನಕ್ಕೆ ಇಳಿದಿದ್ದರು ಮತ್ತು ಶಹೀದರ ಮೃತದೇಹಗಳನ್ನು ನೋಡುವುದನ್ನು ಆರಂಭಿಸಲಾಗಿತ್ತು. ಮುಸ್ಲಿಮರ ಆಗಿನ ಆ ದೃಶ್ಯವು ರಕ್ತ ಕಣ್ಣೀರು ಬರಿಸುವಂಥದ್ದಾಗಿತ್ತು. ಎಪ್ಪತ್ತು ಮುಸ್ಲಿಮರು ಮಣ್ಣು ಮತ್ತು ರಕ್ತದಲ್ಲಿ ಮುಳುಗಿ ಮೈದಾನದಲ್ಲಿ ಬಿದ್ದಿದ್ದರು. ಮೃತ ಶರೀರಗಳನ್ನು ಕುರೂಪಗೊಳಿಸುವ ಅರೇಬಿಯದ ಅನಾಗರಿಕ ಸಂಪ್ರದಾಯದ ದೃಶ್ಯ ಕಂಡುಬರುತ್ತಿತ್ತು. ವಧಿಸಲ್ಪಟ್ಟವರಲ್ಲಿ ಕೇವಲ ಆರು ಮುಹಾಜಿರರು ಇದ್ದರು. ಉಳಿದೆಲ್ಲರೂ ಅನ್ಸಾರ್‌ಗಳಾಗಿದ್ದರು. ಖುರೈಶಿಯರಲ್ಲಿ ಕೊಲ್ಲಲ್ಪಟ್ಟವರ ಸಂಖ್ಯೆ 23 ಆಗಿತ್ತು. ಹಝ್ರತ್ ಪೈಗಂಬರ್(ಸ) ತನ್ನ ದೊಡ್ಡಪ್ಪರಾದ ಹಂಝ ಬಿನ್ ಅಬ್ದುಲ್ ಮುತ್ತಲಿಬ್(ರ)ರ ಮೃತದೇಹದ ಬಳಿ ತಲುಪಿದಾಗ ಭಾವುಕರಾಗಿ ನಿಂತುಬಿಟ್ಟರು. ಏಕೆಂದರೆ ಅಬೂಸುಫ್ಯಾನ್‌ನ ಕ್ರೂರಿ ಪತ್ನಿಯು ಅವರ ಮೃತದೇಹವನ್ನು ಬಹಳ ಹೀನಾಯವಾಗಿ ಕೆಡಿಸಿದ್ದಳು. ಸ್ವಲ್ಪ ಸಮಯ ಹಝ್ರತ್ ಪೈಗಂಬರ್(ಸ) ಮೌನವಾಗಿ ನಿಂತುಬಿಟ್ಟರು. ಅವರ ಮುಖದಲ್ಲಿ ದುಃಖ ಮತ್ತು ಕೋಪದ ಲಕ್ಷಣಗಳು ಪ್ರಕಟಗೊಳ್ಳುತ್ತಿದ್ದುವು. ಮಕ್ಕಾದ ಈ ಅನಾಗರಿಕ, ಮೃಗ ಸಮಾನ ಜನರೊಂದಿಗೆ ಇದೇ ರೀತಿಯಲ್ಲಿ ವರ್ತಿಸುವ ವರೆಗೂ ಅವರಿಗೆ ಬುದ್ಧಿ ಬರದು ಎಂಬ ಚಿಂತೆ ಒಂದು ನಿಮಿಷಕ್ಕೆ ಹಝ್ರತ್ ಪೈಗಂಬರ್(ಸ)ರಿಗೆ ಉಂಟಾಯಿತು. ಆದರೆ ಅವರು ಈ ಚಿಂತೆಯನ್ನು ತಡೆದು ನಿಲ್ಲಿಸಿದರು ಮತ್ತು ಸಹನೆದೋರಿದರು. ಮಾತ್ರವಲ್ಲ ಮುಖವನ್ನು ಕುರೂಪಗೊಳಿಸುವ ಸಂಪ್ರದಾಯವನ್ನು ಇಸ್ಲಾಮಿನಲ್ಲಿ ಸದಾ ಕಾಲಕ್ಕೆ ನಿಷಿದ್ಧಗೊಳಿಸಿದರು. ಅವರು ಹೀಗೆ ಹೇಳಿದರು: ಶತ್ರುಗಳು ಏನು ಮಾಡಿದರೂ ಸರಿ, ನೀವು ಈ ವಿಧದ ಮೃಗೀಯ ವಿಧಾನಗಳಿಂದ ದೂರವಿರಬೇಕು ಹಾಗೂ ಒಳಿತು ಮತ್ತು ಔದಾರ್ಯದ ಮಾರ್ಗವನ್ನು ಕೈಗೊಳ್ಳಬೇಕು.

ಹಝ್ರತ್ ಪೈಗಂಬರ್(ಸ)ರ ಅತ್ತೆಯ ಮಗ ಅಬ್ದುಲ್ಲಾಹ್ ಬಿನ್ ಜಹಶ್(ರ)ರ ಮೃತದೇಹವನ್ನು ಕೂಡ ಬಹಳ ಹೀನಾಯವಾಗಿ ಕೆಡಿಸಿ ಹಾಕಲಾಗಿತ್ತು. ಹಝ್ರತ್ ಪೈಗಂಬರ್(ಸ) ಒಂದು ಮೃತದೇಹದ ಬಳಿಯಿಂದ ಮತ್ತೊಂದು ಮೃತದೇಹದ ಬಳಿಗೆ ಹೋಗುತ್ತಿದ್ದಂತೆ ಅವರ ಮುಖದಲ್ಲಿ ದುಃಖ ಮತ್ತು ನೋವಿನ ಲಕ್ಷಣಗಳು ವರ್ಧಿಸುತ್ತಾ ಹೋಗುತ್ತಿದ್ದುವು.

(ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-500)

ಶಹೀದರ ಮತ್ತು ಅವರ ತ್ಯಾಗಗಳ ಬಗ್ಗೆ ಪ್ರಸ್ತಾಪಿಸುತ್ತಾ ಸಅದ್ ಬಿನ್ ರಬೀಅ್(ರ)ರಿಗೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದ ಪ್ರೀತಿ ಮತ್ತು ಪ್ರೇಮದ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನೋಡಿರಿ, ಸಾಯಲು ಹೋಗುತ್ತಿರುವಾಗ ಮನುಷ್ಯನ ಮನಸ್ಸಿನಲ್ಲಿ ಎಂತೆಂತಹ ಚಿಂತೆಗಳು ಬರುತ್ತವೆ. ನನ್ನ ಪತ್ನಿಯ ಸ್ಥಿತಿ ಏನಾಗಬಹುದು ಮತ್ತು ನನ್ನ ಮಕ್ಕಳನ್ನು ಯಾರು ನೋಡಿಕೊಳ್ಳುವರು ಎಂದು ಅವನು ಯೋಚಿಸುತ್ತಾನೆ. ಆದರೆ ಆ ಸಹಾಬಿ ಅಂತಹ ಯಾವುದೇ ಸಂದೇಶವನ್ನು ನೀಡಲಿಲ್ಲ. ಬದಲಾಗಿ ಅವರು ಇಷ್ಟು ಮಾತ್ರ ಹೇಳಿದರು: ನಾವು ಹಝ್ರತ್ ಪೈಗಂಬರ್(ಸ)ರನ್ನು ಸಂರಕ್ಷಿಸುತ್ತಾ ಈ ಲೋಕದಿಂದ ಹೊರಟುಹೋಗುತ್ತಿದ್ದೇವೆ. ನೀವು ಸಹ ಇದೇ ಮಾರ್ಗದಲ್ಲಿ ನಮ್ಮ ಹಿಂದೆ ಬನ್ನಿರಿ. ಆ ಜನರೊಳಗೆ ಇದ್ದ ವಿಶ್ವಾಸದ ಶಕ್ತಿ ಇದೇ ಆಗಿತ್ತು. ಅದರಿಂದ ಅವರು ಲೋಕವನ್ನು ಅಡಿಮೇಲು ಮಾಡಿದರು. ಇರಾನ್ ಮತ್ತು ರೋಮನರ ಆಡಳಿತದ ಸಿಂಹಾಸನಗಳನ್ನು ಅವರು ಮಗುಚಿ ಹಾಕಿದರು. ಈ ಜನರ ಬಗ್ಗೆ ತಿಳಿದ ನಂತರ ರೋಮ್ನ ಅರಸ ಆಶ್ಚರ್ಯಚಕಿತನಾದನು. ಆತನು ತನ್ನ ಸೇನಾಧಿಪತಿಯನ್ನು ನೀವು ಈ ಅರಬ್ಬರನ್ನು ಸೋಲಿಸಲು ಸಾಧ್ಯವಾಗದಿದ್ದರೆ, ಹಿಂತಿರುಗಿ ಬಂದು ಬಳೆಗಳನ್ನು ಧರಿಸಿ ಮನೆಯಲ್ಲಿ ಕುಳಿತುಕೊಳ್ಳಿ ಎಂದು ಬರೆದನು. ನೀವು ಏಕೆ ಯುದ್ಧವಾಡುವುದಕ್ಕೆ ಹೋಗುತ್ತೀರಿ? ಅವನು ಅಂದರೆ ಅರಸನು ತನ್ನ ಸೇನಾಪತಿಗೆ ಇವರು ಕೆಟ್ಟ ಆಹಾರವನ್ನು ತಿನ್ನುವ ಜನರು ಮತ್ತು ನೀವು ಅವರನ್ನು ತಡೆಯಲು ಸಾಧ್ಯವಿಲ್ಲ ಎಂದು ಹೇಳಿದನು. ಅದಕ್ಕೆ ಆ ಸೇನಾಧಿಪತಿ ಹೇಳಿದನು ಇವರು ಪುರುಷರೆಂದು ತಿಳಿಯುವುದಿಲ್ಲ ಇವರು ಬೇರೆಯೇ ಜನರಿದ್ದಾರೆ ಎಂದು ತಿಳಿಯುತ್ತದೆ. ಇವರು ಕತ್ತಿಗಳು ಮತ್ತು ಈಟಿಗಳ ಮೇಲಿಂದ ಹಾರಿ ಬರುತ್ತಾರೆ.

(ತಫ್ಸೀರ್ ಕಬೀರ್, ಸಂಪುಟ-7, ಪುಟ-338, ಆವೃತ್ತಿ 2004)

ಈ ಘಟನೆಯನ್ನು ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ವಿವರಿಸಿದ್ದಾರೆ, "ಉಹುದ್ ಯುದ್ಧವು ಕೊನೆಗೊಂಡಾಗ, ಹಝ್ರತ್ ಪೈಗಂಬರ್(ಸ) ರವರು ಗಾಯಾಳುಗಳ ಆರೈಕೆಗಾಗಿ ಒಬ್ಬ ಸಹಾಬಿಯರನ್ನು ಕಳುಹಿಸಿದರು. ಅವರು ಗಂಭೀರ ಸ್ಥಿತಿಯಲ್ಲಿದ್ದ ಓರ್ವ ಅನ್ಸಾರಿ ಸಹಾಬಿಯನ್ನು ನೋಡಿದರು. ಅವರು ಅವರ ಬಳಿಗೆ ಹೋಗಿ, "ಓ ಸಹೋದರನೇ! ನಿಮ್ಮ ಬಳಿ ಏನಾದರೂ ಸಂದೇಶ ಇದ್ದರೆ ನನಗೆ ಹೇಳಿ ನಾನು ಅದನ್ನು ನಿಮ್ಮ ಪ್ರೀತಿಪಾತ್ರರಿಗೆ ಮತ್ತು ಸಂಬಂಧಿಕರಿಗೆ ತಿಳಿಸುತ್ತೇನೆ ಎಂದು ಹೇಳಿದರು. ಅದಕ್ಕೆ ಅವರು ಹೇಳದರು ನಾನು ನನ್ನ ಸಂಬಂಧಿಕರಿಗೆ ಸಂದೇಶ ಕಳುಹಿಸಲು ಮದೀನಾದಿಂದ ಯಾರನ್ನಾದರೂ ಹುಡುಕುತ್ತಿದ್ದೆ ಎಂದು ಹೇಳಿದರು. ನೀವು ನನ್ನನ್ನು ಕಂಡಿದ್ದು ಒಳ್ಳೆದಾಯಿತು. ನಿಮ್ಮ ಕೈಯನ್ನು ನನ್ನ ಕೈಗೆ ನೀಡಿ ನೀವು

ನನ್ನ ಸಂದೇಶವನ್ನು ನನ್ನ ಕುಟುಂಬಕ್ಕೆ ತಲುಪಿಸುವ ಭರವಸೆ ನೀಡಿ. ಅದಕ್ಕೆ ಅವರು ನಾನು ಖಂಡಿತವಾಗಿಯೂ ನಿಮ್ಮ ಸಂದೇಶವನ್ನು ತಲುಪಿಸುತ್ತೇನೆ ಎಂದು ತಮ್ಮ ಕೈಯನ್ನು ಅವರ ಕೈಯಲ್ಲಿ ಇಟ್ಟುಕೊಂಡು ಒಪ್ಪಿಕೊಂಡರು. ಹೀಗೆ ಈ ಗಾಯಾಳು ಸಹಾಬಿ ಹೇಳಿದರು, "ಹೋಗಿ ನನ್ನ ಪ್ರೀತಿಪಾತ್ರರಿಗೆ, ಸಂಬಂಧಿಕರಿಗೆ ಮತ್ತು ಸಹೋದರ ಸಹೋದರಿಯರಿಗೆ ಮುಹಮ್ಮದ್ (ಸ) ನಮ್ಮ ಸಮುದಾಯದ ಅತ್ಯುತ್ತಮ ಸಂಪತ್ತಾಗಿದ್ದಾರೆ ಮತ್ತು ಇವರು ನಮ್ಮಲ್ಲಿರುವ ಸಾಮುದಾಯಿಕ ಅಮಾನತ್ (ನ್ಯಾಸವಿಶ್ವಾಸ) ಆಗಿದ್ದಾರೆ. ನಿಮ್ಮ ಹೃದಯವು ಈ ಅಮೂಲ್ಯ ಉಡುಗೊರೆಯ ನಿಜವಾದ ಮೌಲ್ಯವನ್ನು ಅರಿತುಕೊಳ್ಳುತ್ತದೆ ಎಂದು ನನಗೆ ಖಾತ್ರಿಯಿದೆ, ಆದರೆ ನಾವು ಬದುಕಿರುವವರೆಗೂ ಈವಿಶ್ವಾಸವನ್ನು ದ್ರೋಹ ಮಾಡಲು ಮತ್ತು ರಕ್ಷಿಸಲು ನಾವು ಅನುಮತಿಸುವುದಿಲ್ಲ ಎಂಬ ಸಂದೇಶವನ್ನು ನಿಮಗೆ ತಿಳಿಸುವುದು ನನ್ನ ಕರ್ತವ್ಯ ಎಂದು ನಾನು ಭಾವಿಸುತ್ತೇನೆ. ನಾನು ನನ್ನ ಎಲ್ಲಾ ಪ್ರಯತ್ನವನ್ನು ನೀಡಿದ್ದೇನೆ. ಈಗ ನಾವು ಸಾಯುತ್ತಿದ್ದೇವೆ ಮತ್ತು ಈ ಅಮಾನತ್ ಅನ್ನು ನಮ್ಮ ಹಿಂದೆ ಬಿಡುತ್ತಿದ್ದೇವೆ. ನನ್ನ ಎಲ್ಲಾ ಪುತ್ರರು, ಸಹೋದರರು ಮತ್ತು ಅವರ ವಂಶಸ್ಥರು ಈ ಪವಿತ್ರ ಅಮಾನ್ ಅನ್ನು ತಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ರಕ್ಷಿಸುತ್ತಾರೆ ಮತ್ತು ಅದರಲ್ಲಿ ಯಾವುದೇ ರೀತಿಯ ಲೋಪವನ್ನು ಅನುಮತಿಸುವುದಿಲ್ಲ ಎಂದು ನಾನು ಭಾವಿಸುತ್ತೇನೆ. (ತಫ್ಸೀರ್ ಕಬೀರ್, ಸಂಪುಟ 10, ಪುಟ 185, ಆವೃತ್ತಿ 2004)

ಇನ್ನೊಂದು ಸ್ಥಳದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ಅದನ್ನು ಈ ಕೆಳಗಿನಂತೆ ವಿವರಿಸಿದ್ದಾರೆ: "ಅನ್ಸಾರಿ ಕುಲೀನರೊಬ್ಬರು ಗಾಯಗೊಂಡು ಮಲಗಿದ್ದರು ಮತ್ತು ಅವರ ಸ್ಥಿತಿಯು ಅವರು ಕೆಲವೇ ನಿಮಿಷಗಳಲ್ಲಿ ಮೃತರಾಗುತ್ತಾರೆ ಎಂದಾಗಿತ್ತು. ಒಬ್ಬ ಸಹಾಬಿ ಅವರ ಬಳಿಗೆ ಬಂದು ಕುಳಿತಕೊಂಡರು. ಪರಿಸ್ಥಿತಿಯನ್ನು ವಿಚಾರಿಸಿದ ಅವರು, ನಿಮ್ಮ ಹೆಂಡತಿ, ಮಕ್ಕಳು ಮತ್ತು ಸಂಬಂಧಿಕರಿಗೆ ಸಂದೇಶವನ್ನು ನೀಡಬೇಕಾದರೆ ಅದನ್ನು ನೀಡಿ ಎಂದು ಹೇಳಿದರು. ಅದಕ್ಕೆ ಅವರು ಹೇಳಿದರು ಹೌದು ಇದೆ, ನಾನು ಯಾರಾದರು ಮುಸ್ಲಿಂ ಬಂದರೆ ಅವರಿಗೆ ನನ್ನ ಸಂದೇಶ ಕಳುಹಿಸಬೇಕೆಂದು ಕಾಯುತ್ತಿದ್ದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಪ್ರತಿಯೊಬ್ಬರಿಗೂ ತಿಳಿದಿರುವ ವಿಷಯವಾಗಿದೆ ನಿಧನ ಹೊಂದಿದ ಮನೆಯ ಸ್ಥಿತಿ ಹೇಗಿರುತ್ತದೆ ಎಂದು. ಕೆಲವು ನಿಮಿಷಗಳು ಇನ್ನಷ್ಟು ಲಭಿಸಿದರೆ ಪತ್ನಿ, ಮಕ್ಕಳು, ಸಹೋದರಿ ಸಹೋದರರೊಂದಿಗೆ ಏನಾದರೂ ಹೇಳಬೇಕು ಎಂದೂ ಅವರಿಗಾಗಿ ಏನಾದರೂ ಉಯಿಲು ಮಾಡಬೇಕು ಎಂದೂ ಸಾಯುತ್ತಿರುವವನು ಇಚ್ಛಿಸುತ್ತಾನೆ. ಆದರೆ ಆ ಸಹಾಬಿ ಕಲ್ಲಿನ ನೆಲದಲ್ಲಿ ಬಿದ್ದಿದ್ದರು. ಅಂತಹ ಸ್ಥಿತಿಯಲ್ಲೂ ಅವರು ಹೀಗೆ ಸಂದೇಶ ನೀಡಿದರು: ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಿಮ್ಮ ಬಳಿಯಲ್ಲಿರುವ ಅಮೂಲ್ಯ ನಿಧಿಯಾಗಿರುವರು. ನಾನು ಜೀವತ್ಯಾಗ ಮಾಡಿಯೂ ಆ ಅಮಾನತ್ತನ್ನು ಸಂರಕ್ಷಣೆ ಮಾಡಿರುವೆನು. ಈಗ ನನ್ನ ಪ್ರಿಯ ಸಹೋದರರಿಗೆ ಮತ್ತು ಮಕ್ಕಳಿಗೆ ನನ್ನ ಕೊನೆಯ ವಸಿಯ್ಯತ್ ಏನೆಂದರೆ, ಅವರು ಕೂಡ ತಮ್ಮ ಜೀವಗಳಿಂದ ಈ ಅಮಾನತ್ತನ್ನು ಸಂರಕ್ಷಿಸಬೇಕು. ಹೀಗೆ ಹೇಳಿ ಅವರು ಅಸುನೀಗಿದರು.

ಎಂತೆಂತಹ ಪ್ರವಾದಿ ಪ್ರೇಮದ ಪ್ರಕಟಣೆಯಾಗಿದೆ ಎಂದರೆ ಮನುಷ್ಯನು ಆಶ್ಚರ್ಯಚಕಿತನಾಗುತ್ತಾನೆ. ಅಲ್ಲಾಹನು ನಮ್ಮೊಳಗೂ ಪ್ರವಾದಿ ಪ್ರೇಮದ ಈ ಸ್ಫೂರ್ತಿಯನ್ನು ಉಂಟುಮಾಡಲಿ. ಈ ಒಂದು ಯೋಚನೆ ಇದ್ದರೆ ಅಲ್ಲಾಹನೊಂದಿಗೆ ಇರುವ ನಮ್ಮ ಸಂಬಂಧವೂ ಸುದೃಢವಾಗುವುದು ಹಾಗೂ ನಮ್ಮ ಆರಾಧನೆಗಳಲ್ಲಿ, ನಮ್ಮ ನೈತಿಕಗುಣಗಳಲ್ಲಿ ಮತ್ತು ನಮ್ಮ ನಡವಳಿಕೆಗಳಲ್ಲಿ ಸರಿಯಾದ ಇಸ್ಲಾಮಿನ ರೂಪವನ್ನು ಉಂಟುಮಾಡಲಿಕ್ಕಾಗಿ ನಮ್ಮ ದೌರ್ಬಲ್ಯಗಳನ್ನು ದೂರಮಾಡಲು ಕೂಡ ನಿಜವಾಗಿಯೂ ಪ್ರಯತ್ನಿಸುವವರಾಗುವೆವು. ಅಲ್ಲಾಹನು ನಮಗೆ ತೌಫೀಕ್ ನೀಡಲಿ.

ಈಗ ಕೆಲವು ದಿವಂಗತರ ಉಲ್ಲೇಖಗಳಿವೆ. ಅವರ ಜನಾಝಗಳನ್ನು ನಾನು ನಿರ್ವಹಿಸುವೆನು. ಅವರಲ್ಲಿ ಮೊತ್ತಮೊದಲನೇಯ ಉಲ್ಲೇಖ ಯೆಮನ್‌ನ ಮಾನ್ಯ ಡಾ॥ ಮನ್ಸೂರ್ ಶಬೂತಿ ಸಾಹಿಬ್ ಅವರದ್ದಾಗಿದೆ. ಮನ್ಸೂರ್ ಶಬೂತಿ ಸಾಹಿಬ್ ಯೆಮನ್‌ನಲ್ಲಿ ಬಂಧಿಯನ್ನಾಗಿ ಮಾಡಲಾಗಿತ್ತು. ಅಹ್ಮದಿಯ್ಯತ್‌ನ ಕಾರಣದಿಂದ ಅವರಿಗೆ ಬಂಧಿಸಲಾಗಿತು ಮತ್ತು ಬಂಧನದಲ್ಲಿಯೇ ಅವರು ಜನವರಿ 26 ರಂದು ಅರವತ್ತಮೂರನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರನ್ನು ಅಹ್ಮದಿಯ್ಯತಿನ ಕಾರಣದಿಂದ ಬಂಧಿಸಲಾಗಿತ್ತು ಮತ್ತು ಬಂಧನದಲ್ಲೇ ಅವರ ನಿಧನವಾಯಿತು. ಆದ್ದರಿಂದ ಅವರು ಶಹೀದ್ ಆಗಿರುವರು. ಈ ರೀತಿಯಾಗಿ ಅವರು ಯಮನಿನ ಮೊದಲ ಶಹೀದ್ ಆಗಿರುವರು.

ದಿವಂಗತರು ತಮ್ಮ ವೃದ್ಧ ತಾಯಿ ಮತ್ತು ಪತ್ನಿ, ಇಬ್ಬರು ಪುತ್ರರಾದ ಐಮನ್ ಮತ್ತು ಬಿಲಾಲ್ ಅವರನ್ನು ಅಗಲಿದ್ದಾರೆ. ದಿವಂಗತರ ಸಹೋದರ ನಾಸಿರ್ ಶಬೂತಿ ಅವರು ಲಂಡನ್‌ನಲ್ಲಿ ವಾಸಿಸುತ್ತಿದ್ದಾರೆ ಅವರು ಹೇಳುತ್ತಾರೆ: ಅವರ ಮೃತ ದೇಹವನ್ನು ಫೆಬ್ರವರಿ 1 ರಂದು ಅವರ ಪುತ್ರನಿಗೆ ಹಸ್ತಾಂತರಿಸಲಾಯಿತು, ಆದರೆ ಅವರೆಲ್ಲರೂ ಅಹ್ಮದಿ ಆಗಿರುವುದರಿಂದ, ಅವರು ಜೈಲಿನಲ್ಲಿದ್ದಾರೆ. ಅಲ್ಲಿ ಅವರು ಬಹುತೇಕ ಎಲ್ಲಾ ಅಹ್ಮದೀಯರನ್ನು, ಪುರುಷರನ್ನು ಬಂಧಿಸಿದಿದ್ದಾರೆ, ಆದ್ದರಿಂದ ಅಹ್ಮದೀಯೇತರ ಸ್ನೇಹಿತರು ಅವರ ನಮಾಝೆ ಜನಾಝವನ್ನು ನಿರ್ವಹಿಸಿದರು ಮತ್ತು ದಫನ್ ಮಾಡಲಾಯಿತು. ನಾಸಿರ್ ಶಬೂತಿ ಸಾಹಿಬ್ ಹೇಳುತ್ತಾರೆ: ಅವರ ಅಜ್ಜ ಅಬ್ದುಲ್ಲಾ ಮುಹಮ್ಮದ್ ಉಸ್ಮಾನ್ ಶಬೂತಿ ಅವರು ಯೆಮನ್‌ನ ಮೊದಲ ಯೆಮನಿ ಅಹ್ಮದಿ ಆಗಿದ್ದರು ಮತ್ತು ಡಾ. ಮನ್ಸೂರ್ ಶಬೂತಿ ಸಾಹಿಬ್ ಅವರ ತಂದೆ ಮಹಮೂದ್ ಅಬ್ದುಲ್ಲಾ ಶಬೂತಿ ಯೆಮನ್‌ನ ಮೊದಲ ಶಾಹಿದ್ ಮುರಬ್ಬಿ ಆಗಿದ್ದರು. ದಿವಂಗತರ ತಾಯಿ ಶಾರುಖ್ ನಸ್ರೀನ್ ಸಾಹಿಬಾ ಅವರು ಸೈಯದ್ ಬಶೀರ್ ಅಹ್ಮದ್ ಶಾ ಸಾಹಿಬ್ ರಬ್ವಾ ಮತ್ತು ಫರೂಖ್ ಖಾನುಮ್ ಸಾಹಿಬಾ ರಬ್ವಾ ಅವರ ಪುತ್ರಿಯಾಗಿದ್ದರು. ಫರೂಖ್ ಖಾನುಮ್ ಸಾಹಿಬಾ ಜುನೂದ್ ಕುಟುಂಬಕ್ಕೆ ಸೇರಿದವರು. ಅವರು ತಮ್ಮ ತಾಯಿ ಹಲೀಮಾ ಬಾನೋ ಸಾಹಿಬಾ ಮತ್ತು ಸಹೋದರ ಸೈಯದ್ ಹಾಜಿ ಜುನೂದುಲ್ಲಾ ಸಾಹಿಬ್ ಅವರೊಂದಿಗೆ ಇಮಾಮ್ ಮಹದಿ ಅಲೈಹಿಸ್ಸಲಾಮ್ ಅವರು ಆಗಮಿಸಿದಾಗ, ನೀವು ಹಿಮದ ಮೇಲೆ ತೆವಳಬೇಕಾದರೂ ಅವರಿಗೆ ಬೈಅತ್ ಪ್ರತಿಜ್ಞೆ ಮಾಡಿ ಎಂಬ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಉಪದೇಶವನ್ನು ಅನುಸರಿಸಲು ಸಾಧ್ಯವಾಯಿತು. ಆದ್ದರಿಂದ ಈ ಜನರು ಹಿಮಪರ್ವತಗಳ ಮೇಲಿನ ಕಾಶ್ಗರ್‌ನಿಂದ ಖಾದಿಯನ್‌ಗೆ ಬಂದು ಬೈಅತ್ ಮಾಡಿದರು. ಮನ್ಸೂರ್ ಶಬೂತಿ ಸಾಹಿಬ್ ಅವರ ತಾಯಿ ಈ ಕುಟುಂಬದ ಸದಸ್ಯರಾಗಿದ್ದರು. ಅವರ ಅಜ್ಜಿ ಮಂಜುಗಡ್ಡೆಯ ಮೇಲೆ ನಡೆದು ಬಂದವರಲ್ಲಿ ಸೇರಿದ್ದರು.

ಶಹಾದತ್‌ನ ಘಟನೆಯ ಬಗ್ಗೆ ಅವರ ಪುತ್ರ ಬಿಲಾಲ್ ಶುಬೂತಿ ಸಾಹಿಬ್ ಬರೆದಿದ್ದಾರೆ: ಭದ್ರತಾ ಪಡೆಗಳು ನಮ್ಮ ಮನೆಗೆ ಬಲವಂತವಾಗಿ ಪ್ರವೇಶಿಸಿತು. ನಮ್ಮ ತಂದೆಯನ್ನು ತಳ್ಳಿದರು. ಅವರ ಎದೆಯ ಮೇಲೆ ಬಂದೂಕು ಇರಿಸಿದರು. ತದನಂತರ ಅವರು ನನ್ನನ್ನು ಮತ್ತು ನನ್ನ ತಂದೆಯನ್ನು ಕರೆದೊಯ್ಯಲು ಪ್ರಾರಂಭಿಸಿದರು, ಆದ್ದರಿಂದ ನನ್ನ ತಂದೆ "ನನ್ನನ್ನು ಬೇಕಾದರೆ ಕೊಲ್ಲಿ, ಆದರೆ ನನ್ನ ಮಗನನ್ನು ತೆಗೆದುಕೊಳ್ಳಬೇಡ" ಎಂದು ಹೇಳಿದರು. ಅಹ್ಮದೀಯರಲ್ಲದವರಲ್ಲಿ ಜನಾಝವನ್ನು ನಿರ್ವಹಿಸಿದಾಗ, ಕೇವಲ ಹದಿನಾರು ವರ್ಷ ವಯಸ್ಸಿನ ಅವರ ಅಹ್ಮದಿ ಪುತ್ರರೊಬ್ಬರು ಮಾತ್ರ ಅವರೊಂದಿಗೆ ಸೇರಿಕೊಂಡರು. ಮತ್ತು ಯಾರು ಅಹಮದಿ ಪುರುಷ ಇರಲಿಲ್ಲ. ಆದಾಗ್ಯೂ, ಅವರು ಹೇಳುತ್ತಾರೆ ಅವರು ನಮ್ಮ ತಂದೆಯವರಲ್ಲಿದ್ದ ಹಣವನ್ನು ಪಡೆದು ಯಾರೋ ಹೊರಗಿನಿಂದ ನಿಮಗೆ ಹಣ ಕಳುಹಿಸುತ್ತಾರೆ ಎಂದು ಹೇಳಿದರು. ಅದಕ್ಕೆ ನಮ್ಮ ತಂದೆ ಹೇಳಿದರು ನನಗೆ ಯಾರೂ ಹೊರಗಿನಿಂದ ಹಣ ಕಳುಹಿಸುವುದಿಲ್ಲ. ನನ್ನ ಸ್ವಂತ ದುಡಿಮೆಯ ಹಣವಿದೆ.

ಈ ತಪ್ಪು ತಿಳುವಳಿಕೆಯನ್ನು ವಿದ್ವಾಂಸರು, ಅಹ್ಮದೀಯರಲ್ಲದವರಲ್ಲಿ ಪಂಡಿತರು ಎಂದು ಕರೆಯಲ್ಪಡುವವರು ಎಲ್ಲೆಡೆ ಸೃಷ್ಟಿಸಿದ್ದಾರೆ. ನೌಝುಬಿಲ್ಲಾಹ್ ನಾವು ಪಾಶ್ಚಿಮಾತ್ಯ ಶಕ್ತಿಗಳಿಂದ ಹಣವನ್ನು ತೆಗೆದುಕೊಳ್ಳುತ್ತೇವೆ ಮತ್ತು ನಮ್ಮ ಅಜೆಂಡಾ ಅವರ ಇಸ್ಲಾಂಗೆ ವಿರುದ್ಧವಾಗಿದೆ, ಆದರೂ ಪ್ರತಿಯೊಬ್ಬ ಅಹ್ಮದಿಯು ಸ್ವತಃ ಆರ್ಥಿಕ ತ್ಯಾಗ ಮಾಡಿ ಇಸ್ಲಾಮ್ ಧರ್ಮದ ಮತ್ತು ಮಾನವೀಯತೆಯ ಸೇವೆ ಮಾಡುತ್ತಿದ್ದಾನೆ. ಆದಾಗ್ಯೂ, ಉಳಿದ ವಿವರಣೆಯು ದೀರ್ಘವಾಗಿದೆ.

ಅದರ ನಂತರ ನಾನು ಅವರ ಪತ್ನಿ ನನಗೆ ಕಳುಹಿಸಿದ ಹೇಳಿಕೆಯನ್ನು ವಿವರಿಸುತ್ತೇನೆ. ಅವರು ಹೇಳುತ್ತಾರೆ: ಅವರು ಅಂದರೆ ಜೈಲರ್‌ಗಳು ನನ್ನ ಪತಿಯನ್ನು ಜೈಲಿನಲ್ಲಿ ಇರಿಸಿದ್ದ ಸ್ಥಳವನ್ನು ನನಗೆ ತೋರಿಸಿದರು. ನಮಾಝ್ ಮತ್ತು ನವಾಫಿಲ್ ಸಮಯದಲ್ಲಿ ನನ್ನ ಪತಿ ಆಗಾಗ್ಗೆ ತನ್ನ ಕೋಣೆಯಲ್ಲಿ ಅಳುತ್ತಿದ್ದರು ಎಂದು ಅವರು ಹೇಳಿದರು. ಡಾ. ಸಾಹಿಬ್ ಅವರು ಯೆಮನ್‌ನಲ್ಲಿ ಮಿಲಿಟಿಯಾ ಪಡೆಗಳನ್ನು ನಿರ್ಮಿಸಲು ಬ್ರಿಟನ್‌ನಿಂದ ಹಣವನ್ನು ಪಡೆಯುತ್ತಾರೆ ಎಂದು ಕೆಲವು ಅಹ್ಮದೀಯರು ವರದಿ ಮಾಡಿದ್ದಕ್ಕಾಗಿ ಡಾ. ಸಾಹಿಬ್ ಅವರನ್ನು ಜೈಲಿಗೆ ಹಾಕಲಾಯಿತು ಎಂದು ಅವರು ಹೇಳಿದರು. ಅದೇ ಸುಳ್ಳು ಆರೋಪ. ಆದರೆ ಸಂಶೋಧನೆಯಿಂದ ಅದು ಸುಳ್ಳು ಎಂದು ತಿಳಿಯಿತು. ಒತ್ತಡದಿಂದಾಗಿ ಅವರ ಆರೋಗ್ಯ ಹದಗೆಟ್ಟಾಗ ಅವರನ್ನು ಬಿಡುಗಡೆ ಮಾಡಲು ಮುಂದಾಗಿದ್ದೆವು. ಆದರೆ, ಇದು ಅವರ ಪತ್ನಿಗೆ ಹೇಳಿರುವ ಹೇಳಿಕೆಯಾಗಿದೆ. ಹೈಕಮಾಂಡ್ ಧೋರಣೆಯೇ ಭಿನ್ನವಾಗಿರಬಹುದು ಮತ್ತು ಕೆಳಸ್ತರದಲ್ಲಿರುವವರು ತಮ್ಮ ಅನಿಯಂತ್ರಿತ ಕೆಲಸಗಳನ್ನು ಮಾಡಲು ಹೆಚ್ಚು ಒಲವು ತೋರುತ್ತಾರೆ ಮತ್ತು ಅವರ ಕಟ್ಟುನಿಟ್ಟಿನ ಕಾರಣದಿಂದಾಗಿ ಅವರ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು.

ಆದಾಗ್ಯೂ, ಅವರ ಸಹೋದರ ನಾಸಿರ್ ಶಬೂತಿ ಅವರ ಜೀವನ ಚರಿತ್ರೆಯನ್ನು ವಿವರಿಸುವಾಗ ಹೇಳುತ್ತಾರೆ: ನಮ್ಮ ಸಹೋದರ ಡಾ. ಅಧ್ಯಯನದಲ್ಲಿ ಅತ್ಯಂತ ಉಜ್ವಲ, ಇಡೀ ದೇಶದ ಅಗ್ರ ಹತ್ತು ವಿದ್ಯಾರ್ಥಿಗಳಲ್ಲಿ ಒಬ್ಬರಾಗಿದ್ದರು, ಅವರು ಸರ್ಕಾರದಿಂದ ಪ್ರಶಸ್ತಿ ಪಡೆದಿದ್ದಾರೆ. ದಿನದ ಐದು ಹೊತ್ತಿನ ನಮಾಝ್ ಮತ್ತು ತಹಜ್ಜುದ್ ನಿರ್ವಹಿಸಲು ನಿರ್ಬಂಧವನ್ನು ಹೊಂದಿದ್ದರು, ಫಜ್ರ್ ನಂತರ ನಿಯಮಿತವಾಗಿ ಪವಿತ್ರ ಖುರ್‌ಆನ್ ಅನ್ನು ಪಠಿಸುತ್ತಿದ್ದರು ಮತ್ತು ಅತ್ಯಂತ ನಿಯಮಿತವಾದವರಾಗಿದ್ದರು. ಸಂಬಂಧಿಕರಿಗಿಂತ ಮೊದಲು ಇತರರಿಗೆ

ಚಿಕಿತ್ಸೆ ನೀಡುವುದು ಮತ್ತು ಸಹಾಯ ಮಾಡುವುದು. ರೋಗಿಗಳೊಂದಿಗೆ ಯಾವಾಗಲೂ ನಗುಮುಖದಿಂದ ಮಾತನಾಡುವುದು. ಬಡ ರೋಗಿಗಳಿಂದ ಯಾವುದೇ ಹಣವನ್ನು ತೆಗೆದುಕೊಳ್ಳದಿರುವುದು. ಯಾರಿಗಾದರೂ ಆಸ್ಪತ್ರೆಗೆ ದಾಖಲು ಮಾಡಬೇಕಾದಲ್ಲಿ ಔಷಧಿ ಕೊಟ್ಟು ಸಹಾಯ ಮಾಡುತ್ತಿದ್ದರು. ಬಡವರ ಕಾರ್ಯಾಚರಣೆಯ ಸಂದರ್ಭದಲ್ಲಿ, ಅವರು ತಮ್ಮ ಸಂಬಳದಿಂದ ಕಾರ್ಯಾಚರಣೆಯ ಶುಲ್ಕವನ್ನು ನೀಡುತ್ತಿದ್ದರು. ಮತ್ತೆ ಅವರು ಹೇಳುತ್ತಾರೆ: ನಮ್ಮ ನೆರೆಹೊರೆಯವರಲ್ಲಿ ಯಾರಾದರು ಅನಾರೋಗ್ಯಕ್ಕೆ ಒಳಗಾದಾಗಲೆಲ್ಲ ಅವರು ನಮ್ಮ ಸಹೋದರನ ಬಳಿಗೆ ಚಿಕಿತ್ಸೆಗೆ ಬರುತ್ತಿದ್ದರು. ಮತ್ತು ಅವರು 'ಸನ್‌ಆ' ಎಂಬ ಇನ್ನೊಂದು ನಗರಕ್ಕೆ ಹೋದಾಗ, ನೆರೆಹೊರೆಯವರು ತುಂಬಾ ದುಃಖಿತರಾಗಿದ್ದರು. ಅವರು ತಮ್ಮ ಪೋಷಕರಿಗೆ ತುಂಬಾ ಕರುಣಾಮಯಿಯಾಗಿದ್ದರು. ಹಜ್ಜ್ ಯಾತ್ರೆಯನ್ನೂ ಕೂಡ ಮಾಡಿಸಿದರು.

ಡಾಕ್ಟರ್ ಸಾಹಿಬ್ ಅವರ ತಾಯಿ ಶಾಹ್‌ರುಖ್ ನಸ್ರಿನ್ ಸಾಹಿಬ ಹೇಳುತ್ತಾರೆ: ನಾನು ಗರ್ಭಿಣಿಯಾಗಿದ್ದಾಗ, ನಾನು ಕನಸಿನಲ್ಲಿ ನೋಡಿದೆ ರಬ್ವಾಹ್ನ ಒಳ್ಳೆಯ ಮಹಿಳೆ, ಅವರ ಹೆಸರು ಝೈನಬ್ ಎಂದಾಗಿತ್ತು, ನನ್ನ ತಾಯಿಯನ್ನು ತನ್ನ ತೋಳುಗಳಲ್ಲಿ ಎತ್ತಿಕೊಂಡು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರುತ್ತಿದ್ದಾರೆ ಎಂದು ಹೇಳುತ್ತಿದ್ದರು. ನಾನು ಹುಝೂರ್(ಅ) ರನ್ನು ಹುಡುಕುತ್ತಾ ಅಲ್ಲಿ ಇಲ್ಲಿ ನೋಡುತ್ತೇನೆ ಆದರೆ ನಾನು ಯಾರನ್ನೂ ನೋಡುವುದಿಲ್ಲ. ಅದರ ನಂತರ ಕಣ್ಣು ತೆರೆಯಿತು. ಡಾಕ್ಟರ್ ಸಾಹಿಬ್ ಅವರಿಗೆ ತಮ್ಮ ಬಾಲ್ಯದಿಂದಲೂ ತಬ್ಲೀಗ್‌ನ್ನು ಇಷ್ಟಪಡುತ್ತಿದ್ದರು. ಶಾಲೆಯಲ್ಲಿ, ದೇವತಾಶಾಸ್ತ್ರದ ಶಿಕ್ಷಕರು ಅಹ್ಮದಿಯತ್ ಬಗ್ಗೆ ತಬ್ಲೀಗ್ ಮಾಡುತ್ತಿದ್ದರು. ಟೀಚರ್ ಕೂಡ ಯಾವುದೇ ವಿರೋಧವಿಲ್ಲದೆ ಅವರ ಮಾತನ್ನು ಆಲಿಸುತ್ತಿದ್ದರು.

ಅವರ ಒಬ್ಬ ಪುತ್ರ ಐಮನ್ ಶಬೂತಿ ಜರ್ಮನಿಯಲ್ಲಿದ್ದಾರೆ ಅವರು ಹೇಳುತ್ತಾರೆ: ದಿವಂಗತ ತಂದೆ ನನ್ನನ್ನು ಎಂದಿಗೂ ಬೈಯಲಿಲ್ಲ ಅಥವಾ ಹೊಡೆಯಲಿಲ್ಲ. ಒಂದು ಸಲ ನನಗೆ ಹೊಡೆದದ್ದು ನೆನಪಿದೆ. ನಾನು ಹದಿಮೂರು ವರ್ಷ ವಯಸ್ಸಿನವನಾಗಿದ್ದೆ ಮತ್ತು ಆ ಸಮಯದಲ್ಲಿ ನಾನು ಬಾ ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸಲು ನಿರಾಕರಿಸಿದೆ. ಆಗ ನನಗೆ ಸ್ವಲ್ಪ ಹೊಡೆದರು. ಆದರೆ ನಂತರ ಎಂದಿಗೂ ನನಗೆ ಹೊಡೆಯಲಿಲ್ಲ. ಕಷ್ಟದ ಸಮಯದಲ್ಲಿ ಪ್ರಾರ್ಥಿಸಲು ತಂದೆ ಯಾವಾಗಲೂ ನನಗೆ ಸಲಹೆ ನೀಡುತ್ತಿದ್ದರು. ಅವರೇ ಸ್ವತಃ ಅದನ್ನು ಮಾಡುತ್ತಿದ್ದರು. ನಾನು ಅವರನ್ನು ಸಜದಗಳಲ್ಲಿ ಅಳುತ್ತಿರುವುದನ್ನು ನಾನು ನೋಡಿದೆ. ನಾನು ಶಾಲೆಯಲ್ಲಿದ್ದಾಗ, ಬಾಲ್ಯದಲ್ಲಿ ಫಜ್ರ್ ನಮಾಜಿಗೆ ನಮ್ಮನ್ನು ಎಬ್ಬಿಸುತ್ತಿದ್ದರು. ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸುತ್ತಿದ್ದೆವು. ಆ ನಂತರ ಪವಿತ್ರ ಖುರ್‌ಆನ್‌ನ ತಿಲಾವತ್ ಮಾಡುತ್ತಿದ್ದೆವು. ಶಸ್ತ್ರಚಿಕಿತ್ಸೆಯಲ್ಲಿ ಪಿಎಚ್ ಡಿ ಮಾಡಿದರು. ಇದಕ್ಕಾಗಿ ಅವರು ಜೋರ್ಡಾನ್‌ಗೆ ಹೋದರು ಮತ್ತು ಐದು ವರ್ಷಗಳ ಕಾಲ ಅಲ್ಲಿಯೇ ಇದ್ದರು. ಅವರು ಹೇಳುತ್ತಾರೆ: ನಾನು ಸಹ ಅಲ್ಲಿಗೆ ಅವರ ಬಳಿಗೆ ಹೋಗಿದ್ದೆ ಮತ್ತು ಜುಮುಅ ನಡೆಯುತ್ತಿದ್ದ ಮಸೀದಿ ಅಥವಾ ಕೇಂದ್ರವು ಒಂದು ಗಂಟೆ ದೂರದಲ್ಲಿತ್ತು. ಪ್ರತಿ ಜುಮುಅ ಅಲ್ಲಿ ಓಡಾಡುತ್ತಿದ್ದರು. ಅವರು ಅಧ್ಯಯನದಲ್ಲಿ ತುಂಬಾ ಒಲವು ಹೊಂದಿದ್ದರು. ಜಮಾತ್‌ನ ಪುಸ್ತಕಗಳನ್ನು ಹೆಚ್ಚು ಓದುತ್ತಿದ್ದರು. ಅವರು ಜೋರ್ಡಾನ್‌ನಿಂದ ಹಿಂತಿರುಗಿದಾಗ, ಚೀಲವು ಸಾಕಷ್ಟು ಭಾರವಾಗಿತ್ತು, ಆದ್ದರಿಂದ ಅವರು ಸಾಕಷ್ಟು ಉಡುಗೊರೆಗಳನ್ನು ತಂದಿದ್ದಾರೆ ಎಂದು ನಾನು ಭಾವಿಸಿದೆ. ಮಕ್ಕಳು ತಮ್ಮ ಪೋಷಕರು ತರುವುದನ್ನು ಇಷ್ಟಪಡುತ್ತಾರೆ, ಆದರೆ ಚೀಲದಲ್ಲಿ ಯಾವುದೇ ಉಡುಗೊರೆಗಳು ಇರಲಿಲ್ಲ. ತಫ್ಸೀರ್ ಕಬೀರ್ ಮತ್ತು ಇತರ ಕೆಲವು ಧಾರ್ಮಿಕ ಪುಸ್ತಕಗಳ ಅರೇಬಿಕ್ ಅನುವಾದವಿತ್ತು.

ಅವರು ಅಹಮದೀಯರಲ್ಲದಿದ್ದರೂ ಅವರ ಸಂಬಂಧಿಕರನ್ನು ಭೇಟಿಯಾಗುತ್ತಿದ್ದರು. ಅವರು ನನ್ನನ್ನು ಮತ್ತು ನನ್ನ ತಾಯಿಯನ್ನು ಕರೆದುಕೊಂಡು ಹೋಗುತ್ತಿದ್ದರು ಎಂದು ಅವರು ಹೇಳುತ್ತಾರೆ. ಅಹ್ಮದೀಯರಲ್ಲದ ಸಂಬಂಧಿಕರನ್ನು ಭೇಟಿ ಮಾಡುವುದು ಏಕೆ ಮುಖ್ಯ? ಎಂದು ನಾನು ಅವರಲ್ಲಿ ಕೇಳಿದಾಗ ಅವರು ಹೇಳಿದರು ಹಝ್ರತ್ ಪೈಗಂಬರ್(ಸ)ರವರು ಸಂಬಂಧಿಕರೊಂದಿಗೆ ಕರುಣೆ ತೋರಿಸುವುದಾಗಿ ಆದೇಶಿಸಿದ್ದಾರೆ. ಒಂದುವೇಳೆ ಸಂಬಂಧಿಕರೊಂದಿಗೆ ಸಂಬಂಧ ಹೊಂದಿಲ್ಲದಿದ್ದರೆ, ಅಲ್ಲಾಹನು ಕೋಪಗೊಳ್ಳುತ್ತಾನೆ.

ಮರ್ವ ಶಬೂತಿ ಸಾಹಿಬಾ ಹೇಳುತ್ತಾರೆ: ಅವರು ಅತ್ಯಂತ ಗೌರವಾನ್ವಿತ, ನೀತಿವಂತ, ಸದ್ಗುಣಶೀಲ, ಯಾವಾಗಲೂ ನಗುತ್ತಿರುವ, ಪ್ರೀತಿಯಿಂದ, ಸಹಕಾರಿ, ಸಭ್ಯ, ಉದಾರ, ದಯೆ ಮತ್ತು ಅತ್ಯಂತ ಬುದ್ಧಿವಂತರಾಗಿದ್ದರು. ಅವರು ಯಾವಾಗಲೂ ಅಧ್ಯಯನದಲ್ಲಿ ಉತ್ಕೃಷ್ಟರಾಗಿದ್ದರು ಮತ್ತು ಯೆಮನ್‌ನಾದ್ಯಂತ ಪ್ರಸಿದ್ಧ ವೈದ್ಯರಾಗಿದ್ದರು. ಅವರು ಮಾನವ ಸೇವೆ ಮತ್ತು ಅಹ್ಮದೀಯತ್‌ನ ಸೇವೆಯಲ್ಲಿ ಬಹಳ ಪ್ರಮುಖರಾಗಿದ್ದರು. ಅವರು ಎಲ್ಲಾ ಅಹ್ಮದೀಯರು ಮತ್ತು ಅಹ್ಮದೀಯರಲ್ಲದವರಿಂದ ಪ್ರೀತಿಪಾತ್ರರಾಗಿದ್ದರು ಮತ್ತು ಎಲ್ಲರೂ, ಅಹ್ಮದೀಯರಲ್ಲದವರು ಸಹ ಅವರ ನಿಧನದಿಂದ ತೀವ್ರ ದುಃಖಿತರಾಗಿದ್ದಾರೆ.

ಅಹ್ಮದಿಯೇತರರಿಂದಲೂ ಅನಿಸಿಕೆಗಳು ಲಭಿಸಿವೆ. ಜನರಲ್ ಸರ್ಜರಿ ಕನ್ಸಲ್ಟೆಂಟ್ ಡಾ. ಮನ್ಸೂರ್ ಶಾಬೂತಿ ಅವರು ನಿಧನರಾಗಿದ್ದಾರೆ ಎಂದು ವರದಿ ಮಾಡಿರುವುದು ಅತ್ಯಂತ ಸಂಕಟ ಮತ್ತು ದುಃಖದಿಂದ ಕೂಡಿದೆ **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಯೆಮೆನ್ ವೈದ್ಯರ ಒಕ್ಕೂಟ ಹೇಳಿಕೆ ನೀಡಿದೆ. ತದನಂತರ ಅದೇ ಮೆಡಿಕಲ್ ಕೌನ್ಸಿಲ್ ನವರು ಅವರ ನಿಗೂಢ ಸಾವಿನಿಂದಾಗಿ ವೈದ್ಯಕೀಯ ವಲಯದಲ್ಲಿ ಆತಂಕ ಮೂಡಿದೆ ಎನ್ನುತ್ತಾರೆ. ಈವರೆಗೆ ಸಿಕ್ಕಿರುವ ಮಾಹಿತಿ ಪ್ರಕಾರ ಬಂಧನಕ್ಕೂ ಮುನ್ನ ಡಾ.ಮನ್ಸೂರ್ ಅವರ ಆರೋಗ್ಯ ಚೆನ್ನಾಗಿತ್ತು. ಅವರ ಬಂಧನಕ್ಕೆ ಕಾರಣವನ್ನು ನೀಡಲಾಗಿಲ್ಲ ಮತ್ತು ಎರಡು ವಾರಗಳವರೆಗೆ ಅವರನ್ನು ಎಲ್ಲಿಗೆ ಕರೆದೊಯ್ಯಲಾಗಿದೆ ಎಂಬುದು ತಿಳಿದಿಲ್ಲ. ಅವರ ಸಾವಿಗೆ ಕೆಲವೇ ದಿನಗಳ ಮೊದಲು, ಅವರನ್ನು ಸಾರ್ವಜನಿಕರಿಗೆ ಬಹಳ ಕೆಟ್ಟ ಸ್ಥಿತಿಯಲ್ಲಿ ತರಲಾಯಿತು.

ಅವರ ಕೆಲವು ಅಹ್ಮದಿಯೇತರ ಸ್ನೇಹಿತರು ಕೂಡ ಸಾಮಾಜಿಕ ಮಾಧ್ಯಮದಲ್ಲಿ ಬರೆದಿದ್ದಾರೆ. ಓರ್ವ ಅಹ್ಮದಿಯೇತರ ಡಾ.ಖಾಲಿದ್ ಅದೀಬ್ ಹೇಳುತ್ತಾರೆ, ನಾನು ಮೊದಲ ಬಾರಿಗೆ 'ಸನ್‌ಆ' ಆಸ್ಪತ್ರೆಯ ತುರ್ತು ವಿಭಾಗಕ್ಕೆ ಕೆಲಸಕ್ಕೆ ಹೋದಾಗ, ಯುವ ವೈದ್ಯರ ಸುತ್ತಲೂ ಅನೇಕ ವೈದ್ಯರು ನಿಂತಿರುವುದನ್ನು ನಾನು ನೋಡಿದೆ. ನನ್ನ ವಿಚಾರಣೆಯಲ್ಲಿ, ಸಹೋದ್ಯೋಗಿಯೊಬ್ಬರು ಡಾ. ಮನ್ಸೂರ್ ಶಾಬೂತಿ ಅವರು ಸಾಮಾನ್ಯ ಶಸ್ತ್ರಚಿಕಿತ್ಸೆ ಸಲಹೆಗಾರರಾಗಿದ್ದಾರೆ ಮತ್ತು ಎಲ್ಲಾ ವೈದ್ಯರಿಗಿಂತ ಹೆಚ್ಚು ದಣಿವರಿಯಿಲ್ಲ ಮತ್ತು ಸಹಕಾರಿ ಎಂದು ಹೇಳಿದರು. ಎಲ್ಲಾ ವೈದ್ಯರು ಮತ್ತು ವಿದ್ಯಾರ್ಥಿಗಳು ಅವರೊಂದಿಗೆ ಕೆಲಸ ಮಾಡಲು ಇಷ್ಟಪಡುತ್ತಾರೆ ಏಕೆಂದರೆ ಅವರು ಎಲ್ಲರಿಗೂ ಸಾಧ್ಯವಾದಷ್ಟು ಹೆಚ್ಚು ಹೆಚ್ಚಾಗಿ ವಿವರಿಸಲು ಪ್ರಯತ್ನಿಸುತ್ತಾರೆ. ಅವರು ಐಶ್ವರ್ಯಕ್ಕಾಗಿ, ಸ್ಥಾನಕ್ಕಾಗಿ ಅಥವಾ ಖ್ಯಾತಿಗಾಗಿ ದುರಾಸೆಯಲ್ಲ. ಮೃತರು ತುಂಬಾ ಶಾಂತ ಸ್ವಭಾವದವರಾಗಿದ್ದರು, ಬಹಳ ಶ್ರದ್ಧೆಯುಳ್ಳವರಾಗಿದ್ದರು, ಅವರು ತಮ್ಮ ಸ್ವಂತ ಆರೋಗ್ಯವನ್ನು ನೋಡಿಕೊಳ್ಳುವರು, ಯಾವಾಗಲೂ ನಗುತ್ತಿರುವವರು ಮತ್ತು ಹೆಚ್ಚಿನ ನೈತಿಕತೆಯನ್ನು ಹೊಂದಿದ್ದರು. ಅವರು ಸ್ವಾರ್ಥ ಮತ್ತು ಪ್ರಪಂಚದ ಪ್ರೀತಿಯಿಂದ ಬಹಳ ದೂರವಿದ್ದರು.

ನಿಮ್ಮ ಸಾವು ಯೆಮನ್‌ಗೆ ದೊಡ್ಡ ನಷ್ಟ ಎಂದು ಸ್ನೇಹಿತರೊಬ್ಬರು ಬರೆದಿದ್ದಾರೆ. ಯಮನ್ ಶುದ್ಧ ಹೃದಯವನ್ನು ಹೊಂದಿದ್ದ ಮತ್ತು ರೋಗಿಗಳ ಸೇವೆಯಲ್ಲಿ ತನ್ನ ಜೀವನವನ್ನು ಕಳೆದ ಒಬ್ಬ ಒಳ್ಳೆಯ ಮನುಷ್ಯನನ್ನು ಕಳೆದುಕೊಂಡಿದೆ.

ತದನಂತರ ಸ್ನೇಹಿತರೊಬ್ಬರು ಡಾ.ಮನ್ಸೂರ್ ಅವರ ಕೈಯಲ್ಲಿ ಸಾಕಷ್ಟು ಚಿಕಿತ್ಸೆ ಇತ್ತು ಎಂದು ಬರೆದಿದ್ದಾರೆ. ಅವರು ಬಹಳ ಉನ್ನತ ನೈತಿಕತೆಯನ್ನು ಹೊಂದಿದ್ದರು. ದಕ್ಷಿಣ ಯೆಮೆನ್‌ನ ಎಲ್ಲಾ ಪತ್ರಿಕೆಗಳು ಅವರ ಸಾವಿನ ಸುದ್ದಿಯನ್ನು ವಿವಿಧ ಶೀರ್ಷಿಕೆಗಳಲ್ಲಿ ಪ್ರಕಟಿಸಿವೆ, ಉದಾಹರಣೆಗೆ, ಒಂದು ಸುದ್ದಿ ಅತ್ಯಂತ ಪ್ರಸಿದ್ಧ ವೈದ್ಯನ ಹತ್ಯೆಯಾಗಿದೆ. ಅತ್ಯಂತ ಪ್ರಸಿದ್ಧ ವೈದ್ಯರ ಸಾವು. ಅತ್ಯಂತ ಪ್ರಸಿದ್ಧ ವೈದ್ಯರ ಅಪಹರಣ ಇತ್ಯಾದಿ.

ಆದಾಗ್ಯೂ, ಅವರ ಮೂಲಕ, ಅಹ್ಮದಿಯಾ ಎಂಬ ಹೆಸರು ಯೆಮನ್‌ನಲ್ಲಿ ಸಾಕಷ್ಟು ಹರಡಿದೆ ಮತ್ತು ಸರ್ವಶಕ್ತನಾದ ಅಲ್ಲಾಹನು ಪ್ರಚಾರದ ಮೂಲವಾಗಲಿ ಎಂದು ಒಬ್ಬರು ನನಗೆ ಬರೆದಿದ್ದಾರೆ. ಮೃತರ ಮೇಲೆ ಅಲ್ಲಾಹನು ಕರುಣೆ ಮತ್ತು ಕ್ಷಮೆಯನ್ನು ನೀಡಲಿ. ಶ್ರೇಣಿಗಳನ್ನು ಹೆಚ್ಚಿಸಲಿ. ಅವರ ಕುಟುಂಬಗಳಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ ಮತ್ತು ಪರಿಸ್ಥಿತಿಯನ್ನು ಸುಧಾರಿಸಲು ಅವಕಾಶ ಮಾಡಿಕೊಡಲಿ. ಅದೇ ಸಮಯದಲ್ಲಿ, ಅಲ್ಲಿ ಬಂಧಿತರಾಗಿರುವ ಚಿಕ್ಕ ಜಮಾಅತ್ತಿನ ಸದಸ್ಯರು ಬಂಧನದಲ್ಲಿದ್ದಾರೆ, ಆದಷ್ಟು ಬೇಗ ಈ ಬಂಧಿತರನ್ನು ಬಿಡುಗಡೆ ಮಾಡಲು ಸರ್ವಶಕ್ತನಾದ ಅಲ್ಲಾಹನು ಮಾರ್ಗವನ್ನು ಒದಗಿಸಲಿ.

ಎರಡನೇ ಉಲ್ಲೇಖವು ಮುಕರ್ರಮ್ ಸಲಾವುದ್ದೀನ್ ಮುಹಮ್ಮದ್ ಸಾಲೆಹ್ ಅಬ್ದುಲ್ ಖಾದಿರ್ ಔದಾ ಸಾಹಿಬ್ ಅವರದ್ದಾಗಿದೆ. ಅವರು ಶರೀಫ್ ಔದಾ ಸಾಹಿಬ್, ಅಮೀರ್ ಜಮಾತ್ ಕಬಾಬೀರ್ ಅವರ ತಂದೆಯಾಗಿದ್ದಾರೆ. ಜನವರಿ 31 ರಂದು, ಅವರು ಹೃದಯ ಸಮಸ್ಯೆಯಿಂದ ಬಳಲುತ್ತಿದ್ದರು ಮತ್ತು ಎಂಬತ್ತೈದನೇ ವಯಸ್ಸಿನಲ್ಲಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಮೂವರು ಪುತ್ರರಾದ ಮಹಮ್ಮದ್ ಶರೀಫ್ ಔದಾ ಸಾಹಿಬ್, ಮುನೀರ್ ಔದಾ ಸಾಹಿಬ್ ಮತ್ತು ಅಮೀರ್ ಔದಾ ಸಾಹಿಬ್ ಮತ್ತು ಪುತ್ರಿ ಮನಾಲ್ ಔದಾ ಸಾಹಿಬ್ ಅವರನ್ನು ಅಗಲಿದ್ದಾರೆ. ಮೊಮ್ಮಕ್ಕಳು ಇದ್ದಾರೆ. ಅವರ ಇಬ್ಬರು ಮೊಮ್ಮಕ್ಕಳಾದ ಅಜೀಜ್ ಮಸ್ರೂರ್ ಮುನೀರ್ ಔದಾ ಮತ್ತು ಬಶೀರುದ್ದೀನ್ ಮೆಹಮೂದ್ ಔದಾ ಅವರು ಯುಕೆ ಮತ್ತು ಕೆನಡಾದ ಜಾಮಿಯಾದಲ್ಲಿ ಅಧ್ಯಾಯನ ಮಾಡುತ್ತಿದ್ದಾರೆ.

ಶರೀಫ್ ಔದಾ ಸಾಃಇಬ್ ಬರೆಯುತ್ತಾರೆ: ದಿವಂಗತರ ಅಜ್ಜ ಅಲ್ಹಾಜ್ ಸಾಲಿಹ್ ಅಬ್ದುಲ್ ಖಾದಿರ್ ಔದಾ ಸಾಹಿಬ್ ಅವರು 1928 ರಲ್ಲಿ ಬೈಅತ್ ಮಾಡಿದ ಪ್ಯಾಲೆಸ್ಟೈನ್‌ನ ಮೊದಲ ಅಹ್ಮದೀಯರಲ್ಲಿ ಒಬ್ಬರಾಗಿದ್ದರು. ಅವರ ನಂತರ, ಮೃತರ ಮುತ್ತಜ್ಜ ಅಬ್ದುಲ್ ಖಾದಿರ್ ಔದಾ ಸಾಹಿಬ್ ಅವರು ಬೈಅತ್ ಮಾಡಿದರು ಮತ್ತು ಸ್ವಲ್ಪ ಸಮಯದ ನಂತರ, ಮೃತರ ತಂದೆ ಮುಹಮ್ಮದ್ ಔದಾ ಸಾಹಿಬ್ ಅವರು ಸಹ ಬೈಅತ್ ಮಾಡಿದರು. ಹೀಗೆ

ಅಲ್ಲಾಹನ ಅನುಗ್ರಹದಿಂದ ದಿವಂಗತರ ತಂದೆ, ಅಜ್ಜ, ಮುತ್ತಜ್ಜ ಸಹ ಅಹ್ಮದಿಯಾಗಿದ್ದರು. ಅವರು 1939 ರಲ್ಲಿ ಜನಿಸಿದರು ಮತ್ತು ಹುಟ್ಟಿನಿಂದ ಅಹ್ಮದಿ ಆಗಿದ್ದರು. ದಿವಂಗತರು ಹದಿನಾಲ್ಕು ವರ್ಷದವರಾಗಿದ್ದಾಗ, ಒಂದು ದಿನ ಅವರು ತೀವ್ರ ಚಳಿಗಾಲದಲ್ಲಿ ಕೆಲಸಕ್ಕೆ ಹೋಗಿದ್ದರು ಮತ್ತು ಸರಿಯಾದ ಚಳಿಗಾಲದ ಬಟ್ಟೆಗಳನ್ನು ಧರಿಸಿರಲಿಲ್ಲ, ಆದ್ದರಿಂದ ಅವರ ದೇಹವು ಹೆಪ್ಪುಗಟ್ಟಿತು. ಅವರು ಪ್ರಜ್ಞೆ ತಪ್ಪಿದರು. ಸುದೀರ್ಘ ಹುಡುಕಾಟದ ನಂತರ ಅವರನ್ನು ಪತ್ತೆ ಮಾಡಿ ಆಸ್ಪತ್ರೆಗೆ ಕರೆತರಲಾಯಿತು. ಇದು ತುಂಬಾ ಹತಾಶ ಪರಿಸ್ಥಿತಿಯಾಗಿತ್ತು, ಆದ್ದರಿಂದ ವೈದ್ಯರು ಮೊದಲು, ಅವರು ಬದುಕುವುದು ಪವಾಡ ಎಂದು ಹೇಳಿದರು ಮತ್ತು ಅವರು ಬದುಕಿದ್ದರೂ, ಅವರು ಎಂದಿಗೂ ಮಕ್ಕಳನ್ನು ಹೊಂದಲು ಸಾಧ್ಯವಾಗುವುದಿಲ್ಲ ಎಂದಿದ್ದರು. ಆದ್ದರಿಂದ, ಚೌಧರಿ ಮುಹಮ್ಮದ್ ಶರೀಫ್ ಸಾಹಿಬ್ ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಸೇವೆಯಲ್ಲಿ ದುಆಗಾಗಿ ಬರೆದರು. ಅದರ ನಂತರ, ಅವರು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಗುಣಮುಖರಾದರು. ಮದುವೆಯೂ ಆಯ್ತು, ಸರ್ವಶಕ್ತನಾದ ಅಲ್ಲಾಹನು ಮಕ್ಕಳನ್ನೂ ದಯಪಾಲಿಸಿದನು. ಮೂವರು ಪುತ್ರರು ಮತ್ತು ಒಬ್ಬ ಪುತ್ರಿ. ದಿವಂಗತರು ತಮ್ಮ ತಂದೆಯಂತೆ ತಮ್ಮ ಜೀವನದುದ್ದಕ್ಕೂ ಮುಬಲ್ಲಿಗೀನರ ಸೇವೆಯಲ್ಲಿ ಪ್ರವರ್ತಕರಾಗಿದ್ದರು. ಅದೇ ರೀತಿ ಹಝ್ರತ್ ಮಸೀಹ್ ಮೌಊದ್(ಅ) ಅವರ ಅತಿಥಿಗಳಿಗೆ ಮನಃಪೂರ್ವಕವಾಗಿ ಸೇವೆ ಸಲ್ಲಿಸುತ್ತಿದ್ದರು ಮತ್ತು ಇದನ್ನು ಸಾಂತ್ವನ ಹೇಳಲು ಬಂದ ಎಲ್ಲರೂ ಸಾಕ್ಷಿಯಾಗಿದ್ದಾರೆ.

ಅತಿಥಿಗಳು ಅವರ ಔತಣಕೂಟಕ್ಕೆ ಒಗ್ಗಿಕೊಂಡರು ಎಂದು ಷರೀಫ್ ಔದಾ ಸಾಹಿಬ್ ಹೇಳುತ್ತಾರೆ. ಅತಿಥಿಗಳು ನಾವು ಅವರ ಬಳಿಗೆ ಹೋಗಿ ಔತಣಕೂಟವನ್ನು ಮಾಡಬೇಕೆಂದು ಬಯಸುತ್ತಿದ್ದರು. ಒಬ್ಬ ಪಾದರಿ ಭೇಟಿ ಮಾಡಲು ಬರಬೇಕಾಯಿತು. ಅದಕ್ಕೆ ಅವರು ಹೇಳಿದರು ಅವರ ತಂದೆ ಇಲ್ಲಿ ಇದ್ದಾರೆಯೇ? ಅದಕ್ಕೆ ಅವರು ಈಗಷ್ಟೆ ಹೊರಗೆ ಹೋಗಿದ್ದಾರೆ ಎಂದು ಹೇಳಿದರು: ಸರಿ, ನಾನು ಈಗ ಬರುವುದಿಲ್ಲ, ಆದರೆ ಅವರು ಬಂದಾಗ, ನಾನು ಅವರ ಔತಣಕೂಟವನ್ನು ಆನಂದಿಸಲು ಬರುತ್ತೇನೆ. ದಿವಂಗತರು ಬಡವರು ಮತ್ತು ನಿರ್ಗತಿಕರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಅವರಿಗಾಗಿ ಖರ್ಚು ಮಾಡುವವರಾಗಿದ್ದರು. ಅಂತಹ ನವಹ್ಮದಿಯರ ಕುಟುಂಬಗಳು ತಮ್ಮೊಂದಿಗೆ ಸಂಬಂಧವನ್ನು ಕಡಿದುಕೊಂಡು ಕಬಾಬೀರ್‌ನಲ್ಲಿ ಬಂದು ನೆಲೆಸಿದರು ಮತ್ತು ಮೃತರು ಅವರೆಲ್ಲರನ್ನು ಸಹೃದಯ ತಂದೆಯಂತೆ ಉಳಿಸಿಕೊಂಡರು. ಅವರ ನಿಧನದ ಸಂದರ್ಭದಲ್ಲಿ, ಮಹಿಳೆಯೊಬ್ಬರು ನನ್ನ ಪತಿ ದಿವಂಗತರ ಜೊತೆ ಹೆಚ್ಚು ಸಮಯ ಕಳೆಯುತ್ತಿದ್ದರು ಮತ್ತು ಈಗ ಅವರು ಯಾರ ಬಳಿಗೆ ಹೋಗಬೇಕೆಂದು ಅರ್ಥವಾಗುತ್ತಿಲ್ಲ ಎಂದು ಹೇಳಿದರು. ಆಗ ತಂದೆ ತನ್ನ ಪ್ರಾಯೋಗಿಕ ಉದಾಹರಣೆಯೊಂದಿಗೆ ನಮಗೆ ತರಬೇತಿ ನೀಡುತ್ತಿದ್ದರು ಎಂದು ಈ ಷರೀಫ್ ಸಾಹಿಬ್ ಹೇಳುತ್ತಾರೆ. ವಿವರಿಸುವ ಬದಲು ಈ ರೀತಿ ನಡೆದುಕೊಳ್ಳಬೇಕು ಎಂದು ತನ್ನ ನಡೆಗಳಿಂದ ತೋರಿಸುತ್ತಿದ್ದರು. ತಂದೆಗೆ ಅಧ್ಯಾಯನ ಮಾಡುವುದರಲ್ಲಿ ತುಂಬಾ ಒಲವಿತ್ತು. ಜಮಾಅತ್ತಿನ ಸಾಹಿತ್ಯದಿಂದ ಒಂದಲ್ಲ ಒಂದು ಪುಸ್ತಕವನ್ನು ಅವರು ಓದುತ್ತಿದ್ದರು. ಆದ್ದರಿಂದ, ಅವರ ಜ್ಞಾನವೂ ಬಹಳ ವಿಸ್ತಾರವಾಗಿತ್ತು.

ಮತ್ತೆ ಷರೀಫ್ ಸಾಹೇಬರು ಹೇಳುತ್ತಾರೆ: ಅವರ ವೃದ್ಧಾಪ್ಯದಲ್ಲಿ ನಮ್ಮ ಸಹಾಯ ಬೇಕು ಎಂದಲ್ಲ. ಅವರಿಗೆ ನಮ್ಮಿಂದ ಯಾವುದೇ ಸಹಾಯ ಬೇಕಾಗಿರಲಿಲ್ಲ ಬದಲಿಗೆ ಅವರು ನಮಗೆ ಸಹಾಯ ಮಾಡುತ್ತಿದ್ದರು ಮತ್ತು ತಮ್ಮ ಮಕ್ಕಳು ಜಮಾತ್ ಸೇವೆ ಮಾಡುತ್ತಿದ್ದಾರೆ ಎಂದು ಸಂತೋಷಪಡುತ್ತಿದ್ದರು.

ಅವರ ಮೊಮ್ಮಗಳು ಡಾ.ಯಾಸ್ಮೀನ್ ಹೇಳುತ್ತಾರೆ. ನಾನು ಕೆಲವು ವರ್ಷಗಳಿಂದ ನನ್ನ ಅಜ್ಜಿಯರ (ತಾಯಿಯ ತಂದೆ) ಮನೆಯಲ್ಲಿ ಅವರ ಮನೆಯಲ್ಲಿ ವಾಸಿಸುತ್ತಿದ್ದೆ. ನನ್ನ ದಿವಂಗತ ಅಜ್ಜ ನಮಾಝ್ ಮತ್ತು ತಹಜ್ಜುದ್ ನಮಾಝ್ ನಿರ್ವಹಿಸುವಲ್ಲಿ ಬದ್ಧರಾಗಿದ್ದರು ಮತ್ತು ಅವರ ಹೆಚ್ಚಿನ ಸಮಯವನ್ನು ಮಸೀದಿ ಮತ್ತು ಜಮಾಅತ್ತಿನ ಕೇಂದ್ರದಲ್ಲಿ ಕಳೆಯುತ್ತಿದ್ದರು ಎಂದು ನಾನು ನೋಡಿದೆ. ಜಮಾಅತ್ ಕೇಂದ್ರದಲ್ಲಿ ಅತಿಥಿಗಳಿಗೆ ಅಡುಗೆ ಮಾಡುವುದು, ಬಡಿಸುವುದು ಮತ್ತು ಇತರ ರಿಪೇರಿ ಇತ್ಯಾದಿಗಳನ್ನು ಮಾಡುವುದು ಅವರ ದಿನಚರಿಯಾಗಿತ್ತು. ಜಮಾತ್ ಪುಸ್ತಕಗಳನ್ನು ಓದುವುದು ಅವರ ನೆಚ್ಚಿನ ಹವ್ಯಾಸವಾಗಿತ್ತು, ಅವರ ಮರಣದ ದಿನವೂ ಅವರ ಹಾಸಿಗೆಯ ಮೇಲೆ ತೆರೆದ ಪುಸ್ತಕವಿತ್ತು. ಮನೆಯಲ್ಲಿ ಸ್ವಲ್ಪ ರಿಪೇರಿ ಕೆಲಸ ನಡೆಯಬೇಕಾಗಿತ್ತು, ಹಾಗಾಗಿ ನನ್ನ ದಿವಂಗತ ಅಜ್ಜರವರು ನಾನಿಜಾನ್‌ಗೆ ಹೇಳಿದಾಗ ಅವರು ಹೇಳಿದರು ನಮಗೆ ಅದರ ಅವಶ್ಯಕತೆ ಇಲ್ಲ ಏಕೆಂದರೆ ನಾವು ಶೀಘ್ರದಲ್ಲೇ ಸಾಯುತ್ತೇವೆ, ಆದ್ದರಿಂದ ಮನೆಯ ದುರಸ್ತಿಗೆ ಸಂಗ್ರಹಿಸಿದ ಹಣವನ್ನು ನಿರ್ಗತಿಕರಿಗೆ ನೀಡಬೇಕು ಅದು ಉತ್ತಮ. ಹೃದಯ ಶಸ್ತ್ರಚಿಕಿತ್ಸೆಯ ಸಮಯದಲ್ಲಿ, ಅವರ ಹೃದಯವು ತುಂಬಾ ದುರ್ಬಲವಾಗಿರುವುದನ್ನು ವೈದ್ಯರು ಗಮನಿಸಿದರು, ಆದರೆ ಅವರ ಅಪಧಮನಿಗಳು ಸಹ ಬಹುತೇಕ ನಿರ್ಬಂಧಿಸಲ್ಪಟ್ಟಿವೆ ಮತ್ತು ಅದು ಹೇಗೆ ಇಲ್ಲಿಯವರೆಗೆ ಚಲಿಸಲು ಸಾಧ್ಯವಾಯಿತು ಎಂದು ಆಶ್ಚರ್ಯಪಟ್ಟರು. ಆದಾಗ್ಯೂ, ಇದು ಅವರ ದುಆ ಕೂಡ ಆಗಿತ್ತು ಅಂದರೆ ಅವರ ನಿಧನವು ಓಡಾಡುವ ಸ್ಥಿತಿಯಲ್ಲೇ ಆಗಬೇಕು ಎಂದು. ಅವರು ಕೊನೆಯ ದಿನದವರೆಗೂ ಓಡಾಡುತ್ತಿದ್ದರು ಯಾರ ಅಗತ್ಯವೂ ಅವರಿಗೆ ಇರಲಿಲ್ಲ.

ಷರೀಫ್ ಔದಾ ಸಾಹಿಬ್ ಹೇಳುತ್ತಾರೆ, ತಂದೆ ಇತರರಿಗೆ ಉದಾರವಾಗಿ ಖರ್ಚು ಮಾಡುವವರಾಗಿದ್ದರು. ಒಂದು ದಿನ ವಯಸ್ಸಾದ ಸಂಬಂಧಿಯೊಬ್ಬರು ಸಹಾಯ ಕೇಳಿದರು, ಆದ್ದರಿಂದ ತಂದೆ ತನ್ನ ಜೇಬಿನಲ್ಲಿದ್ದ ಎಲ್ಲವನ್ನೂ ತೆಗೆದು ಅವರಿಗೆ ನೀಡಿದರು. ಮೌಲಾನಾ ಫಝಲ್ ಇಲಾಹಿ ಬಶೀರ್ ಸಾಹಿಬ್ ಅವರು ಕಬಾಬಿರ್‌ನಲ್ಲಿ ಮುಬಲ್ಲಿಗ್ ಆಗಿದ್ದಾಗ, ಒಮ್ಮೆ ಅವರು ಕಬಾಬಿರ್ ಮಸೀದಿಗೆ ಚಂದಾಗಾಗಿ ಮೃತರನ್ನು ಕೇಳಿದರು. ಮೃತರ ಬಳಿ ಆ ಸಮಯದಲ್ಲಿ ಎಲ್ಲಿಂದಲೋ ಅಪಾರ ಹಣವಿತ್ತು. ಆ ಹಣವನ್ನೆಲ್ಲ ಮಸೀದಿಗೆ ನೀಡಿದರು. ಸೇವಕರೊಬ್ಬರು ಹರ್ನಿಯಾ ಆಪರೇಷನ್ ಮಾಡಿಸಿಕೊಂಡಿದ್ದಾರೆ ಎಂದು ಬರೆದುಕೊಂಡಿದ್ದಾರೆ. ಅವರ ಆರೋಗ್ಯವನ್ನು ವಿಚಾರಿಸಿದಾಗ ಅವರು ತುಂಬಾ ನೋವಿದೆ ಎಂದು ಹೇಳಿದರು. ಅದಕ್ಕೆ ನಾನು ನೀವು ಇಲ್ಲಿ ಕೆಲಸ ಮಾಡುತ್ತಿದ್ದೀರಿ? ನೀವು ಇತ್ತೀಚೆಗೆ ಕೆಲಸ ಮಾಡಿದ್ದೀರಾ? ಅವರು ಹೇಳುತ್ತಾರೆ, ಹೌದು, ಸ್ವಲ್ಪ ಕೆಲಸ ಮಾಡಲಾಗಿದೆ. ಕೆಲವು ವಸ್ತುಗಳನ್ನು ಎತ್ತಿಕೊಂಡು ಅಲ್ಲಿ ಇಲ್ಲಿ ಇಡಲಾಗಿದೆ ಮತ್ತು ಒಂದು ಬಾಗಿಲು ಮುರಿದು ಹೋಗಿತ್ತು ಅದನ್ನು ಸರಿಪಡಿಸಲಾಗಿದೆ. ನೀವು ಆಪರೇಷನ್ ಮಾಡಿಸಿಕೊಂಡಿದ್ದೀರಿ, ಇಂತಹ ಭಾರದ ಕೆಲಸ ಮಾಡಬೇಡಿ ಎಂದರು. ಅವರು ಹೇಳಿದರು: ನಾನು ಇದಿಲ್ಲದೆ ಬದುಕಲು ಸಾಧ್ಯವಿಲ್ಲ, ಜಮಾಅತ್ತಿನ ಸೇವೆಯು ನನ್ನ ಕೆಲಸವೂ ಆಗಿದೆ.

ಸೈಫುದ್ದೀನ್ ಅಬು ಅಸಬ್ ಪ್ಯಾಲೆಸ್ತೀನ್ ಮೂಲದವರು ಅವರು ಬರೆಯುತ್ತಾರೆ: ಮಾನ್ಯ ಸಲಾವುದ್ದೀನ್ ಔದಾ ಸಾಹಿಬ್‌ನಲ್ಲಿ ನಾವು ಒಳ್ಳೆಯತನವನ್ನು ಹೊರತುಪಡಿಸಿ ಬೇರೇನೂ ನೋಡಿಲ್ಲ. ಅವರು ಕಬಾಬೀರ್‌ನಲ್ಲಿದ್ದಾಗ, ಅವರು ಜಮಾತ್‌ನ ಅತ್ಯಂತ ಪ್ರಾಮಾಣಿಕ ಸದಸ್ಯರಾಗಿದ್ದರು. ಎಲ್ಲರಿಗೂ ತುಂಬಾ ಪ್ರೀತಿಸುವವರು ಮತ್ತು ಸಹಾಯ ಮಾಡುವವರಾಗಿದ್ದರು. ಅಮೀರ್ ಜಮಾತ್‌ನ ತಂದೆಯಾಗಿದ್ದರೂ, ಅವರು ಆತಿಥ್ಯ ಸೇವೆಗಳನ್ನು ಮಾಡಿದರು. ಅವರು ಸೇವೆ ಸಲ್ಲಿಸಿದ ರೀತಿ, ಅವರು ಅಮೀರ್ ಜಮಾತ್‌ನ ಪಿತಾಮಹರಾಗುತ್ತಾರೆ ಎಂದು ನಾನು ಎಂದಿಗೂ ಯೋಚಿಸಲಿಲ್ಲ ಎಂದು ನನಗೆ ಬಹಳ ನಂತರ ತಿಳಿದುಬಂದಿದೆ ಎಂದು ಅವರು ಹೇಳುತ್ತಾರೆ. ಇದು ಅತ್ಯಂತ ವಿನೀತ ಸ್ವಭಾವವಾಗಿತ್ತು. ನಂತರ ಯಾರೋ ನನ್ನನ್ನು ಇವರು ಅವರ ತಂದೆಯಾಗಿದ್ದಾರೆ ಎಂದು ಹೇಳಿದರು.

ಡಾ. ಐಮನ್ ಅಲ್-ಮಾಲಿಕಿ ಹೇಳುತ್ತಾರೆ: ಅವರು ಫಜ್ರ್ ನಮಾಝನ್ನು ನಿರ್ವಹಿಸಿದ ನಂತರ ನೇರವಾಗಿ ಲಂಗರ್‌ಗೆ ಹೋಗುತ್ತಿದ್ದರು ಮತ್ತು ತಡರಾತ್ರಿಯವರೆಗೆ ಆಯಾಸವಿಲ್ಲದೆ ಇಡೀ ದಿನ ಕೆಲಸ ಮಾಡುತ್ತಿದ್ದರು. ಇದು ವಾರದ ಏಳು ದಿನವೂ ಅವರ ದಿನಚರಿಯಾಗಿತ್ತು. ಖಿಲಾಫತ್ ಪ್ರೇಮಿ ಮತ್ತು ನಿಝಾಮೆ ಜಮಾತ್ ನ ಅಪಾರ ಗೌರವವಿತ್ತು. ತನ್ನ ಪುತ್ರ ಅಮೀರ್ ಆಗಿದ್ದರೂ ಅವರು ಅಮೀರ್ ನನ್ನು ಕಂಡರೆ ಎದ್ದು ನಿಲ್ಲುತ್ತಿದ್ದರು. ಅವರು ತಮ್ಮ ಜೀವನದ ಕೊನೆಯವರೆಗೂ ಜಮಅತ್ತಿನ ಸೇವೆಯಲ್ಲಿ ನಿರತರಾಗಿದ್ದರು ಮತ್ತು ಬಹಳ ಉತ್ಸಾಹದಿಂದ ಸಮುದಾಯದ ಕರ್ತವ್ಯಗಳನ್ನು ಬೋಧಿಸುತ್ತಾ ಮತ್ತು ನಿರ್ವಹಿಸುತ್ತಿದ್ದರು. ಅಂತಹ ಉತ್ಸಾಹದ ಉದಾಹರಣೆಗಳು ಕಡಿಮೆ ಪ್ರಮಾಣದಲ್ಲಿ ಕಾಣುತ್ತವೆ. ಅವರು ನಾಲ್ಕು ಖಲೀಫರ ಯುಗವನ್ನು ನೋಡಿದರು ಮತ್ತು ಖಲೀಫತ್ ಬಗ್ಗೆ ಬಹಳ ಆಸಕ್ತಿದಾಯಕ ಚರ್ಚೆಗಳನ್ನು ನಡೆಸುತ್ತಿದ್ದರು.

ಮುಹಮ್ಮದ್ ಅಲೌನಾ ಸಾಹಿಬ್ ಹೇಳುತ್ತಾರೆ: ಅವರು ಇಪ್ಪತ್ತು ವರ್ಷಗಳ ಮುಂಚೆ ಬೈಅತ್ ಮಾಡಿದರು ಮತ್ತು ನಂತರ ಕಬಾಬೀರ್‌ಗೆ ಹೋದಾಗ, ಅವರು ನನ್ನನ್ನು ಬಹಳ ಪ್ರೀತಿ ಮತ್ತು ಪ್ರಾಮಾಣಿಕತೆಯಿಂದ ಭೇಟಿಯಾದರು ಮತ್ತು ಅವರ ಜಮಅತ್ತಿನ ಸೇವೆಯನ್ನು ನಾನು ನೋಡಿದೆ. ವಯಸ್ಸಾಗಿದ್ದರೂ ಯುವಕರಲ್ಲೂ ಕಾಣದ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದರು. ಅವರು ತುಂಬಾ ದಯೆ ಮತ್ತು ಸಹಾನುಭೂತಿ ಹೊಂದಿದ್ದರು.

ನಮರ್ ಅಜ್ವ ಸಾಹಿಬಾ ಹೇಳುತ್ತಾರೆ ನಾನು ಅಲ್-ಖಲೀಲ್ ನಗರಕ್ಕೆ ಸೇರಿದವಳಾಗಿದ್ದೇನೆ. ನಾನು ನನ್ನ ಇಬ್ಬರು ಮಕ್ಕಳೊಂದಿಗೆ ಇಲ್ಲಿಗೆ ಬಂದಾಗ ನನಗೆ ಮನೆ ಇರಲಿಲ್ಲ. ನಿಮ್ಮ ಹೆಣ್ಣು ಮಕ್ಕಳನ್ನು ನಮ್ಮ ಬಳಿ ಬಿಟ್ಟು ಗೆಸ್ಟ್ ಹೌಸ್ ನಲ್ಲಿ ಇರಿ ಎಂದು ಮೃತರು ತಿಳಿಸಿದರು. ಹೀಗಾಗಿ ಒಂದೂವರೆ ತಿಂಗಳ ಕಾಲ ನನ್ನ ಹೆಣ್ಣುಮಕ್ಕಳನ್ನು ನೋಡಿಕೊಂಡು ಊಟ ಮತ್ತಿತರ ಸೌಲಭ್ಯ ಕಲ್ಪಿಸಿದರು. ಅವರು ನನಗೆ ಪ್ರೀತಿಯ ತಂದೆಯಂತಿದ್ದರು ಎಂದು ಅವರು ಹೇಳುತ್ತಾರೆ. ಅವರ ಮರಣದ ನಂತರ ನನ್ನ ಆತ್ಮವು ನನ್ನ ದೇಹವನ್ನು ತೊರೆದಂತೆ ನನಗೆ ಅನಿಸುತ್ತದೆ.

ಶಂಸುದ್ದೀನ್ ಸಆಹಿಬ್ ಕಬಾಬೀರನ ಮುರಬ್ಬಿ ಆಗಿದ್ದಾರೆ. ಅವರು ಹೇಳುತ್ತಾರೆ: ಮಸೀದಿ ಮತ್ತು ಮಿಷನ್ ಹೌಸ್ನ ಯಾವುದೇ ಹಳೆಯ ವಸ್ತುಗಳನ್ನು ಎಸೆಯಲು ಅವರು ಇಷ್ಟಪಡುತ್ತಿರಲಿಲ್ಲ, ಆದರೆ ಅವುಗಳನ್ನು ದುರಸ್ತಿ ಮಾಡಿ ಮರುಬಳಕೆ ಮಾಡುತ್ತಿದ್ದರು. ಮತ್ತು ಇದು ಇತರ ಸ್ಥಳಗಳಲ್ಲಿಯೂ ಬಳಸಬೇಕಾದ ಉಳಿತಾಯ ವಿಧಾನವಾಗಿದೆ. ಕೆಲವೊಮ್ಮೆ ಸಹಾಯ ಯಾಚಿಸಿ ಮಸೀದಿಗೆ

ಬಂದವರನ್ನೂ ತಡವಾಗಿ ಬಂದ ಗೌರವಾನ್ವಿತ ಅತಿಥಿಗಳು ಉಪಚರಿಸಿ ಕೂರಿಸಿ ಊಟ ಕೊಡಿಸಿರುವುದು ಕಂಡು ಬಂದಿದೆ.

ರಾಣಾ ಜಿದಾ ಜಹಾಂಗೀರ್ ಸಾಹಿಬಾ ಅವರ ಮೊಮ್ಮಗಳು ಹೇಳುತ್ತಾರೆ: ನನ್ನ ಅಜ್ಜ ತಹಜ್ಜುದ್‌ಗಾಗಿ ಬೆಳಿಗ್ಗೆ ಬೇಗನೆ ಎದ್ದು ಐದು ದಿನ ನಮಾಜು ಮಾಡುವುದನ್ನು ನಾನು ಯಾವಾಗಲೂ ನೋಡಿದ್ದೇನೆ, ನನ್ನ ಅಜ್ಜ ಬಡವರ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದರು. ನಿಮ್ಮ ಹಣವನ್ನು ನಿನಗೂ ಖರ್ಚು ಮಾಡಿ ಎಂದು ಜನರು ಹೇಳುತ್ತಿದ್ದರು, ಆದರೆ ಅವರ ಉತ್ತರ ಯಾವಾಗಲೂ ಈ ಹಣವನ್ನು ಅಗತ್ಯವಿರುವವರಿಗೆ ನೀಡಲು ನಾನು ಇಷ್ಟಪಡುತ್ತೇನೆ. ಅವರಿಗೆ ದೇವರಲ್ಲಿ ಸಂಪೂರ್ಣ ನಂಬಿಕೆ ಇತ್ತು. ಖಲೀಫರ ಬಗ್ಗೆ ಅಪಾರ ಪ್ರೀತಿ ಇತ್ತು.

ಮೃತರ ಮೇಲೆ ಅಲ್ಲಾಹನು ಕರುಣೆ ಮತ್ತು ಕ್ಷಮೆಯನ್ನು ನೀಡಲಿ. ಶ್ರೇಯಾಂಕಗಳನ್ನು ಹೆಚ್ಚಿಸಿ ಮತ್ತು ಅವರ ಮಕ್ಕಳಿಗೆ, ಪೀಳಿಗೆಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ. ಅವರು ತಮ್ಮ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲಿ.

ಮುಂದಿನ ಉಲ್ಲೇಖವು ರಬ್ವಾದ ಮುರಬ್ಬಿ ಸಿಲ್‌ಸಿಲಾ ಆದ ಕರಾಮತುಲ್ಲಾ ಖಾದಿಮ್ ಸಾಹಿಬ್ ಅವರ ಪತ್ನಿ ರೆಹಾನಾ ಫರ್ಹತ್ ಸಾಹಿಬಾ ಅವರದ್ದಾಗಿದೆ. ಅವರು ಕೂಡ ಇತ್ತೀಚೆಗೆ ಜನವರಿ 29 ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಕುಟುಂಬದಲ್ಲಿ ಅಹ್ಮದಿಯತ್‌ನ ಪ್ರಭಾವವು ಅವರ ಮುತ್ತಜ್ಜ ಗುಜರಾತ್‌ನ ಬಿಲಾನಿ ಜಿಲ್ಲೆಯ ಹಝ್ರತ್ ಮುನ್ಷಿ ಜಲಾಲುದ್ದೀನ್ ಸಾಹಿಬ್(ರ) ರ ಮೂಲಕ, ಅವರ ಹೆಸರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಝಮೀಮ ಅಂಜಾಮೆ ಆಥಮ್ ಪುಸ್ತಕದಲ್ಲಿ ಮುನ್ನೂರ ಹದಿಮೂರು ಸಹಾಬಿಗಳ ಪಟ್ಟಿಯಲ್ಲಿ ಮೊದಲನೇಯ ಹೆಸರು ಅವರದ್ದಾಗಿದೆ.

ಅವರು ಪತ್ನಿಯಲ್ಲದೆ ಒಬ್ಬ ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ. ನಿಮ್ಮ ಪುತ್ರ ಎಹ್ಸಾನುಲ್ಲಾ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಪ್ರಸ್ತುತ ಸ್ಪೇನ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕ್ರಿಯೆಯಲ್ಲಿದ್ದ ಕಾರಣ ತಾಯಿಯ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಇತರ ಕಾರಣಗಳೂ ಇದ್ದವು. ನಿಮ್ಮ ಪತಿ ಕರಮತುಲ್ಲಾ ಖಾದಿಮ್ ಕೂಡ ವಕ್ಫೆ ಝಿಂದಗೀ ಆಗಿದ್ದಾರೆ. ಅವರ ಅಳಿಯ ಆಸಿಫ್ ಮಹಮೂದ್ ಬಟ್ ಕೂಡ ಮುರಬ್ಬಿಯಾಗಿದ್ದಾರೆ. ತಾಂಜಾನಿಯಾದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಅವರ ಪುತ್ರ ಎಹ್ಸಾನುಲ್ಲಾ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಹೇಳುತ್ತಾರೆ: ಅವರು ನಮಗಾಗಿ ನಿತ್ಯವೂ ಪ್ರಾರ್ಥನೆಯ ಮೇಲಾವರಣವನ್ನು ಮಾಡುತ್ತಿದ್ದರು. ಬಹಳ ಶ್ರದ್ಧೆಯಿಂದ ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು. ಕೆಲಸ ಮಾಡುವಾಗ, ನಡೆಯುವಾಗ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಖಲೀಫರ ಪ್ರಾರ್ಥನೆಗಳು ಗುನುಗುತ್ತಿದ್ದರು. ಈ ರೀತಿಯಾಗಿ, ಅವರ ಸುತ್ತಮುತ್ತ ವಾಸಿಸುವ ಮಕ್ಕಳೂ ಆ ಕವಿತೆಗಳನ್ನು ನೆನಪಿಸಿಕೊಳ್ಳುತ್ತಿದ್ದರು. ಚಂದಾ ನಿಸುವಲ್ಲಿ ಮತ್ತು ಸಮಾಜ ಸೇವೆಯಲ್ಲಿ ನಿಯಮಿತವಾಗಿದ್ದರು. ಆರೋಗ್ಯ ಇರುವವರೆಗೂ ಜಮಾಅತ್ತಿನ ಕಾರ್ಯಕ್ರಮಗಳಲ್ಲಿ ನಿಯಮಿತವಾಗಿ ಭಾಗವಹಿಸುವುದನ್ನು ಮುಂದುವರಿಸಿದರು. ಅವರು ತುಂಬಾ ಕೃತಜ್ಞತೆ, ಮಿತವ್ಯಯ, ತಾಳ್ಮೆ ಮತ್ತು ಕೃತಜ್ಞತೆ ಹೊಂದಿದ್ದರು. ಅವರು ಅಹ್ಮದೀಯತ್ತನ್ನು ಬಹಳ ಹೆಮ್ಮೆಯಿಂದ ನೋಡುವ ಮಹಿಳೆಯಾಗಿದ್ದರು. ಅವರ ಪುತ್ರಿ ನೌಮಾನಾ ನುಸ್ರತ್ ಹೇಳುತ್ತಾರೆ, ಕೃತಜ್ಞತೆಯ ಗುಣಲಕ್ಷಣವು ತುಂಬಾ ಹೆಚ್ಚಿತ್ತು. ಒಬ್ಬನೇ ಒಬ್ಬ ಮಗನನ್ನು ವಖ್ಫ್ ಮಾಡಿದ್ದೀರ ಎಂದು ಯಾರಾದರೂ ಹೊಗಳಿದರೆ, ಅವರು ವಿನಮ್ರವಾಗಿ ಮತ್ತು ಕೃತಜ್ಞತೆಯಿಂದ ಹೇಳುತ್ತಿದ್ದರು: ಅಲ್ಲಾಹನಿಗೆ ನಾನು ಒಬ್ಬನನ್ನು ಅರ್ಪಿಸಿದ್ದೆ ಆದರೆ ಅಲ್ಲಾಹನು ನನಗೆ ಅನೇಕರನ್ನು ನೀಡಿದಕ್ಕೆ ನಾನು ಹೇಗೆ ಕೃತಜ್ಞತೆಯನ್ನು ಅರ್ಪಿಸಲಿ ಎಂದು ಹೇಲುತ್ತಿದ್ದರು. ಅಂದರೆ ಅವರಿಗೆ ಅನೇಕ ಮೊಮ್ಮಕ್ಕಳಿದ್ದರು.

ಅವರು ರಬ್ವಾದಲ್ಲಿ ಜನಿಸಿದರು ಮತ್ತು ರಬ್ವಾದಲ್ಲಿ ಅವರ ಬೆಳವಣಿಗೆಯಿಂದ ತುಂಬಾ ಸಂತೋಷಪಟ್ಟರು. ಧೈರ್ಯಶಾಲಿ ಮತ್ತು ಸಭ್ಯ ಲಜ್ಜ ಎಂದು ಅವರನ್ನು ಕರೆಯಲಾಗುತ್ತಿತ್ತು. ಅವರು ಮಿತವ್ಯಯದಿಂದ ಬದುಕುತ್ತಿದ್ದರು ಮತ್ತು ತನಗೆ ಹೆಚ್ಚಿನ ಸೌಕರ್ಯಗಳು ಇದ್ದಂತೆ ಕೃತಜ್ಞತೆಯನ್ನು ಅರ್ಪಿಸುತ್ತಿದ್ದರು. ಮುಬಲ್ಲಿಗೀನರ ಭತ್ಯೆಯು ಬಹಳ ಕಡಿಮೆಯಾಗಿದೆ ಎಂದು ಯಾವತ್ತೂ ದೂರಲಿಲ್ಲ, ನನಗೆ ಸಿಗುತ್ತಿರುವ ಅನುಗ್ರಹಗಳು ಎಲ್ಲೂ ಸಿಗುವುದಿಲ್ಲ ಎಂದು ಹೇಳುತ್ತಿದ್ದರು. 2017ರಲ್ಲಿ ಜಮಾಅತ್ತಿನ ಪ್ರಕರಣಗಳಿಂದಾಗಿ ಮಗ ವಲಸೆ ಹೋಗಬೇಕಾಯಿತು. ನಾನು ಹೇಳಿದಂತೆ, ಇತರ ಕಾರಣಗಳಿವೆ ಮತ್ತು ನಂತರ ಪಾಕಿಸ್ತಾನಕ್ಕೆ ಹೋಗಲು ಸಾಧ್ಯವಾಗಲಿಲ್ಲ ಮತ್ತು ತಾಯಿಯ ಆರೋಗ್ಯದ ಕಾರಣ ಅವರನ್ನು ಭೇಟಿ ಮಾಡಲು ಸಾಧ್ಯವಾಗಲಿಲ್ಲ, ಆದರೆ ಅವರು ಯಾವಾಗಲೂ ತಮ್ಮ ಮಗನಿಗೆ ಜಮಾಅತ್ತಿನ ಜವಾಬ್ದಾರಿಯನ್ನು ತಾಳ್ಮೆ ಮತ್ತು ಸಮರ್ಪಣಾ ಮನೋಭಾವದಿಂದ ನಿರ್ವಹಿಸುವಂತೆ ಸಲಹೆ ನೀಡುತ್ತಿದ್ದರು.

ಅವರ ಸೊಸೆ ಹೇಳುತ್ತಾರೆ: ಅವರು ತುಂಬಾ ನೋವು ಮತ್ತು ಕಷ್ಟದಿಂದ ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು. ಅವರಿಗೆ ನಿಜವಾದ ಕನಸುಗಳು ಬರುತ್ತಿದ್ದವು. ಅವರು ಬಹಳ ಸ್ಪಷ್ಟವಾದ ಮತ್ತು ನಿಜವಾದ ಕನಸುಗಳನ್ನು ಹೊಂದಿದ್ದರು, ಅದು ಅಚ್ಚುಕಟ್ಟಾಗಿ ಈಡೇರಿತು. ನಮಗೆ ಆಶ್ಚರ್ಯವಾಗುತ್ತಿತ್ತು. ಆಗ ಕೇಸುಗಳ ಕಾರಣದಿಂದ ವಲಸೆ ಹೋಗಬೇಕಾಯಿತು, ಅನಾರೋಗ್ಯದಿಂದ ಹೋಗಲಾಗಲಿಲ್ಲ ಎಂದು ಮಗ ಬರೆದುಕೊಂಡಿದ್ದಾನೆ, ಆದರೆ ಯಾವತ್ತೂ ದುಃಖ ವ್ಯಕ್ತಪಡಿಸಲಿಲ್ಲ. ಯಾವಾಗಲೂ ದೃಢವಾಗಿ ವಕ್ಫ್ ನಿರ್ವಹಿಸಲು ಸಲಹೆ ನೀಡುತ್ತಿದ್ದರು. ಇಂದಿನ ದಿನಗಳಲ್ಲಿ ಇದು ತುಂಬಾ ಸುಲಭವಾಗಿದೆ, ಯಾವಾಗಲೂ ಸಂಪರ್ಕದಲ್ಲಿರಬಹುದು ಆದರೆ ತನ್ನ ವಕ್ಫ್ ಕೆಲಸದಲ್ಲಿ ತನ್ನ ತಾಯಿಗೆ ಅಡ್ಡಿಯಾಗಲು ಅವರು ಎಂದಿಗೂ ಬಿಡಲಿಲ್ಲ.

ಅಲ್ಲಾಹನು ಮೃತರಿಗೆ ಮಗ್‌ಫಿರತ್ ಮತ್ತು ಕರುಣೆಯನ್ನು ನೀಡಲಿ ಮತ್ತು ಅವರ ಪದವಿಗಳನ್ನು ಹೆಚ್ಚಿಸಲಿ. ಕುಟುಂಬ ಸದಸ್ಯರಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ.

...*...*...*...

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅದೇ ಅಸ್ತಿತ್ವ ಎಂದು ಹೇಳಿದ್ದಾನೆ." (ಎಕ್ ಗ಼ಲ್ತಿ ಕಾ ಇಝಾಲಾ, ರೂಹಾನಿ ಖಝಾಇನ್, ಸಂಪುಟ-18)

ಆದ್ದರಿಂದ ಯಾವ ವ್ಯಕ್ತಿತ್ವವನ್ನು ಅಲ್ಲಾಹನು ಸಾದೃಶ್ಯರೂಪದಲ್ಲಿ ಪರೋಕ್ಷರೂಪದಲ್ಲಿ ಹಝ್ರತ್ ಪೈಗಂಬರ್(ಸ) ರವರ ವ್ಯಕ್ತಿತ್ವ ಎಂದು ಹೇಳಲಾಗಿದೆ, ನಿಸ್ಸಂಶಯವಾಗಿಯೂ ಅವರ(ಅ) ಸ್ಥಾನಮಾನ ಅತ್ಯಂತ ಭವ್ಯವಾಗಿರುವುದು. ಇಲ್ಲಿ ನಾವು ಅತ್ಯಂತ ಸಂಕ್ಷಿಪ್ತರೂಪದಲ್ಲಿ ಹೇಳುವೆವು, ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಬರಹಗಳಲ್ಲಿ ಪದೇ ಪದೇ ಅದನ್ನು ವ್ಯಕ್ತಪಡಿಸಿದ್ದಾರೆ. ತನ್ನ ಯಾವ ಸ್ಥಾನಮಾನವಿರಲಿ ಅದು ಪವಿತ್ರ ಪ್ರವಾದಿಗಳ(ಸ) ಸಂಪೂರ್ಣ ಅನುಸರಣೆ ಮತ್ತು ಅವರೊಡನೆ ಇರುವ ಉನ್ನತ ದರ್ಜೆಯ ಪ್ರೀತಿಯ ಕಾರಣದಿಂದಿದೆ. ತನ್ನಲ್ಲಿ ಯಾವ ಗುಣವು ತನ್ನದ್ದಲ್ಲ ಅದು ಹಝ್ರತ್ ಪೈಗಂಬರ್(ಸ) ಅವರದ್ದಾಗಿದೆ. ಅವರಿಗೆ (ಅ) ಯಾವ ನೆಲೆಯಲ್ಲೂ ಪವಿತ್ರ ಪ್ರವಾದಿಗಿಂತ ಮೇಲು ಅಥವಾ ಸರಿಸಮಾನ ಎಂಬ ವಾದ ಇಲ್ಲ. ಮೌಲ್ವಿಗಳ ಇಂತಹ ಅಶುದ್ಧ ಆರೋಪಗಳಿಂದಾಗಿ ನಮ್ಮ ಹೃದಯಗಳು ರಕ್ತಸ್ರಾವವಾಗುತ್ತವೆ. ಅವರ(ಅ) ಏನೇ ವಾದವಿದ್ದರೂ ಇಷ್ಟೆ!

ಜಾನ್ ವ ದಿಲಂ ಫಿದಾಯೆ ಜಮಾಲೆ ಮುಹಮ್ಮದ್ ಅಸ್ತ್
ಖಾಕಮ್ ನಿಸಾರ್ ಕೊಚಾಎ ಆಲೆ ಮುಹಮ್ಮದ್ ಅಸ್ತ್

ಇಲ್ಲಿ ಒಂದು ವಿಶ್ಲೇಷಣೆ ಮಾಡುವುದು ಅನಿವಾರ್ಯ ಎನಿಸುತ್ತದೆ, ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಪೈಗಂಬರ್(ಸ) ರವರ ಸಾದೃಶ್ಯರೂಪವಾಗಿದ್ದರು ಎಂಬುದು ಪವಿತ್ರ ಖುರ್‌ಆನ್ ಉಲ್ಲೇಖಿಸಿದೆ ಮತ್ತು ಪವಿತ್ರ ಖುರ್‌ಆನ್ ಪ್ರಕಾಶದಲ್ಲಿ ಸಮುದಾಯದ ಮಹಾಪುರುಷರು ಸಹ ಈ ಕುರಿತು ಬೆಳಕು ಚೆಲ್ಲಿದ್ದಾರೆ. ಇದು ಯಾವುದೇ ಕಟ್ಟುಕಥೆಗಳಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಸೂರಾ ಜುಮುಅದಲ್ಲಿ ಹಝ್ರತ್ ಪೈಗಂಬರ್(ಸ) ರವರ ಪುನರಾಗಮನದ ಬಗ್ಗೆ ಪ್ರಸ್ತಾಪಿಸಿದ್ದಾನೆ. ಆದ್ದರಿಂದ ಹಝ್ರತ್ ಪೈಗಂಬರ್(ಸ) ರವರ ಈ ಪುನರಾಗಮನ ಇಮಾಮ್ ಮಹದಿ ಮತ್ತು ಮಸೀಹ್ ಮೌಊದ್(ಅ) ರವರ ವ್ಯಕ್ತಿತ್ವದಲ್ಲಿ ಸಾದೃಶ್ಯರೂಪದಲ್ಲಿ ಬರುವುದು ವಿಧಿಬರಹ ಆಗಿತ್ತು. ಇದೀಗ ನಾವು ಈ ಪೈಕಿ ಸಮುದಾಯದ ಮಹಾಪುರುಷರ ಕೆಲವು ಹೇಳಿಕೆಗಳನ್ನು ಪ್ರಸ್ತಾಪಿಸುತ್ತೇವೆ.

**ಹಝ್ರತ್ ಇಮಾಮ್ ಮುಹಿಯುದ್ದೀನ್ ಇಬ್ನೆ ಅರಬಿ ರೆಹ್ಮತುಲ್ಲಾಹ್ ಅಲೈಹ್ ಹೇಳುತ್ತಾರೆ:**

"ಕೊನೆಯ ಕಾಲಘಟ್ಟದಲ್ಲಿ ಬರುವ ಇಮಾಮ್ ಮಹದಿಯು ಶರೀಅತ್ ನಿಯಮಗಳಲ್ಲಿ ಹಝ್ರತ್ ಪೈಗಂಬರ್(ಸ.ಅ) ಅವರಿಗೆ ಒಳಪಟ್ಟಿರುತ್ತಾರೆ ಮತ್ತು ದೈವಜ್ಞಾನ, ಜ್ಞಾನ ಮತ್ತು ಸತ್ಯಾಂಶದಲ್ಲಿ ಅವರನ್ನು ಹೊರತುಪಡಿಸಿ ಪ್ರವಾದಿಗಳು ಮತ್ತು ಸಂತರು ಎಲ್ಲರು ಅವರ ಅಧೀನರಾಗಿರುತ್ತಾರೆ.... ಏಕೆಂದರೆ ಇಮಾಮ್ ಮಹದಿ ಅವರ ಅಂತರಂಗವು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರ ಅಂತರಂಗವಾಗಿರುತ್ತದೆ." (ಶರಹ್ ಫುಸೂಸುಲ್ ಹಕಮ್, ಅಝ್ಝಾಹಿರ್ ಮಿಸ್ರಿಯಾ, ಪುಟ-51)

**ಹಝ್ರತ್ ಶಾ ವಲಿಯುಲ್ಲಾ ಮುಹದ್ದಿಸ್ ದೆಹಲವಿ ರೆಹ್ಮತುಲ್ಲಾಹ್ ಅಲೈಹ್ (1114 ರಿಂದ 1175 ಹಿಜ್ರಿ) ನುಡಿಯುತ್ತಾರೆ:**

"ಉಮ್ಮತೆ ಮುಹಮ್ಮದಿಯಾದಲ್ಲಿ ಆಗಮಿಸಬೇಕಾದ ಮಸೀಹ್ ಮೌಊದ್ ಅವರಲ್ಲಿ ಸಯ್ಯಿದುಲ್ ಮುರ್‌ಸಲೀನ್(ಸ) ಅವರ ದಿವ್ಯ ಪ್ರಕಾಶವು ಪ್ರತಿಬಿಂಬಿಸುವ ಹಕ್ಕಿದೆ. ಮಸೀಹ್ ಮೌಊದ್ ಜಗತ್ತಿಗೆ ಆಗಮಿಸಿದಾಗ ಅವರ ಸ್ಥಾನಮಾನವು ಕೇವಲ ಉಮ್ಮತಿಯಾಗಿರುವುದು ಎಂದು ಸಾಮಾನ್ಯ ಜನರು ಭಾವಿಸುತ್ತಾರೆ, ಆದರೆ ಇದು ಹಾಗಲ್ಲ, ಬದಲಿಗೆ ಅವರು ಮುಹಮ್ಮದ್ ಹೆಸರಿನಲ್ಲಿರುವ ಸಂಪೂರ್ಣ ಗುಣಗಳನ್ನು ಹೊಂದಿರುವರು ಮತ್ತು ಅದು

*(ಪುಟ ಸಂಖ್ಯೆ-19ರಲ್ಲಿ ಮುಂದುವರಿಸಲಾಗಿದೆ)*

ಜಲ್ಸ ಸಾಲಾನ ಖಾದಿಯಾನ್ 2023ರ ಭಾಷಣ

# ಪವಿತ್ರ ಖುರ್‌ಆನ್‌ನ ಬೆಳಕಿನಲ್ಲಿ ಹಝ್ರತ್ ಮಾಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವನಚರಿತ್ರೆ

ಹಫಿಝ್ ಮಖ್ದೂಮ್ ಷರೀಫ್ ಸಾಹಿಬ್, ಖಾಯೆಮ್ ಮಖಾಮ್ ನಝಿರ್ ಅಲ್‌ಲಾ ದಕ್ಷಿಣ ಭಾರತ

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ

وَاَشْهَدُ اَنَّ مُحَمَّدًا عَبْدُهٗ وَرَسُوْلُهٗ

اَمَّا بَعْدُ فَاَعُوْذُ بِاللّٰهِ مِنَ الشَّيْطٰنِ الرَّجِيْمِ-

بِسْمِ اللّٰهِ الرَّحْمٰنِ الرَّحِيْمِ-

وَقَالَ الرَّسُوْلُ يٰرَبِّ اِنَّ قَوْمِى اتَّخَذُوْا

هٰذَا الْقُرْاٰنَ مَهْجُوْرًا (سورة الفرقان آيت 31)

**ವಖಾಲರ್ರಸೂಲು ಯಾ ರಬ್ಬಿ ಇನ್ನ ಖೌಮಿತ್ತಖಝೂ ಹಾಝಲ್ ಖುರ್‌ಆನ ಮಹ್‌ಜೂರಾ** (ಸೂರ ಫುರ್ಖಾನ್: 31)

'ನನ್ನ ಪ್ರಭೂ, ನನ್ನ ಜನರು ಈ ಖುರ್‌ಆನನ್ನು ತ್ಯಾಜ್ಯ ವಸ್ತುವಿನಂತೆ ತಳ್ಳಿ ಬಿಟ್ಟಿರುವರು' ಎಂದು ಪ್ರವಾದಿ ಹೇಳುವರು. (ಸೂರಃ ಫುರ್ಖಾನ್: 31)

ವಿನೀತನ ಭಾಷಣದ ಶೀರ್ಷಿಕೆಯು "ಪವಿತ್ರ ಖುರ್‌ಆನ್‌ನ ಬೆಳಕಿನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವನಚರಿತ್ರೆ" ಎಂದಾಗಿದೆ.

ಆತ್ಮೀಯ ಕೇಳುಗರೇ! ಸಯ್ಯಿದುನಾ ಹಝ್ರತ್ ಅಖ್ದಸ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ವಾಗ್ದತ್ತ ಮಸ್ಸಿಹ್ ಹಾಗೂ ವಾಗ್ದತ್ತ ಮಹದಿಯ ಅಂತಿಮ ಕಾಲದಲ್ಲಿ ಬರುವ ಶುಭವಾರ್ತೆಯನ್ನು ನೀಡಿದರು, ಅವರ ಗೋಚರಿಸುವಿಕೆಯ ಪ್ರಮುಖ ಉದ್ದೇಶವು ಪವಿತ್ರ ಖುರ್‌ಆನ್‌ನ ಸದ್ಗುಣಗಳು ಮತ್ತು ಪರಿಪೂರ್ಣತೆಗಳು ಮತ್ತು ಅದರ ಶ್ರೇಷ್ಠತೆ ಮತ್ತು ಸತ್ಯತೆಯನ್ನು ವ್ಯಕ್ತಪಡಿಸುವುದಾಗಿತ್ತು. ಸೂರತುಲ್ ಜುಮುಅದ ಆಯತ್ **ವ ಆಖರೀನ ಮಿನ್‌ಹುಮ್ ಲಮ್ಮಾ ಉಲ್ ಹಖೂಬಿಹಿಮ್** ಅಂದರೆ: ಅವರೊಂದಿಗೆ ಇಷ್ಟರ ವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯುಲ್ಲೂ. ಅವತೀರ್ಣವಾದಾಗ ಸಹಾಬರವರು ಕೇಳಿದರು: ಯಾ ರಸೂಲಲ್ಲಾಹ್(ಸ)!! ನೀವು ಮತ್ತೆ ಆಯತ್‌ಗಳನ್ನು ಪಠಿಸುವ, ಅವರನ್ನು ಶುದ್ಧೀಕರಿಸುವ ಮತ್ತು ಅವರಿಗೆ ಪುಸ್ತಕ ಮತ್ತು (ಹಿಕ್ಮತ್) ಬುದ್ಧಿವಂತಿಕೆಯನ್ನು ಕಲಿಸುವ ಆ ಜನರು ಯಾರಾಗುತ್ತಾರೆ? ಆಗ ಹಝ್ರತ್ ಪೈಗಂಬರ್(ಸ) ಹೇಳಿದರು ಈಮಾನ್ ಸುರೈಯ (ಕೃತ್ತಿಕೆ ಸಕ್ಷತ್ರ) ನಕ್ಷತ್ರಕ್ಕೆ ತಲುಪಿದಾಗ, ಒಬ್ಬ ಪರ್ಷಿಯನ್ ವ್ಯಕ್ತಿ ಅದನ್ನು ಮರಳಿ ತರುತ್ತಾನೆ. ಕೆಲವು ವರದಿಗಳ ಪ್ರಕಾರ ಜ್ಞಾನ ಅಥವಾ ಪವಿತ್ರ ಖುರ್‌ಆನ್ ಅನ್ನು ತ್ಯಜಿಸುವುದಾಗಿ ಉಲ್ಲೇಖಿಸಲಾಗಿದೆ, ಅದರ ಹಿರಿಮೆ ಮತ್ತು ಶ್ರೇಷ್ಠತೆಯನ್ನು ಪುನಃ ಮಸೀಹ್ ಮೌಊದ್(ಅ) ಜನರ ಹೃದಯದಲ್ಲಿ ತುಂಬಬೇಕಾಗಿತ್ತು.

ಆತ್ಮೀಯ ಕೇಳುಗರೆ, ಕಳೆದುಹೋದ ಈಮಾನ್ ಮತ್ತು ತ್ಯಜಿಸಿಬಿಟ್ಟ ಪವಿತ್ರ ಖೂರ್‌ಆನ್‌ನ ಹಿರಿಮೆಯನ್ನು ಮರುಸ್ಥಾಪಿಸಲು ಅಲ್ಲಾಹನು ಈ ಅನಾಮಧೇಯ ಖಾದಿಯಾನ್ ಪಟ್ಟಣಕ್ಕೆ ಹಝ್ರತ್ ಮಿರ್ಝಾ ಗ್ಹುಲಾಮ್ ಅಹ್ಮದ್ ಖಾದಿಯಾನಿ ಅಲೈಹಿಸ್ಸಲಾಮ್ ಅವರನ್ನು ಕಳುಹಿಸಿದನು. ಹಝ್ರತ್ ಮಸೀಹ್ ಮೌಊದ್(ಅ)ರವರು ಹೀಗೆ ಘೋಷಿಸಿದರು:

"ಸರ್ವಶಕ್ತನಾದ ಅಲ್ಲಾಹನ ವಾಗ್ದಾನದ ಪ್ರಕಾರ: **ಇನ್ನಾ ನಹ್‌ನು ನಝ್ಝಲ್ ನಝ್ಝಿಕ್ರ ವ ಇನ್ನಾ ಲಹೂ ಲಹಾಫಿಝೂನ್** (ಅಲ್‌ಹಿಜರ್:10) ಅಂದರೆ: ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದ್ದು. ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು. ಪವಿತ್ರ ಖುರ್‌ಆನ್‌ನ ಮಹಿಮೆಯನ್ನು ಸ್ಥಾಪಿಸಲು ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಅಲ್ಲಾಹನು ನನ್ನನ್ನು ಕಳುಹಿಸಿದನು." (ಮಲ್‌ಫೂಝಾತ್, ಸಂಫುಟ-1, ಪುಟ-433)

ಆತ್ಮೀಯ ಕೇಳುಗರೇ! ಕಾಲಘಟ್ಟದ ದುಸ್ಥಿತಿಯ ನಕ್ಷೆಯನ್ನು ಚಿತ್ರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ಈ ಯುಗವು ವಾಸ್ತವವಾಗಿ ಪವಿತ್ರ ಖುರ್‌ಆನ್ ತನ್ನೊಳಗೆ ಅಡಗಿರುವ ಎಲ್ಲಾ ರಹಸ್ಯಗಳನ್ನು ಬಹಿರಂಗಪಡಿಸಬೇಕೆಂದು ಒತ್ತಾಯಿಸುವ ಯುಗವಾಗಿದೆ ... ಆದ್ದರಿಂದ ಖಂಡಿತವಾಗಿಯು ಬಾಗಿಲು ತೆರೆಯಲಾಗಿದೆ ಎಂದು ಅರ್ಥಮಾಡಿಕೊಳ್ಳಿ ಮತ್ತು ಪವಿತ್ರ ಖುರ್‌ಆನ್‌ನ ರಹಸ್ಯ ಪವಾಡಗಳನ್ನು ಈ ಪ್ರಪಂಚದ ಸೊಕ್ಕಿನ ತತ್ವಜ್ಞಾನಿಗಳಿಗೆ ಬಹಿರಂಗಪಡಿಸಬೇಕೆಂದು ಸರ್ವಶಕ್ತನಾದ ಅಲ್ಲಾಹನು ನಿರ್ಧರಿಸಿದ್ದಾನೆ. ಈಗ ಇಸ್ಲಾಂ ಧರ್ಮದ ವಿರೋಧಿಯಾದ ಅರೆ ಮುಲ್ಲಾಗಳಿಗೆ ಈ ಉದ್ದೇಶವನ್ನು ತಡೆಯಲು ಸಾಧ್ಯವಿಲ್ಲ. ಅವರು ತಮ್ಮ ದುಷ್ಕೃತ್ಯಗಳಿಂದ ದೂರವಿರದಿದ್ದರೆ, ಅವರು ನಾಶ ಹೊಂದುತ್ತಾರೆ ಮತ್ತು ಹಝ್ರತೆ ಕಹ್ಹಾರ್‌ನ (ಸರ್ವಶಕ್ತನಾದ ಅಲ್ಲಾಹನ) ಕೋಪದ ಚಪಾಟಕ್ಕೆ ಅವರು ಧೂಳೀಪಟವಾದಂತೆ ತೋರುತ್ತದೆ. ಈ ಅಜ್ಞಾನಿಗಳಿಗೆ ಈಗಿನ ಪರಿಸ್ಥಿತಿಯ ಬಗ್ಗೆ ಅರಿವೇ ಇಲ್ಲ. ಪವಿತ್ರ ಖುರ್‌ಆನ್ ಪರಾಜಿತ, ದುರ್ಬಲ ಮತ್ತು ಹೇಯವಾಗಿ ಕಾಣಬೇಕೆಂದು ಅವರು ಬಯಸುತ್ತಾರೆ, ಆದರೆ ಈಗ ಅದು ಯುದ್ಧವೀರನಂತೆ ಹೊರಬರುತ್ತದೆ. ಹೌದು, ಅದು ಒಂದು ಸಿಂಹದಂತೆ ಕ್ಷೇತ್ರಕ್ಕೆ ಬಂದು ಪ್ರಪಂಚದ ಎಲ್ಲಾ ತತ್ವಶಾಸ್ತ್ರವನ್ನು ಕಬಳಿಸುತ್ತದೆ ಮತ್ತು ತನ್ನ ಪ್ರಾಬಲ್ಯವನ್ನು ತೋರಿಸುತ್ತದೆ ಮತ್ತು **ಲಿಯುಝ್‌ಹಿರಹು ಅಲದ್ದೀನಿ ಕುಲ್ಲಿಹೀ** ಯ ಭವಿಷ್ಯವಾಣಿಯನ್ನು ಪೂರೈಸುತ್ತದೆ ಮತ್ತು **ವಲಯುಮಕ್ಕಿನನ್ನಲಹುಮ್ ದೀನಹುಮ್** ನ ಭವಿಷ್ಯವಾಣಿಯನ್ನು ಆಧ್ಯಾತ್ಮಿಕವಾಗಿ ಪರಿಪೂರ್ಣಗೊಳಿಸುತ್ತದೆ... ಈಗ. ಇಬ್ನೆ ಮರಿಯಮ್‌ನ ಆಧ್ಯಾತ್ಮಿಕ ತಂದೆಯು ಭೂಮಿಯ ಮೇಲೆ ಆದಮ್‌ನೊಂದಿಗೆ ಹೋಲಿಸುವ ನೈಜ ಶಿಕ್ಷಕ ಬೇರೆ ಯಾರೂ ಇಲ್ಲ. ಆತನು ಜನರಲ್ಲಿ ಪವಿತ್ರ ಖುರ್‌ಆನ್‌ನ ಬಹಳಷ್ಟು ನಿಧಿಯನ್ನು ಹಂಚುತ್ತಾನೆ. ಜನರು ಅದನ್ನು ಸ್ವೀಕರಿಸುತ್ತಾ ಸ್ವೀಕರಿಸುತ್ತಾ ಆಯಾಸಗೊಳ್ಳುತ್ತಾರೆ. ಮತ್ತು **ಲಾ ಯಖ್‌ಬಿಲುಹು ಅಹದ** ಅಂದರೆ ಯಾರು ಅದನ್ನು ಸವೀಕರಿಸುವುದಿಲ್ಲ ಎಂಬ ಉದಾಹರಣೆಯಾಗುತ್ತಾರೆ ಮತ್ತು ಪ್ರತಿಯೊಂದು ಸ್ವಭಾವವು ಅದರ ಸಾಮರ್ಥ್ಯಕ್ಕೆ ಅನುಗುಣವಾಗಿ ಪೂರ್ಣಗೊಳ್ಳುತ್ತದೆ. (ಇಝಾಲ ಔಹಾಮ್, ರೂಹಾನಿ ಖಝಾಈನ್, ಸಂಪುಟ-3, ಪುಟಗಳು 464-467)

ನೂರೆ ಫುರ್ಖಾನ್ ಹೈ ಜೊ ಸಬ್ ನೂರೊಂ ಎ ಅಜ್ಲಾ ನಿಕ್ಲಾ
ಪಾಕ್ ವೊ ಜಿಸ್ ಸೆ ಯೆ ಅನ್ವಾರ್ ಕಾ ದರ್ಯಾ ನಿಕ್ಲಾ

ಆತ್ಮೀಯ ಕೇಳುಗರೇ! ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ, ಅಂತ್ಯಕಾಲದಲ್ಲಿ ಪವಿತ್ರ ಖುರ್‌ಆನ್‌ನ ಹಿರಿಮೆಯನ್ನು ಮಸೀಹ್ ಮೌಊದ್‌ನಿಂದ ಎರಡು ರೀತಿಯಲ್ಲಿ ಬಹಿರಂಗಪಡಿಸಲಾಗುತ್ತದೆ, ಒಂದು **ಲಿಯುಝ್‌ಹಿರಹು ಅಲದ್ದೀನಿಕುಲ್ಲಿಹೀ** ಯ ಬಾಹ್ಯವಾಗಿ ಸಕಲ ಧರ್ಮಗಳ ಮೇಲೆ ಪವಿತ್ರ ಖುರ್‌ಆನ್‌ನ ಸತ್ಯಾಂಶವನ್ನು, ವಿಜ್ಞಾನದ ಸಂಪತ್ತನ್ನು ವ್ಯಕ್ತಪಡಿಸಿ ಪವಿತ್ರ ಖುರ್‌ಆನ್‌ನ ದೃಢೀಕರಣ, ಶ್ರೇಷ್ಠತೆ ಮತ್ತು ಹಿರಿಮೆಯನ್ನು ಎಲ್ಲಾ ಧರ್ಮಗಳ ಮೇಲೆ ಸ್ಥಾಪಿಸಲಾಗುವುದು ಮತ್ತು ಇಸ್ಲಾಮ್ ಧರ್ಮಕ್ಕೆ ಪ್ರಾಬಲ್ಯವನ್ನು ನೀಡಲಾಗುವುದು ಮತ್ತು ಮತ್ತೊಂದೆಡೆ, ಆಂತರಿಕವಾಗಿ **ವಲಯುಮಕ್ಕಿನನ್ನಲಹುಮ್ ದೀನಹುಮ್** ನ ಪ್ರಕಾರ ಉಮ್ಮತೆ ಮಹಮ್ಮದಿಯಾದಲ್ಲಿ ಅಲ್ಲಾಹ್ ಮತ್ತು ಇಸ್ಲಾಮಿನ ಮೂಲಭೂತ ನಂಬಿಕೆಗಳ ಬಗ್ಗೆ ಉಂಟಾಗುವ ಸಂದೇಹ, ಅನುಮಾನಗಳನ್ನು ಪವಿತ್ರ ಖುರ್‌ಆನ್‌ನ ಬೋಧನೆಗಳ ಬೋಧನೆಗಳ ಪ್ರಕಾರ ತೆಗೆದುಹಾಕುವ ಮೂಲಕ ಮತ್ತು ಭ್ರಷ್ಟ ನಂಬಿಕೆಗಳು ಮತ್ತು ಧರ್ಮದ್ರೋಹಿಗಳನ್ನು ನಾಶಪಡಿಸುವ ಮೂಲಕ ಪವಿತ್ರ ಖುರ್‌ಆನ್‌ನ ಹಿರಿಮೆಯನ್ನು ಸ್ಥಾಪಿಸಲಾಗುವುದು ಮತ್ತು ಇಸ್ಲಾಂ ಧರ್ಮಕ್ಕೆ ವೈಭವವನ್ನು ನೀಡಲಾಗುವುದು.

ಕೇಳುಗರೇ! ಎಲ್ಲಾ ಧರ್ಮಗಳಿಗೆ ಪವಿತ್ರ ಖುರ್‌ಆನ್‌ನ ಹಿರಿಮೆ ಮತ್ತು ದೃಢೀಕರಣವನ್ನು ತೋರಿಸಲು, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಅಖ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ತನ್ನ ಕಡೆಯಿಂದ ಪವಿತ್ರ ಖುರ್‌ಆನ್‌ನ ವಿಶೇಷ ಜ್ಞಾನ ಮತ್ತು ತಿಳುವಳಿಕೆ ಮತ್ತು ತರಬೇತಿಯನ್ನು ನೀಡಿದನು. ಸೈಯಿದುನಾ ಹಝ್ರತ್ ಅಖ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ನನ್ನ ಆತ್ಮವು ಯಾರ ಕೈಯಲ್ಲಿದೆಯೋ ಅವನಿಗೆ ಪ್ರಮಾಣ ಮಾಡಿ ಹೇಳುತ್ತೇನೆ ಅವನು (ದೇವರು) ನನ್ನನ್ನು ಕರುಣೆಯಿಂದ ನೋಡಿದನು ಮತ್ತು ನನ್ನನ್ನು ಸ್ವೀಕರಿಸಿದನು ಮತ್ತು ನನಗೆ ಅನುಗ್ರಹಿಸಿದನು ಮತ್ತು ನನಗೆ ತರಬೇತಿ ನೀಡಿದನು ಮತ್ತು ಅವನ ಉಪಸ್ಥಿತಿಯಿಂದ ನನಗೆ ತಿಳುವಳಿಕೆಯನ್ನು ವಕ್ರತೆಯಿಲ್ಲದೆ ನೀಡಿದನು. ಮತ್ತು ಅವನು ನನ್ನ ಹೃದಯದಲ್ಲಿ ಎಷ್ಟು ಪ್ರಕಾಶಗಳನ್ನು ಹಾಕಿದನು ಮತ್ತು ನನಗೆ ಪವಿತ್ರ ಖುರ್‌ಆನ್ ದೈವಜ್ಞಾನವನ್ನು ನೀಡಲಾಯಿತು, ಅದು ನನಗೆ ಹೊರತುಪಡಿಸಿ ಬೇರೆಯವರಿಗೆ ನೀಡಲಿಲ್ಲ. ಮತ್ತು ನಾನು ಅದರಿಂದ ನನ್ನ ವಿರೋಧಿಗಳ ಪ್ರಯತ್ನಗಳ ಹೊರತಾಗಿಯೂ ಪಡೆಯಲು ಸಾಧ್ಯವಾಗದ್ದನ್ನು ನಾನು ಪಡೆದುಕೊಂಡಿದ್ದೇನೆ ಮತ್ತು ಹೆಚ್ಚಿನ ಜನರ ಬುದ್ಧಿಶಕ್ತಿಗಳು ತಲುಪಲು ಸಾಧ್ಯವಾಗದ ಈ ಪವಿತ್ರ ಕೂರ್‌ಆನ್‌ನ ತಿಳುವಳಿಕೆಯಲ್ಲಿ ನಾನು ಉನ್ನತ ಮಟ್ಟವನ್ನು ತಲುಪಿದೆ. (ಹಮಾಮತುಲ್ ಬಿಶ್ರ, ರೂಹಾನಿ ಖಝಾಈನ್, ಸಂಪುಟ-7, ಪುಟ-284)

ಅಲ್ಲದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್

ನುಡಿಯುತ್ತಾರೆ:

ಇದು ನನ್ನಂತಹ ವಿನಮ್ರ ವ್ಯಕ್ತಿಯ ಕೈಯಿಂದ ತನ್ನ ಧರ್ಮದ ಗೌರವವನ್ನು ತೋರಿಸಬೇಕೆಂದು ಅವನು ಬಯಸುವುದು ಸರ್ವಶಕ್ತನಾದ ಅಲ್ಲಾಹನ ಮತ್ತು ಅವನ ಅಪರಿಮಿತ ಅನುಗ್ರಹ ಮಾತ್ರವಾಗಿದೆ. ಇಸ್ಲಾಮ್ ಧರ್ಮದ ಮೇಲೆ ವಿರೋಧಿಗಳು ಮಾಡಿರುವಂತಹ ಆಕ್ಷೇಪಣೆಗಳು ಮತ್ತು ಪ್ರಚಾರಗಳನ್ನು ಒಮ್ಮೆ ನಾನು ಎಣಿಸಿದ್ದೇನೆ. ಅದರ ಸಂಖ್ಯೆ ನನ್ನ ಪ್ರಕಾರ ಮೂರು ಸಾವಿರವಾಗಿತ್ತು ಮತ್ತು ಈಗ ಸಂಖ್ಯೆ ಇನ್ನೂ ಹೆಚ್ಚಿರಬಹುದು ಎಂದು ನಾನು ಭಾವಿಸುತ್ತೇನೆ. ಇಸ್ಲಾಮಿನ ಅಡಿಪಾಯವು ಅಂತಹ ದುರ್ಬಲ ವಿಷಯಗಳ ಮೇಲೆ ಆಧಾರಿತವಾಗಿದೆ ಎಂದು ಯಾರೂ ಅರ್ಥಮಾಡಿಕೊಳ್ಳಬಾರದು, ಅದರ ವಿರುದ್ಧ ಮೂರು ಸಾವಿರ ಆಕ್ಷೇಪಣೆಗಳನ್ನು ಎತ್ತಬಹುದು. ಅಲ್ಲವೇ? ಖಂಡಿತವಾಗಿಯೂ ಇಲ್ಲ. ಈ ಆಕ್ಷೇಪಣೆಗಳು ಸಂಕುಚಿತ ಮನಸ್ಸಿನ ಮತ್ತು ಅಜ್ಞಾನಿಗಳ ದೃಷ್ಟಿಯಲ್ಲಿ ಆಕ್ಷೇಪಣೆಗಳಾಗಿವೆ, ಆದರೆ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಆದರೆ ನಾನು ಈ ಆಕ್ಷೇಪಣೆಗಳನ್ನು ಎಲ್ಲಿ ಎಣಿಸಿದ್ದೇನೆ, ಆ ಆಕ್ಷೇಪಣೆಗಳ ಅಂತರಾಳದಲ್ಲಿ ಗಮನಿಸಿದರೆ ಅಲ್ಲಿ ಒಳನೋಟದ ಕೊರತೆಯ ಕಾರಣದಿಂದ ಆಕ್ಷೇಪಿಸುವವರಿಗೆ ಕಾಣದ ಅಪರೂಪದ ಸತ್ಯಗಳಿವೆ ಎಂದು ನಾನು ಪರಿಗಣಿಸಿದ್ದೇನೆ ಮತ್ತು ವಾಸ್ತವವಾಗಿ ಕುರುಡು ಆಕ್ಷೇಪಕನು ಬಂದು ಸಿಕ್ಕಿಹಾಕಿ ಕೊಂಡಿರುವುದು ಸರ್ವಶಕ್ತನಾದ ಅಲ್ಲಾಹನ ಹಿಕ್ಮತ್ (ಬುದ್ಧಿವಂತಿಕೆ) ಆಗಿದೆ. ಸತ್ಯ ಮತ್ತು ದೈವಜ್ಞಾನದ ರಹಸ್ಯ ನಿಧಿ ಇದೆ, ಮತ್ತು ಈ ಧಫನ್ ಆಗಿರುವಂತಃ ಸಂಪತ್ತನ್ನು ಜಗತ್ತಿಗೆ ಬಹಿರಂಗಪಡಿಸಲು ಸರ್ವಶಕ್ತನಾದ ಅಲ್ಲಾಹನು ನನ್ನನ್ನು ಕಳುಹಿಸಿರುವ ಮೂಲ ಉದ್ದೇಶವೇನೆಂದರೆ ನಾನು ಈ ಹೊಳೆಯುವ ರತ್ನಗಳ ಮೇಲೆ ಬಿದ್ದಿರುವ ಅಶುದ್ಧ ಆಕ್ಷೇಪಣೆಗಳ ಕೆಸರನ್ನು (ಅಂದರೆ ಪವಿತ್ರ ಖುರ್‌ಆನ್‌ನ ಮೇಲೆ) ಸ್ವಚ್ಛಗೊಳಿಸುವುದಾಗಿದೆ. ಏಕೆಂದರೆ ಸರ್ವಶಕ್ತನಾದ ಅಲ್ಲಾಹನ ವೈಭವವನ್ನು ಪ್ರತಿ ದುಷ್ಟ ಶತ್ರುಗಳ ಕಳಂಕ ಮತ್ತು ಆಕ್ಷೇಪಣೆಯಿಂದ ಪವಿತ್ರ ಖುರ್‌ಆನ್‌ನ ಗೌರವವನ್ನು ಪವಿತ್ರಗೊಳಿಸಲು ಈ ಸಮಯದಲ್ಲಿ ಬಹಳ ಉತ್ಸಾಹದಲ್ಲಿದೆ.

(ಮಲ್‌ಫೂಝಾತ್, ಸಂಪುಟ-1, ಪುಟ-38)

ವೊ ಖಝಾಎನ್ ಜೊ ಹಝಾರೋಂ ಸಾಲ್ ಸೇ ಮದ್‌ಫೂನ್ ಹೈಂ

ಅಬ್ ಮೈಂ ದೇತಾಹೂಂ ಅಗರ್ ಕೊಯಿ ಮಿಲೇ ಉಮ್ಮೀದ್‌ವಾರ್

(ಅಂದರೆ: ಸಾವಿರಾರು ವರ್ಷಗಳಿಂದ ಹುದುಗಿದ್ದ ಸಂಪತ್ತು. ಈಗ ಅದರ ಅಭ್ಯರ್ಥಿ ಲಭಿಸಿದರೆ ನಾನು ಅದನ್ನು ನೀಡುತ್ತೇನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಸರ್ವಶಕ್ತನಾದ ಅಲ್ಲಾಹನು ಇಸ್ಲಾಂ ಧರ್ಮದ ಸತ್ಯವನ್ನು ಮತ್ತು ಎಲ್ಲಾ ವಿರೋಧಿ ಧರ್ಮಗಳ ಅಮಾನ್ಯತೆಯನ್ನು ನನ್ನ ಕೈಯಿಂದ ಮತ್ತು ನನ್ನ ಸ್ವಂತ ವಿಧಾನದಿಂದ ಸಾಬೀತುಪಡಿಸುತ್ತಾನೆ ..... ನನ್ನ ಕೈಯಿಂದ ಸ್ವರ್ಗೀಯ ಚಿಹ್ನೆಗಳು ಗೋಚರಿಸುತ್ತಿವೆ ಮತ್ತು ನನ್ನ ಲೇಖನಿಯಿಂದ ಪವಿತ್ರ ಖುರ್‌ಆನ್‌ನ ಸತ್ಯಗಳು ಮತ್ತು ದೈವಬೋಧನೆಗಳು ಹೊಳೆಯುತ್ತಿವೆ.

(ತಿರ್‌ಯಾಖಿಲ್ ಖುಲೂಬ್, ರೂಹಾನಿ ಖಝಾಈನ್, ಸಂಪುಟ-15, ಪುಟ-265-268)

ಆತ್ಮೀಯ ಕೇಳುಗರೇ, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಸುಲ್ತಾನುಲ್-ಖಲಮ್ ಎಂಬ ಬಿರುದು ಮತ್ತು ಅವರ ಲೇಖನಿಯೊಂದಿಗೆ ಜುಲ್ಫಿಕರ್ ಅಲಿ ಎಂಬ ಬಿರುದು ನೀಡಿ ಗೌರವಿಸಿದನು. ಅವರು(ಅ) ಸುಮಾರು 90 ಕೃತಿಗಳನ್ನು ರಚಿಸಿದ್ದಾರೆ, ಅವು ರೂಹಾನಿ ಖಝಾಈನ್ ಎಂಬ ಸೆಟ್ ರೂಪದಲ್ಲಿ ಲಭ್ಯವಿದೆ. ನಿಮ್ಮ ಮುನ್ನೂರು ಜಾಹೀರಾತುಗಳು ಮೂರು ಸಂಪುಟಗಳಲ್ಲಿ ಪ್ರಕಟವಾಗಿವೆ. ಮಲ್‌ಫೂಝಾತ್‌ಗಳ ಹತ್ತು ಸಂಪುಟಗಳಿವೆ, ಜ್ಞಾನದಿಂದ ತುಂಬಿದ ನಿಮ್ಮ ಏಳುನೂರು ಪತ್ರಗಳು ಐದು ಸಂಪುಟಗಳಲ್ಲಿ ಪ್ರಕಟವಾಗಿವೆ. ನೀವು ವಿವರಿಸಿದ ಉರ್ದು ಮಂಝೂಮ್ ಕಲಾಮ್, ಪರ್ಷಿಯನ್ ಮಂಝೂಮ್ ಕಲಾಮ್, ಅರೇಬಿಕ್ ಮಂಝೂಮ್ ಕಲಾಮ್ ಮತ್ತು ತಫ್ಸೀರ್ ಅಲ್-ಖುರ್‌ಆನ್ ಅನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ. ಈ ಕೃತಿಗಳಲ್ಲಿ ಅವರು ತಮ್ಮ ಕಾವ್ಯ ಮತ್ತು ಗದ್ಯದ ರೂಪದಲ್ಲಿ ಪವಿತ್ರ ಖುರ್‌ಆನ್ ಮತ್ತು ಅದರ ಉದಾತ್ತತೆಯನ್ನು ತೋರಿಸಿದ್ದಾರೆ. ವಿಶ್ವದ ಅತ್ಯಂತ ಉನ್ನತ ಸ್ಥಾನವನ್ನು ಅವರು ಬಹಿರಂಗಪಡಿಸಿದರು. ಅವರು ಜಗತ್ತನ್ನು ಅದರ ಅನುಪಮ ಸೌಂದರ್ಯವನ್ನು ಬಹಿರಂಗಪಡಿಸುವ ಮೂಲಕ ಅದರ ಒತ್ತೆಯಾಳು ಮಾಡಿದರು ಮತ್ತು ಪವಿತ್ರ ಖುರ್‌ಆನ್ ಮತ್ತು ವಿಜ್ಞಾನ ಮತ್ತು ದೈವಜ್ಞಾನದ ಅಸಂಖ್ಯಾತ ಸತ್ಯಗಳು ಮತ್ತು ವಿವರಗಳನ್ನು ಬಹಿರಂಗಪಡಿಸುವ ಮೂಲಕ ಅದರ ಬೆಳಕು, ಮಾರ್ಗದರ್ಶನ ಮತ್ತು ದಯೆಯನ್ನು ಜಗತ್ತಿಗೆ ಸಾಮಾನ್ಯಗೊಳಿಸಿದರು. ಏಕೆಂದರೆ ಪವಿತ್ರ ಖುರ್‌ಆನ್ ಭೂಮಿಯ ಮೇಲಿನ ಏಕೈಕ ಸಾರ್ವತ್ರಿಕ ಷರಿಯತ್ ಆಗಿದೆ ಎಂದು ಅವರು ವಾದಗಳು ಮತ್ತು ಪುರಾವೆಗಳ ಮೂಲಕ ಸಾಬೀತುಪಡಿಸಿದ್ದಾರೆ, ಇದು (ಖಿಯಾಮತ್ ದಿನ) ಪುನರುತ್ಥಾನದ ದಿನದವರೆಗೆ ಜೀವಂತ ಷರಿಯತ್ ಆಗಿದೆ ಎಂದು ಕರೆಯಲು ನಿಜವಾಗಿಯೂ ಅರ್ಹವಾಗಿದೆ, ಅದರ ಬೋಧನೆಗಳು ಯಾವಾಗಲೂ ಶಾಶ್ವತವಾಗಿರುತ್ತದೆ, ಇದು ಎಲ್ಲಾ ವಯಸ್ಸಿನವರಿಗೆ ಅನ್ವಯಿಸುತ್ತದೆ ಮತ್ತು ಅದರ ಅಗತ್ಯತೆಗಳನ್ನು ಪೂರೈಸುತ್ತದೆ.

ಆತ್ಮೀಯ ಕೇಳುಗರೇ! ಸೀಮಿತ ಸಮಯದಲ್ಲಿ ವಿನೀತನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪುಸ್ತಕಗಳಲ್ಲಿ ಕೆಲವನ್ನು ಮಾತ್ರ ಉಲ್ಲೇಖಿಸುತ್ತೇನೆ.

ತಮ್ಮ ಯೌವನದ ಆರಂಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ದೈವದರ್ಶನದ ಮೂಲಕ 'ಖುತ್ಬಿ' ಎಂಬ ಹೆಸರಿನಿಂದ ಒಂದು ಪುಸ್ತಕವನ್ನು ಬರೆಯಲು ಉದ್ದೇಶಿಸಲಾಗಿದೆ ಎಂದು ಅವರಿಗೆ ತಿಳಿಸಲಾಯಿತು ಮತ್ತು ಖುತ್ಬಿ ಎಂಬ ಪದವು ನಕ್ಷತ್ರದಂತೆ ದಿಗಂತದಲ್ಲಿ ಉದಯಿಸುತ್ತದೆ ಎಂಬ ಬುದ್ಧಿವಂತಿಕೆಯನ್ನು ಹೊಂದಿದೆ. ಅದರ ಬಲವಾದ ವಾದಗಳು ಮತ್ತು ಸ್ಥಿರವಾದ ಮತ್ತು ಅಚಲವಾದ ವಾದಗಳು ಮತ್ತು ಇದು ಇಡೀ ಜಗತ್ತನ್ನು ನಿಜವಾದ ಧರ್ಮದ ಕಡೆಗೆ ಕರೆದೊಯ್ಯುತ್ತದೆ. ಹುಝೂರ್(ಅ) ಅವರ ಈ ದೃಷ್ಟಿಕೋನವು ಬರಾಹೀನೆ ಅಹ್ಮದಿಯಾದ ಪ್ರಕಟಣೆಯ ರೂಪದಲ್ಲಿ ನೆರವೇರಿತು. ಈ ಪುಸ್ತಕವು ಹೊಸ ವಿಜ್ಞಾನದ ಅಡಿಪಾಯವನ್ನು ಹಾಕಿತು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಏಳು ಡಜನ್ ಪುಸ್ತಕಗಳ ಮುಂಚೂಣಿಯಲ್ಲಿದೆ ಎಂದು ಸಾಬೀತಾಯಿತು. ಪವಿತ್ರ ಖುರ್‌ಆನ್‌ನ ಸತ್ಯ ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ದೃಢೀಕರಣಕ್ಕೆ ಪುರಾವೆಯಾಗಿ ಪವಿತ್ರ ಖುರ್‌ಆನ್‌ನಿಂದ ಪ್ರಸ್ತುತಪಡಿಸಲಾದ ಮುನ್ನೂರು ವಾದಗಳನ್ನು ವಿಶ್ವ ಧರ್ಮಗಳು ಮತ್ತು ತತ್ವಶಾಸ್ತ್ರಜ್ಞರಿಗೆ ಸವಾಲು ಹಾಕಿದರು. ಯಾವುದೇ ಮುಸ್ಲಿಮೇತರನು ತನ್ನ ದೈವಿಕ ಪುಸ್ತಕದಿಂದ ತನ್ನ ಧರ್ಮದ ನಂಬಿಕೆಗಳ ಸತ್ಯವನ್ನು ಸಾಬೀತುಪಡಿಸಿ ತೋರಿಸಬೇಕು ಅಥವಾ ಅವುಗಳನ್ನು ಸಂಖ್ಯೆಯಲ್ಲಿ ಪ್ರಸ್ತುತಪಡಿಸಲು ಸಾಧ್ಯವಾಗದಿದ್ದರೆ, ಅವನು ಅರ್ಧ ಅಥವಾ ಮೂರನೇ ಭಾಗವನ್ನು ಅಥವಾ ನಾಲ್ಕನೇ ಭಾಗ ಅಥವಾ ಐದನೇಯ ಭಾಗವೇ ಸರಿ ತನ್ನ ದೈವಿಕ ಗ್ರಂಥದಿಂದ ಸಾಬೀತು ಪಡಿಸಬೇಕು ಅಥವಾ ಅವರಿಗೆ ಪುರಾವೆ ನೀಡಲು ಸಾಧ್ಯವಾಗದಿದ್ದರೆ ನಮ್ಮ ಪುರಾವೆಗಳನ್ನು ಸಂಖ್ಯೆಯ ಕ್ರಮೇಣ ಮುರಿದು ತೋರಿಸಿದರೆ ಅವರಿಗೆ ಹತ್ತು ಸಾವಿರ ರೂಪಾಯಿ ಆಸ್ತಿಯನ್ನು ಮುಲಾಜಿಲ್ಲದೆ ಅವರ ಕೈಸೇರುತ್ತದೆ. ಮುಂದೆ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ: "ವಾಸ್ತವವಾಗಿ ನಾನು ಈ ಪುಸ್ತಕವನ್ನು ಸತ್ಯಾಕಾಂಕ್ಷಿಗಳಿಗೆ ಒಂದು ಶುಭವಾರ್ತೆ ಮತ್ತು ಇಸ್ಲಾಂ ಧರ್ಮವನ್ನು ನಿರಾಕರಿಸುವವರ ವಿರುದ್ಧ ದೈವಿಕ ಪುರಾವೆಯಾಗಿದೆ, ಅದಕ್ಕೆ ಉತ್ತರವು ಪುನರುತ್ಥಾನದ ದಿನದವರೆಗೆ ಅವರಿಂದ ಬರಲು ಸಾಧ್ಯವಿಲ್ಲ ಮತ್ತು ಆ ಕಾರಣಕ್ಕಾಗಿ, ಹತ್ತು ಸಾವಿರ ರೂಪಾಯಿಗಳ ಜಾಹೀರಾತನ್ನೂ ಅದರೊಂದಿಗೆ ಸೇರಿಸಲಾಯಿತು. ಇಸ್ಲಾಂ ಧರ್ಮದ ಸತ್ಯವನ್ನು ನಿರಾಕರಿಸುವವನ ನಿರಾಕರಣೆಗೆ ವಾದಗಳ ಪರಿಪೂರ್ಣತೆಯಾಗಬೇಕು ಮತ್ತು ಅವರ ತಪ್ಪು ಕಲ್ಪನೆ ಮತ್ತು ಸುಳ್ಳು ನಂಬಿಕೆಯಿಂದ ಹೆಮ್ಮೆಪಡಬಾರದು ಮತ್ತು ಮೋಸ ಹೋಗಬಾರದು.

(ಬರಾಹೀನೆ ಅಹ್ಮದಿಯಾ, ರೂಹಾನಿ ಖಝಾಈನ್, ಸಂಪುಟ-1, ಪುಟ-83)

ಆಝ್ಮಾಇಶ್ ಕೆಲಿಯೇ ನ ಆಯಾ ಹರ್ ಚಂದ್

ಹರ್ ಮುಖಾಲಿಫ್ ಕೊ ಬುಲಾಯಾ ಹಮ್ ನೆ

ಆತ್ಮೀಯ ಕೇಳುಗರೇ! ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಖುರ್‌ಆನ್‌ನ ವೈಭವದ ಒಂದು ಅದ್ಭುತ ಸಾಧನೆಯಲ್ಲಿ ಅವರ ಸುಪ್ರಸಿದ್ಧ ಪುಸ್ತಕ "ಇಸ್ಲಾಮ್ ಧರ್ಮ ತತ್ವಜ್ಞಾನ" ಆಗಿದೆ ಇದು ಇನ್ನೂ ಒಳ್ಳೆಯ ಸ್ವಭಾವದ ಮತ್ತು ನ್ಯಾಯೋಚಿತ ಮನಸ್ಸಿನ ಮೇಲೆ ತನ್ನ ಪ್ರಭಾವ ಬೀರುತ್ತಲೇ ಇದೆ. ಅದರ ಘನತೆಯ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರೆಯುತ್ತಾರೆ:

"26, 27, 28 ಡಿಸೆಂಬರ್ 1896 ರಂದು ಲಾಹೋರ್ ಟೌನ್ ಹಾಲ್‌ನಲ್ಲಿ ನಡೆಯಲಿರುವ ಜಲ್ಸಾ-ಎ-ಆಝಮ್ ಮಝಾಹಿಬ್ (ಸರ್ವಧರ್ಮ ಸಮ್ಮೇಳನ), ಪವಿತ್ರ ಖುರ್‌ಆನ್‌ನ ಪರಿಪೂರ್ಣತೆಗಳ ಕುರಿತು ಈ ವಿನಮ್ರ ಬರಹಗಾರನ ಲೇಖನವನ್ನು ಪಠಿಸಲಾಗುತ್ತದೆ. ಇದು ಮಾನವ ಶಕ್ತಿಗಳಿಗಿಂತ ಶ್ರೇಷ್ಠವಾದ ಮತ್ತು ದೇವರ ಚಿಹ್ನೆಗಳಲ್ಲಿ ಒಂದಾದ ಮತ್ತು ಅಲ್ಲಾಹನ ಬೆಂಬಲದಿಂದ ಬರೆಯಲ್ಪಟ್ಟ ಲೇಖನವಾಗಿದೆ. ಇದು ದೇವರ ವಾಕ್ಯ ಮತ್ತು ಲೋಕಗಳ ಪ್ರಭುವಿನ ಪುಸ್ತಕವಾಗಿದೆ ಮತ್ತು ಈ ಲೇಖನವನ್ನು ಪ್ರಾರಂಭದಿಂದ ಕೊನೆಯವರೆಗೆ ಕೇಳುವವರೆಲ್ಲರೂ ಎಲ್ಲಾ ಐದು ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಅವನಲ್ಲಿ ಹೊಸ ವಿಶ್ವಾಸ ಹುಟ್ಟಿ ಹೊಸ ಬೆಳಕು ಅವನಲ್ಲಿ ಬೆಳಗುತ್ತದೆ ಮತ್ತು ಸರ್ವಶಕ್ತನಾದ ಅಲ್ಲಾಹನ ಪವಿತ್ರ ವಾಕ್ಯದ ಸಮಗ್ರ ವ್ಯಾಖ್ಯಾನವು ಅವನ ಕೈಗೆ ಬರುತ್ತದೆ ಎಂದು ನಾನು ನಂಬುತ್ತೇನೆ... ಸರ್ವಶಕ್ತನಾದ ಅಲ್ಲಾಹನು ನನಗೆ ಇಲ್‌ಹಾಮ್‌ನಿಂದ ತಿಳಿಸಿದ್ದಾನೆ. ಇದು ಎಲ್ಲಕ್ಕಿಂತ ಮೇಲುಗೈ ಸಾಧಿಸುವ ಲೇಖನವಾಗಿದೆ ಮತ್ತು ಇದರಲ್ಲಿ ಸತ್ಯ ಮತ್ತು ಬುದ್ಧಿವಂತಿಕೆ ಮತ್ತು ದೈವಜ್ಞಾನದ ಪ್ರಕಾಶವಿದೆ, ಇತರ ಸಮುದಾಯಗಳು, ಅವರು ಉಪಸ್ಥಿತರಿದ್ದರೆ ಮತ್ತು ಅದನ್ನು

ಮೊದಲಿನಿಂದ ಕೊನೆಯವರೆಗೆ ಆಲಿಸಿದರೆ, ಅವರು ಎಂದಿಗೂ ತಮ್ಮ ಪುಸ್ತಕದಿಂದ ಇಂತಹ ಪರಿಪೂರ್ಣತೆಯನ್ನು ತೋರಿಸಲು ಸಾಧ್ಯವಾಗುವುದಿಲ್ಲ ಎಂದು ನಾಚಿಕೆಪಡುತ್ತಾರೆ. ... ಏಕೆಂದರೆ ಈ ಪವಿತ್ರ ಪುಸ್ತಕದ ಮಹಿಮೆಯನ್ನು ಈ ದಿನದಂದು ಬಹಿರಂಗಪಡಿಸಬೇಕೆಂದು ಸರ್ವಶಕ್ತನಾದ ಅಲ್ಲಾಹನು ಉದ್ದೇಶಿಸಿದ್ದಾನೆ. ನಾನು ದೈವದರ್ಶನದಲ್ಲಿ ಅದರ ಬಗ್ಗೆ ಕಂಡಿರುವುದೇನೆಂದರೆ ನನ್ನ ಅರಮನೆಯ ಮೇಲೆ ಅದೃಶ್ಯವಾಗಿ ಕೈಯಿಂದ ಹೊಡೆಯಲಾಗಿದೆ ಮತ್ತು ಅದರ ಸ್ಪರ್ಷದಿಂದ.... ಆ ಅರಮನೆಯಿಂದ ಒಂದು ಪ್ರಕಾಶವು ಹೊರಹೊಮ್ಮಿತು ಮತ್ತು ಅದು ಸುತ್ತಲೂ ಹರಡಿತು. ಮತ್ತು ಅದರ ಪ್ರಕಾಶವು ನನ್ನ ಕೈಯಲ್ಲಿಯೂ ಇತ್ತು. ಆಗ ನನ್ನ ಹತ್ತಿರ ನಿಂತಿದ್ದ ವ್ಯಕ್ತಿಯೊಬ್ಬ ಜೋರು ಧ್ವನಿಯಲ್ಲಿ ಹೇಳಿದ. ಅಲ್ಲಾಹು ಅಕ್ಬರ್ ಖರಿಬತ್ ಖೈಬರ್."

ಆ ದಿವ್ಯಸ್ವಪ್ನದ ವಿವರಣೆ ಏನೆಂದರೆ ಈ ಅರಮನೆಯು ನನ್ನ ಹೃದಯವನ್ನು ಅರ್ಥೈಸುತ್ತದೆ, ಅದು ದಿವ್ಯಪ್ರಕಾಶಗ ಅವತರಣಿಕೆಯ ಸ್ಥಳವಾಗಿದೆ ಮತ್ತು ಆ ದಿವ್ಯಪ್ರಕಾಶವು ಪವಿತ್ರ ಖುರ್‌ಆನ್‌ನ ದೈವಜ್ಞಾನವಾಗಿದೆ ಮತ್ತು ಖೈಬರ್ ಎಂದರೆ ಎಲ್ಲಾ ಕೆಟ್ಟ ಧರ್ಮಗಳಾಗಿವೆ, ಇದರಲ್ಲಿ ಬಹುದೇವತೆಯ ಮತ್ತು ಸುಳ್ಳಿನ ಮಿಶ್ರಣವಿದೆ ಮತ್ತು ಒಬ್ಬ ಮನುಷ್ಯನಿಗೆ ದೇವರ ಸ್ಥಾನವನ್ನು ನೀಡಲಾಗಿದೆ ಅಥವಾ ದೇವರ ಪರಿಪೂರ್ಣ ಗುಣಲಕ್ಷಣಗಳನ್ನು ತನ್ನ ಪರಪೂಣ ಸ್ಥಳದಿಂದ ಕಡಿಮೆ ಮಾಡಲಾಗಿದೆ. ಆದ್ದರಿಂದ ಈ ಲೇಖನವು ಚೆನ್ನಾಗಿ ಹರಡಿದ ನಂತರ, ಸುಳ್ಳು ಧರ್ಮಗಳ ಸುಳ್ಳುಗಳು ಬಹಿರಂಗಗೊಳ್ಳುತ್ತವೆ ಮತ್ತು ಪವಿತ್ರ ಖುರ್‌ಆನ್‌ನ ಸತ್ಯವು ಭೂಮಿಯ ಮೇಲೆ ಅದು ತನ್ನ ವೃತ್ತವನ್ನು ಪೂರ್ಣಗೊಳಿಸುವವರೆಗೆ ದಿನದಿಂದ ದಿನಕ್ಕೆ ಹರಡುತ್ತದೆ ಎಂದು ನನಗೆ ಮನವರಿಕೆಯಾಗಿದೆ. ನಂತರ ನಾನು ಈ ದೈವಸ್ವಪ್ನದ ಸ್ಥಿತಿಯಿಂದ ಇಲ್‌ಹಾಮ್‌ನ ಕಡೆಗಗೆ ಚಲಿಸಿದೆ ಮತ್ತು ನನಗೆ ಹೀಗೆ ದೈವವಾನಿ ಲಭಿಸಿತು: **ಇನ್ನಲ್ಲಾಹ ಮಅಕ ಇನ್ನಲ್ಲಾಹ ಯಖೂಮ ಐನಮಾ ಖುಮ್‌ತ** ಅಂದರೆ: ದೇವರು ನಿಮ್ಮೊಂದಿಗಿದ್ದಾನೆ, ನೀವು ಎಲ್ಲಿ ನಿಲ್ಲುತ್ತೀರೋ ದೇವರು ಅಲ್ಲಿಯೇ ನಿಂತಿದ್ದಾನೆ. ಇದು ದೈವಿಕ ಬೆಂಬಲದ ರೂಪಕವಾಗಿದೆ. (ತಿರ್‌ಯಾಖುಲ್ ಖುಲೂಬ್, ರೂಹಾನಿ ಖಝಾಈನ್, ಸಂಪುಟ-15, ಪುಟ-226-227, ಮಜ್‌ಮುಅ ಇಶ್ತಿಹಾರಾತ್ ಸಂಪುಟ-1, ಪುಟ-614-615)

ಆತ್ಮೀಯ ಕೇಳುಗರೇ! ಇಸ್ಲಾಮ್ ಧರ್ಮದ ತತ್ವಜ್ಞಾನದ ಈ ಲೇಖನವು ನಿಸ್ಸಂದೇಹವಾಗಿ ಪವಿತ್ರ ಖುರ್‌ಆನ್‌ನ ಸತ್ಯಾಸತ್ಯ ದೈವಜ್ಞಾನದ ಸತ್ಯಗಳು ಮತ್ತು ಬೋಧನೆಗಳ ಅನನ್ಯ ಮತ್ತು ಸ್ಪರ್ಶಿಸದ ವ್ಯಾಖ್ಯಾನವಾಗಿದೆ ಮತ್ತು ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಖುರ್‌ಆನ್‌ನ ಹಿರಿಮೆಯನ್ನು ವ್ಯಕ್ತಪಡಿಸುವ ಪ್ರಯತ್ನಗಳಲ್ಲಿ ಒಂದು ಮೈಲಿಗಲ್ಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ದೈವ ಅನುಮೋದಿಸಿದ ಈ ಲೇಖನವು ಸ್ಥಳೀಯವಾಗಿ ಮಾತ್ರವಲ್ಲದೆ ಭಾರತದಾದ್ಯಂತ ಮತ್ತು ಪ್ರಪಂಚದಾದ್ಯಂತದ ಬುದ್ಧಿಜೀವಿಗಳಲ್ಲಿ ಅಂತಹ ಭೂಕಂಪವನ್ನು ಉಂಟುಮಾಡಿತು, ಮಹಾನ್ ಚಿಂತಕರು ಮಾತ್ರವಲ್ಲದೆ ಆ ಕಾಲಘಟ್ಟದ ಪತ್ರಿಕೆಗಳು ಸಹ ಈ ಲೇಖನದ ಹಿರಿಮೆಯನ್ನು ಒಪ್ಪಿಕೊಂಡು, ಈ ಲೇಖನವು ಎಲ್ಲದಕ್ಕಿಂತ ಮೇಲುಗ್ಯೆ ಸಾಧಿಸಿದೆ ಎಂದು ಬಹಿರಂಗವಾಗಿ ಪ್ರಕಟಿಸಲಾಯಿತು. ಹೀಗೆ ಪತ್ರಿಕೆಯೊಂದು ಬರೆದಿದೆ:

"ಮಿರ್ಝಾ ಸಾಹಿಬ್ ಅವರು ನಿನ್ನೆಯ ಪ್ರಶ್ನೆಗಳಿಗೆ ಪವಿತ್ರ ಖುರ್‌ಆನ್‌ನಿಂದ ಉತ್ತರಿಸಿದರು ಮತ್ತು ಇಸ್ಲಾಂನ ಎಲ್ಲಾ ಪ್ರಮುಖ ತತ್ವಗಳು ಮತ್ತು ಶಾಖೆಗಳನ್ನು ತರ್ಕಬದ್ಧ ವಾದಗಳು ಮತ್ತು ತರ್ಕಬದ್ಧ ತತ್ವಶಾಸ್ತ್ರದೊಂದಿಗೆ ವಿವರಿಸಿದರು ಮತ್ತು ಅಲಂಕರಿಸಿದರು." (ಪತ್ರಿಕೆ 'ಚೌಧ್‌ವೀಂ ಸದಿ' ರಾವಲ್‌ಪಿಂಡಿ, ಫೆಬ್ರವರಿ 1, 1897, ರೂಹಾನಿ ಖಝಾಈನ್ ಸಂಪುಟ-10, ಪುಸ್ತಕಗಳ ಪರಿಚಯ)

ಕೇಳುಗರೇ! ಪಾದರಿ ಇಮಾದುದ್ದೀನ್ ಎಂಬವನು "ಝೈನುಲ್-ಅಖ್ವಾಲ್" ಎಂಬ ಪುಸ್ತಕವನ್ನು ಬರೆಯುವ ಮೂಲಕ ಪವಿತ್ರ ಖುರ್‌ಆನ್ ಮೇಲೆ ದಾಳಿ ಮಾಡಿದನು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದಕ್ಕೆ ಪ್ರತಿಕ್ರಿಯೆಯಾಗಿ ನೂರುಲ್-ಹಖ್ ಎಂಬ ಪುಸ್ತಕವನ್ನು ಬರೆದರು. ಆ ಪುಸ್ತಕದಲ್ಲಿ ಪವಿತ್ರ ಖುರ್‌ಆನ್‌ನ ದೈವಜ್ಞಾನ ಮತ್ತು ಸತ್ಯಗಳನ್ನು ಬಹಿರಂಗಪಡಿಸಿದರು. ಈ ರೀತಿಯ ಒಂದಲ್ಲ ಎರಡಲ್ಲ, ನಿಮ್ಮ ಬರಹಗಳಲ್ಲಿ ಅನೇಕ ಉದಾಹರಣೆಗಳಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಪ್ರತಿಯೊಂದು ಧರ್ಮದ ಜನರಿಗೆ ನಿಮ್ಮ ಪ್ರೇರಿತ ಪುಸ್ತಕದಿಂದ ನಿಮ್ಮ ಧರ್ಮದ ವಾದವನ್ನು ಸಾಬೀತುಪಡಿಸಿ ಎಂದು ಆಹ್ವಾನಿಸಿದ್ದೀರಿ. ಪವಿತ್ರ ಖುರ್‌ಆನ್‌ನ ಹಿರಿಮೆ ಮತ್ತು ಮಹಿಮೆ ದ್ವಿಗುಣಗೊಂಡಿದೆ ಏಕೆಂದರೆ ಪವಿತ್ರ ಖುರ್‌ಆನ್‌ನ ಪವಿತ್ರ ಮತ್ತು ಸಂಪೂರ್ಣ ಬೋಧನೆಗಳು ಎಲ್ಲಾ ಸ್ವರ್ಗೀಯ ಪುಸ್ತಕಗಳಲ್ಲಿ ಅನನ್ಯವಾಗಿದೆ.

ಜಮಾಲೊ ಹುಸ್ನೆ ಖುರ್‌ಆನ್ ನೂರೆ ಜಾನ್ ಹರ್ ಮುಸಲ್ಮಾನ್ ಹೈ
ಖಮರ್ ಹೈ ಚಾಂದ್ ಔರೋಂ ಕಾ ಹಮಾರಾ ಚಾಂದ್ ಖುರ್‌ಆನ್ ಹೈ
ನಝೀರ್ ಉಸ್ಕೀ ನಹೀ ಜಮ್ತಿ ನಝರ್ ಮೇಂ ಫಿಕ್ರ್ ಕರ್ ದೇಖಾ
ಭಲಾ ಕ್ಯುಂಕರ್ ನಹೋ ಯಕ್ತಾ ಕಲಾಮೆ ಪಾಕ್ ರಹ್ಮಾನ್ ಹೈ
ಬಹಾರೆ ಜಾವೆದಾಂ ಪೈದಾ ಹೈ ಉಸ್ಕಿ ಹರ್ ಇಬಾರತ್ ಮೇಂ
ನ ವೋ ಖೂಬಿ ಚಮನ್ ಮೇಂ ಹೈ ನ ಉಸ್ ಸಾ ಕೋಯೀ ಬುಸ್ತಾನ್ ಹೈ

ಕೇಳುಗರೇ! ಹಝ್ರತ್ ಅಖ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಧರ್ಮೇತರರ ವಿರುದ್ಧ ಪವಿತ್ರ ಖುರ್‌ಆನ್‌ನ ಶ್ರೇಷ್ಠತೆಯನ್ನು ಸಾಬೀತುಪಡಿಸಿದರು, ಅದೇ ಸಮಯದಲ್ಲಿ ಅವರು ಆಂತರಿಕವಾಗಿ ಉಮ್ಮತೆ ಮುಹಮ್ಮದಿಯಾ(ಸ)ನಲ್ಲಿ ಪವಿತ್ರ ಖುರ್‌ಆನ್‌ನೊಂದಿಗೆ ಸಂಬಂಧಹೊಂದಿರುವವರ ತಪ್ಪು ತಪ್ಪು ನಂಬಿಕೆಗಳು ಮತ್ತು ಸಿದ್ಧಾಂತಗಳನ್ನು ತೆಗೆದುಹಾಕುವ ಮೂಲಕ ಪವಿತ್ರ ಖುರ್‌ಆನ್‌ನ ಪಾವಿತ್ರ್ಯತೆ ಮತ್ತು ಶ್ರೇಷ್ಠತೆಯನ್ನು ಸ್ಥಾಪಿಸಿದರು. ಮುಸ್ಲಿಮರಲ್ಲಿ ಸರ್ವಶಕ್ತನಾದ ಅಲ್ಲಾಹನ ಗುಣವಾದ ತಕಲ್ಲುಮ್ (ಸಂಭಾಷಿಸುವುದು) ಎಂಬುದು ಈಗ ಸ್ಥಗಿತಗೊಳಿಸಲಾಗಿದೆ. ಅಲ್ಲಾಹನು ಹಿಂದಿನ ಕಾಲದಲ್ಲಿ ಮಾತನಾಡುತ್ತಿದ್ದನು, ಆದರೆ ಈಗ ಅವನು ಮಾತನಾಡುವುದಿಲ್ಲ ಎಂಬ ತಪ್ಪು ನಂಬಿಕೆಯನ್ನು ಹೊಂದಿದ್ದರು. ಅಂದರೆ ಮುಜೀಬುದ್ದುಆ ಆಗಿರುವ ದೇವರಲ್ಲಿ ಮುಸ್ಲಿಮರ ವಿಶ್ವಾಸವು ಅಂತ್ಯವಾಗಿತ್ತು ಮತ್ತು ವಹೀ ಮತ್ತು ಇಲ್‌ಹಾಮ್ ನ ವಿಶ್ವಾಸವನ್ನು ನಿರಾಕರಿಸಿದರು. ಸರ್ ಸೈಯದ್ ಅಹ್ಮದ್ ಖಾನ್ ಅವರಂತಹ ವಿದ್ವಾಂಸರು ದುಆವಿನ ತತ್ವವನ್ನು ನಿರಾಕರಿಸಿದ್ದರು.

ಕೇಳುಗರೇ! ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನ ಮೂಲ ಉದ್ದೇಶವು ಮತ್ತು ಅವರ(ಸ) ದೊಡ್ಡ ಪವಾಡದ ಮುಖ್ಯ ಉದ್ದೇಶವೆಂದರೆ ಅವರು(ಅ) ಹೈಯು (ಜೀವಂತ) ಮತ್ತು ಖೈಯೂಮ್, ದುಆಗಳನ್ನು ಉತ್ತರಿಸುವ ದೇವರನ್ನು ಪ್ರಸ್ತುತಪಡಿಸುವುದಾಗಿತ್ತು ಮತ್ತು ನಿಮ್ಮ ಅಸ್ತಿತ್ವದ ಮೂಲಕ ಜೀವಂತ ದೇವರ ಅಭಿವ್ಯಕ್ತಿ ಬಹಿರಂಗವಾಯಿತು. ನೀವು ಪವಿತ್ರ ಖುರ್‌ಆನ್‌ನ ನೈಜ ಅನುಸರಣೆಯಿಂದ ಜೀವಂತ ದೇವರು ಲಭಿಸುತ್ತಾನೆ ಎಂದು ಸಾಬೀತು ಪಡಿಸಿದರು ಮತ್ತು ದೇವರ ಸ್ವಾರಸ್ಯಕರ ಸಂವಾದವನ್ನು ಲಭಿಸುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಪವಿತ್ರ ಖುರ್‌ಆನ್ ತನ್ನ ಆಧ್ಯಾತ್ಮಿಕ ವೈಶಿಷ್ಟ್ಯತೆಯಿಂದಾಗಿ ಮತ್ತು ತನ್ನ ವೈಯಕ್ತಿಕ ಪ್ರಕಾಶದಿಂದಾಗಿ ತನ್ನ ನೈಜ ದಾಸರನ್ನು ತನ್ನ ಕಡೆ ಆಕರ್ಷಿಸುತ್ತದೆ ಮತ್ತು ಆತನ ಹೃದಯವನ್ನು ಪ್ರಜ್ವಲಗೊಳಿಸುತ್ತದೆ ಮತ್ತು ದೊಡ್ಡ ದೊಡ್ಡ ಕುರುಹುಗಳನ್ನು ತೋರಿಸಿ ತುಂಡರಿಸಲು ಬಯಸುವ ಕತ್ತಿಯಿಂದಲೂ ಅದನ್ನು ಮುರಿಯಲಾಗದ ರೀತಿಯಲ್ಲಿ ದೇವನೊಂದಿಗಿನ ಸಂಬಂಧವನ್ನು ದೃಢಗೊಳಿಸುತ್ತದೆ. ಅದು ಹೃದಯದ ಕಣ್ಣುಗಳನ್ನು ತೆರೆಯುತ್ತದೆ ಮತ್ತು ಪಾಪದ ಕೊಳೆಯನ್ನು ಮುಚ್ಚುತ್ತದೆ ಮತ್ತು ದೇವರ ಮಧುರ ಸಂಭಾಷಣೆಯ ಗೌರವವನ್ನು ನೀಡುತ್ತದೆ ಮತ್ತು ಅದೃಶ್ಯ ಜ್ಞಾನವನ್ನು ನೀಡುತ್ತದೆ ಮತ್ತು ದುಆವನ್ನು ಸ್ವೀಕರಿಸಿದಾಗ ಅವನ ಮಾತಿನ ಮೂಲಕ ತಿಳಿಸುತ್ತಾನೆ. ಮತ್ತು ಈ ವ್ಯಕ್ತಿಯನ್ನು ವಿರೋಧಿಸುವ ಎಲ್ಲರಿಗೂ. ಪವಿತ್ರ ಖುರ್‌ಆನ್‌ನ ನಿಜವಾದ ಅನುಯಾಯಿ, ದೇವರು ತನ್ನ ಮಾತುಗಳನ್ನು ಅನುಸರಿಸುವ ವ್ಯಕ್ತಿಯೊಂದಿಗೆ ಅವನು ಇದ್ದಾನೆ ಎಂದು ತನ್ನ ಅದ್ಭುತ ಚಿಹ್ನೆಗಳೊಂದಿಗೆ ಅವನಿಗೆ ಬಹಿರಂಗಪಡಿಸುತ್ತಾನೆ." (ಚಶ್ಮಾ ಮ‌ಅರಿಫ‌ತ್, ರೂಹಾನಿ ಖಝಾಈನ್, ಸಂಪುಟ-23, ಪುಟ-305)

ಅದೇ ರೀತಿ ಹೇಳುತ್ತಾರೆ: "ನಾನು ಆತ್ಮೀಯ ಕೇಳುಗರಿಗೆ ಖಚಿತಪಡಿಸುವುದೇನೆಂದರೆ ಮನುಷ್ಯನ ಮೋಕ್ಷ ಮತ್ತು ಶಾಶ್ವತ ಸಮೃದ್ಧಿಯನ್ನು ಹೊಂದಿರುವ ದೇವರನ್ನು ಪವಿತ್ರ ಖುರ್‌ಆನ್ ಅನ್ನು ಅನುಸರಿಸುವ ಹೊರತು ಪಡೆಯಲು ಖಂಡಿತವಾಗಿಯು ಸಾಧ್ಯವಿಲ್ಲ....... ಮತ್ತು ನಮಗೆ ಕಣ್ಣುಗಳಿಲ್ಲದೆ ಕಾಣಲಿಕ್ಕೂ ಕಿವಿಗಳಿಲ್ಲದೆ ಕೇಳಲಿಕ್ಕೂ ನಾಲಿಗೆಯಿಲ್ಲದೆ ಮಾತನಾಡಲಿಕ್ಕೂ ಸಾಧ್ಯವಾಗದಂತೆಯೇ ಪವಿತ್ರ ಖುರ್‌ಆನಿನ ಸಹಾಯವಿಲ್ಲದೆ ಆ ಯಥಾರ್ಥ ಪ್ರೇಮ ಸ್ವರೂಪನಾದ ದೇವನ ಮುಖವನ್ನು ಕಾಣಲಿಕ್ಕೆ ಸಾಧ್ಯವಿಲ್ಲ. ನಾನು ಯೌವನಾವಸ್ಥೆಯನ್ನು ದಾಟಿ ವೃದ್ಧಾಪ್ಯವನ್ನು ಪಡೆದಿರುವನು. ಈ ದೀರ್ಘಕಾಲದ ಜೀವಿತದಲ್ಲಿ ಪಾವನ ಜ್ಞಾನದ ಮೂಲವಾದ ಈ ಮಾರ್ಗದ ಮೂಲಕವಲ್ಲದೆ ಪರಮಾರ್ಥಜ್ಞಾನವೆಂಬ ಅಮೃತವನ್ನು ಕುಡಿದು ತೃಪ್ತಿ ಪಡೆದ ಯಾರನ್ನೂ ನಾನು ಕಂಡಿಲ್ಲ. (ಇಸ್ಲಾಮಿ ಉಸೂಲ್ ಕೀ ಫಿಲಾಸಫಿ, ರೂಹಾನಿ ಖಝಾಈನ್, ಸಂಪುಟ-10, ಪುಟ-442)

ಖುರ್‌ಆನ್ ಖುದಾ ನುಮಾ ಹೈ ಖುದಾ ಕಾ ಕಲಾಮ್ ಹೈ
ಬೇ ಇಸ್ಕೆ ಮಾರಿಫತ್ ಕಾ ಚಮನ್ ನಾ ತಮಾಮ್ ಹೈ
ಸಬ್ ಜಹಾನ್ ಛಾನ್ ಚುಕೇ ಸಾರಿ ದುಕಾನೇಂ ದೇಖೀಂ
ಮಏ ಇರ್‌ಫಾನ್ ಕಾ ಯಹೀ ಇಕ್ ಶೀಶಾ ನಿಕ್ಲಾ
ಹಖ್ ಕಿ ತೌಹೀದ್ ಕಾ ಮುರ್‌ಝ್ಝಾ ಹೀ ಚಲಾ ಥಾ ಪೌದಾ
ನಾ ಗಿಹಾಂ ಗೈಬ್ ಸೆ ಯೆಹ್ ಚಶ್ಮ ಏ ಅಸ್‌ಫಾ ನಿಕ್ಲಾ

ಆತ್ಮೀಯ ಕೇಳುಗರೇ! ಮುಸ್ಲಿಮರಲ್ಲಿ, ಪವಿತ್ರ ಖುರ್‌ಆನ್‌ನ ಬಗ್ಗೆ ಒಂದು ತಪ್ಪು ನಂಬಿಕೆ ನಾಸಿಖ್ ಮನ್‌ಸೂಖ್ (ಅಂದರೆ ಪವಿತ್ರ ಖುರ್‌ಆನ್‌ನ

ಕೆಲವು ಆಯತ್‌ಗಳು ರದ್ದಾಗಿವೆ ಎಂದು) ಗೆ ದಾರಿಯನ್ನು ಕಂಡುಕೊಂಡಿದೆ, ಆದ್ದರಿಂದ ಅಲ್ಲಮಾ ಮುಹಮ್ಮದ್ ಬಿನ್ ಹಝ್ರ್‌ಮ್ ಈ ವಿಷಯದಲ್ಲಿ ಮುಸ್ಲಿಮರ ನಂಬಿಕೆಯನ್ನು ಈ ಕೆಳಗಿನಂತೆ ವಿವರಿಸಿದ್ದಾರೆ:

ಪವಿತ್ರ ಖುರ್‌ಆನ್‌ನಲ್ಲಿ ರದ್ದುಪಡಿಸಿದ ಆಯತ್‌ಗಳ ಅರ್ಥವೇನೆಂದರೆ ಒಂದು ಆಯತ್ ಪವಿತ್ರ ಖುರ್‌ಆನ್‌ನಲ್ಲಿ ಬರೆಯಲಾಗಿದೆ ಆದರೆ ಅದು ಅನುಸರಣೆಗೆ ಸಾಧ್ಯವಿಲ್ಲ, ಅದು ಪಠಿಸಿಕ್ಕೆ ಮಾತ್ರವಿದೆ. ಅದನ್ನು ಅನುಸರಿಸಲು ಆದೇಶಿಸಲಾಗಿಲ್ಲ, ಏಕೆಂದರೆ ಅದರ ರದ್ದತಿಯಿಂದಾಗಿ ಅದರ ಆಜ್ಞೆಯು ಅಮಾನ್ಯವಾಗಿದೆ.(ನಾಸಿಖ್ ವ ಮನ್‌ಸೂಖ್, ಪುಟ–146)

ಹಝ್ರತ್ ಷಾ ವಲಿಯುಲ್ಲಾ ಮುಹದ್ದಿತ್ ದೆಹ್ಲವಿ(ರಹ್) ಅವರು ಐದು ಆಯತ್‌ಗಳನ್ನು ಉಲ್ಲೇಖಿಸಿದ್ದಾರೆ, ಅಲ್ಲಮ ಸುಯೂತಿ ಅವರು ಇಪ್ಪತ್ತು ಮತ್ತು ಕೆಲವು ವಿದ್ವಾಂಸರು ಐನೂರರವರೆಗಿನ ರದ್ದುಗೊಳಿಸಿದ ಆಯತ್‌ಗಳ ಸಂಖ್ಯೆಯನ್ನು ಉಲ್ಲೇಖಿಸಿದ್ದಾರೆ. ಇದರಿಂದ ಉಳಿದ ಖುರ್‌ಆನ್ ನಂಬಲಾಗದಂತಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಬಹಳ ದೃಢವಾಗಿ ಈ ತಪ್ಪು ನೊಂಬಿಕೆಯನ್ನು ರದ್ದುಗೊಳಿಸಿ ಪವಿತ್ರ ಖುರ್‌ಆನ್‌ನ ಶ್ರೇಷ್ಠತೆಯನ್ನು ಧ್ಯಾಪಿಸಿದರು. ಅವರು(ಅ) ನುಡಿಯುತ್ತಾರೆ:

"ಪವಿತ್ರ ಖುರ್‌ಆನ್ ಸ್ವರ್ಗೀಯ ಪುಸ್ತಕಗಳಲ್ಲಿ ಕೊನೆಯದು ಎಂದು ನಾವು ದೃಢವಾಗಿ ನಂಬುತ್ತೇವೆ ಮತ್ತು ಒಂದೇ ಒಂದು ಗುರುತು ಅಥವಾ ಚುಕ್ಕೆಯೂ ಅದರ ಮಿತಿಗಳು, ನಿಯಮಗಳು ಮತ್ತು ಆಜ್ಞೆಗಳಿಗಿಂತ ಹೆಚ್ಚು ಅಥವಾ ಕಡಿಮೆ ಇಲ್ಲ ಮತ್ತು ಈಗ ಅಂತಹ ವಹಿ ಅಥವಾ ಅಂತಹ ಇಲ್‌ಹಾಮ್ ಅಲ್ಲಾಹನ ಕಡೆಯಿಂದ ಅವತರಿಸುವುದಿಲ್ಲ. ಅವು ಪವಿತ್ರ ಖುರ್‌ಆನ್‌ನ ತೀರ್ಪುಗಳನ್ನು ತಿದ್ದುಪಡಿ ಮಾಡುವ ಅಥವಾ ರದ್ದುಗೊಳಿಸುವ ಅಥವಾ ಯಾವುದೇ ತೀರ್ಪುಗಳನ್ನು ಬದಲಾಯಿಸುವಂತಹದ್ದಾಗಿರುವುದಿಲ್ಲ. ಯಾರಾದರೂ ಹಾಗೆ ಭಾವಿಸಿದರೆ, ಅವನು ಮುಮಿನೀನ್‌ನ ಜಮಾಅತ್‌ನಿಂದ ಹೊರಗಿದ್ದಾನೆ ಮತ್ತು ನಾಸ್ತಿಕ ಮತ್ತು ನಂಬಿಕೆಯಿಲ್ಲದವನಾಗಿದ್ದಾನೆ. (ಇಝಾಲಾ ಔಹಾಮ್, ರೂಹಾನಿ ಖಝಾಇನ್, ಸಂಪುಟ–3, ಪುಟ–169)

ಆತ್ಮೀಯ ಕೇಳುಗರೇ! ಎಷ್ಟೆ ಹದೀಸ್ ಕಡೆಯಿಂದ ಪವಿತ್ರ ಖುರ್‌ಆನ್‌ನ ಮೇಲೆ ಹದೀಸ್ ಅನ್ನು ಆದ್ಯತೆಯನ್ನು ಪ್ರಸ್ತುತಪಡಿಸುವ ಪ್ರಲೋಭನೆಯು ಪವಿತ್ರ ಖುರ್‌ಆನ್‌ನ ದರ್ಜೆಯಲ್ಲಿ ಇಳಿಕೆಗೆ ಕಾರಣವಾಯಿತು. ಈ ನಿಟ್ಟಿನಲ್ಲಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪವಿತ್ರ ಖುರ್‌ಆನ್‌ನ ಮಹಿಮೆಯನ್ನು ವ್ಯಕ್ತಪಡಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಪವಿತ್ರ ಖುರ್‌ಆನ್ ನ ಹಿರಿಮೆ ಈಗ ಮುಸ್ಲಿಮರಲ್ಲಿ ಇಲ್ಲ. ಶಿಯಾಗಳು, ಅವರು ಇಮಾಮ್‌ಗಳ ಹೇಳಿಕೆಗಳಿಗೆ ಆದ್ಯತೆ ನೀಡುತ್ತಾರೆ ಮತ್ತು ಇತರ ಪಕ್ಷದವರು ಹದೀಸ್‌ಗಳ ಸರಪಳಿಯನ್ನು ಖುರ್‌ಆನ್‌ನ ಮೇಲೆ ನ್ಯಾಯಾಧೀಶರನ್ನಾಗಿ ಮಾಡುತ್ತಾರೆ." (ಮಲ್‌ಫೂಝಾತ್, ಸಂಪುಟ–2, ಪುಟ–444)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ತಮ್ಮ ಒಂದು ದರ್ಶನವನ್ನು ಉಲ್ಲೇಖಿಸುತ್ತಾ ಹೀಗೆ ಹೇಳುತ್ತಾರೆ:

ಇಂದು ರಾತ್ರಿ ನನಗೆ ಸ್ವಪ್ನದಲ್ಲಿ ಒಂದು ಮರವು ಫಲಭರಿತವಾಗಿದೆ ಮತ್ತು ಅದು ತುಂಬಾ ಸೂಕ್ಷ್ಮವಾಗಿದೆ ಮತ್ತು ಉತ್ತಮ ನೋಟ ಮತ್ತು ಹಣ್ಣುಗಳಿಂದ ತುಂಬಿದೆ ಎಂದು ತೋರಿಸಲಾಯಿತು ಮತ್ತು ಕೆಲವು ಗುಂಪುಗಳು ಕಷ್ಟಪಟ್ಟು ಮತ್ತು ಬಲದಿಂದ ಅದರ ಮೇಲೆ ಒಂದು ಬೇರಿಲ್ಲದ ಸಸ್ಯವನ್ನು ಏರಿಸಲು ಬಯಸುತ್ತಾರೆ. ಆ ಸಸ್ಯವು ಅಫ್‌ತೈಮೂನ್ (ಒಂದು ಬಗೆಯ ಔಷಧಿಯ ಸಸ್ಯ) ರೀತಯಲ್ಲಿದೆ ಆ ಸಸ್ಯವು ಆ ಮರವನ್ನು ಏರಿದಾಗ ಅದರ ಹಣ್ಣುಗಳಿಗೆ ಹಾನಿಯಾಗುತ್ತದೆ ಮತ್ತು ಈ ಸೂಕ್ಷ್ಮ ಮರದಲ್ಲಿ ಸುಕ್ಕುಗಟ್ಟಿದ ಮತ್ತು ವಿಕಾರವು ಉಂಟಾಗುತ್ತದೆ ಮತ್ತು ಈ ಮರದಿಂದ ನಿರೀಕ್ಷಿಸಿದ ಹಣ್ಣುಗಳು ಹಾಳಾಗುತ್ತದೆ ಎಂದು ಭಾಸವಾಗುತ್ತದೆ ಬದಲಿಗೆ ಅದರ ಸ್ವಲ್ಪ ಮಟ್ಟಿಗೆ ಹಾಳಾಗುತ್ತದೆ. ಆಗ ನಾನು ಅದನ್ನು ನೋಡಿದಾಗ ನನ್ನ ಮನಸ್ಸು ಭಯಪಟ್ಟು ಕರಗಿತು. ನಾನು ಒಳ್ಳೆಯ ಮತ್ತು ಪರಿಶುದ್ಧ ವ್ಯಕ್ತಿಯ ರೂಪದಲ್ಲಿ ನಿಂತಿರುವ ಒಬ್ಬ ವ್ಯಕ್ತಿಗೆ ಕೇಳಿದೆ: ಈ ಮರ ಮತ್ತು ಈ ಸಸ್ಯ ಯಾವುದು? ಅಂತಹ ಸೂಕ್ಷ್ಮವಾದ ಮರವನ್ನು ಸಂಕೋಲೆಯಲ್ಲಿ ಹಿಡಿದಿದೆ, ಆಗ ಅವರು ಉತ್ತರದಲ್ಲಿ ಹೇಳಿದರು, ಇದು ಮರವು ಖುರ್‌ಆನ್, ದೈವವಾಕ್ಯವಾಗಿದೆ ಮತ್ತು ಈ ಸಸ್ಯವು ಹದೀಸ್ ಮತ್ತು ಹೇಳಿಕೆಗಳು, ಇತ್ಯಾದಿಗಳಾಗಿವೆ ಇವು ಪವಿತ್ರ ಖುರ್‌ಆನ್‌ನ ವಿರುದ್ಧವೆಂದು ಪರಿಗಣಿಸಲಾಗಿದೆ ಮತ್ತು ಅದರ ಸಮೃದ್ಧಿಯು ಈ ಮರವನ್ನು ಹತ್ತಿಕ್ಕಿದೆ ಮತ್ತು ಹಾನಿಯನ್ನುಂಟುಮಾಡುತ್ತಿದೆ. ಆಗ ನನ್ನ ಕಣ್ಣುಗಳು ತೆರೆದವು. (ರಿವೀವ್, ಮುಬಾಹಿಸಾ ಬಟಾಲ್ವಿ ವ ಚಕ್ಡಾಲ್ವಿ, ರೂಹಾನಿ ಖಝಾಇನ್, ಸಂಪುಟ–19, ಪುಟ–212 ಅಡಿಟಿಪ್ಪಣಿ)

ಬಾಗ್ ಮುರ್ಝ್ಝಾಯಾ ಹುವಾ ಥ್ಹಾ ಗಿರ್ ಗಯೇ ಸಬ್ ಸಮರ್
ಮೈಂ ಖುದಾ ಕಾ ಫಝ್ಲ್ ಲಾಯಾ ಫ್ಹಿರ್ ಹುವೇ ಪೈದಾ ಸಮರ್

(ಅಂದರೆ: ತೋಟ ಒಣಗಿತ್ತು, ಹಣ್ಣುಗಳೆಲ್ಲ ಉದುರಿದ್ದವು, ನಾನು ದೇವರ ಅನುಗ್ರಹಗಳನ್ನು ತಂದು ನಂತರ ಫಲ ಹುಟ್ಟಿದೆ.)

ಕೇಳುಗರೇ! ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ **ಯಾ ಯಹ್‌ಯಾ ಖುಝಿಲ್ ಕಿತಾಬ ಬಿಖುವ್ವತಿನ್ ವಲ್‌ಖೈರು ಕುಲ್ಲುಹೂ ಫಿಲ್ ಖುರ್‌ಆನ್** ಎಂಬ ದೈವವಾಣಿ ಅವತರಿಸಿತು. ಮುಂದರೆ ಅವರು ಹೇಳಿದರು: ಇದರಲ್ಲಿ ನಮ್ಮನ್ನು ಹಝ್ರತ್ ಯಾಹ್ಯಾಗೆ ಹೋಲಿಸಲಾಗಿದೆ ಏಕೆಂದರೆ ಹಝ್ರತ್ ಯಾಹ್ಯಾ(ಅ) ಅವರು ಯಹೂದಿಗಳ ಈ ಸಮುದಾಯಗಳೊಂದಿಗೆ ಹೋರಾಡಬೇಕಾಯಿತು. ಅವರು ತೌರಾತ್ ಅನ್ನು ತ್ಯಜಿಸಿದ್ದರು ಮತ್ತು ಹದೀಸ್‌ಗಳನ್ನು ಬಹಳ ಆದ್ಯತೆ ನೀಡುತ್ತಿದ್ದರು ಮತ್ತು ಪ್ರತೊಂದು ವಿಷಯದಲ್ಲು ಹದೀಸ್‌ಗಳನ್ನು ಪ್ರಸ್ತುತಪಡಿಸುತ್ತಿದ್ದರು. ಅದೇ ರೀತಿಯಲ್ಲಿ, ಈ ಯುಗದಲ್ಲಿ, ನಾವು ಎಷ್ಟೆ ಹದೀಸ್‌ನವರಿಗೆ ಎದುರಿಸಿದೆವು ನಾವು ಪವಿತ್ರ ಖುರ್‌ಆನ್ ಅನ್ನು ಪ್ರಸ್ತುತಪಡಿಸಿದರೆ ಎದುರಿನಿಂದ ಅವರು ಹದೀಸ್‌ಗಳನ್ನು ಪ್ರಸ್ತುತಪಡಿಸುತ್ತಿದ್ದರು. (ಮಲ್‌ಫೂಝಾತ್, ಸಂಪುಟ–2, ಪುಟ–203)

ಅದೇ ರೀತಿ ಅವರು(ಅ) ನುಡಿಯುತ್ತಾರೆ: ಈಗ ದೇವರು ಪವಿತ್ರ ಖುರ್‌ಆನ್‌ನ ನಿಜವಾದ ಅರ್ಥವನ್ನು ಬಹಿರಂಗಪಡಿಸಲು ಉದ್ದೇಶಿಸಿದ್ದಾನೆ. ಇದಕ್ಕಾಗಿ ದೇವರು ನನ್ನನ್ನು ನೇಮಿಸಿದ್ದಾನೆ ಮತ್ತು ಅವನ ಇಲ್‌ಹಾಮ್ ಮತ್ತು ವಹಿಯಿಂದ ನಾನು ಪವಿತ್ರ ಖುರ್‌ಆನ್ ಅನ್ನು ಅರ್ಥಮಾಡಿಕೊಂಡಿದ್ದೇನೆ. (ಮಲ್‌ಫೂಝಾತ್, ಸಂಪುಟ–3, ಪುಟ–450)

ಅದೇ ರೀತಿ ಅವರು ಹೇಳುತ್ತಾರೆ:

ನನ್ನ ಸ್ಥಾನ ಸಾಮಾನ್ಯ ಮೌಲವಿಗಳದ್ದಲ್ಲ, ಬದಲಿಗೆ ನನ್ನ ಸ್ಥಾನವು ಪ್ರವಾದಿಗಳ ಸುನ್ನತ್ ಆಗಿದೆ. ನನ್ನನ್ನು ಸ್ವರ್ಗದ ಮನುಷ್ಯನಂತೆ ಪರಿಗಣಿಸಿ. ಆಗ ಮುಸ್ಲಿಮರ ನಡುವಿನ ಎಲ್ಲಾ ವಿವಾದಗಳು ಮತ್ತು ಕಲಹಗಳನ್ನು ಒಂದೇ ಬಾರಿಗೆ ಪರಿಹರಿಸಬಹುದು. ದೇವರು ನಿಯೋಜಿಸಿರುವ ಹಕಮ್ (ಆಡಳಿತಗಾರ) ಆಗಿ ಆಗಮಿಸಿರುವನು. ಆತನು ನೀಡುವ ಪವಿತ್ರ ಖುರ್‌ಆನ್‌ನ ಅರ್ಥವು ಸರಿಯಾಗಿರುತ್ತದೆ ಮತ್ತು ಅವರು ಸರಿ ಎಂದು ಘೋಷಿಸುವ ಹದೀಸ್ ಸರಿಯಾದ ಹದೀಸ್ ಆಗಿರುತ್ತದೆ. (ಮಲ್‌ಫೂಝಾತ್, ಸಂಪುಟ–1, ಪುಟ–399)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ತಮ್ಮ ಜಮಾಅತ್ತಿಗೆ ಸಲಹೆ ನೀಡುತ್ತಾ ಹೇಳಿದರು:

"ನೀವು ಪವಿತ್ರ ಖುರ್‌ಆನನ್ನು ಪರಿತ್ಯಜಿಸಲಾದ ವಸ್ತುವಿನ ಹಾಗೆ ಬಿಟ್ಟು ಬಿಡಬೇಡಿರಿ. ಅದರಲ್ಲಿಯೇ ನಿಮ್ಮ ಜೀವಿತವು ಅಡಕವಾಗಿದೆ. ಪವಿತ್ರ ಖುರ್‌ಆನಿಗೆ ಗೌರವ ನೀಡುವವರು ಆಕಾಶದಲ್ಲಿ ಗೌರವಿಸಲ್ಪಡುವರು. ಯಾರು ಪ್ರತಿಯೊಂದು ಹದೀಸ್ ಮತ್ತು ಪ್ರತಿಯೊಂದು ಮಾತಿನ ಮೇಲೆ ಪವಿತ್ರ ಖುರ್‌ಆನಿಗೆ ಅಗ್ರಸ್ಥಾನ ನೀಡುತ್ತಾರೋ ಅವರಿಗೆ ಆಕಾಶದಲ್ಲಿ ಅಗ್ರಸ್ಥಾನ ದೊರಕುವುದು. ಮಾನವರಿಗೆ ಭೂಲೋಕದಲ್ಲಿ ಪವಿತ್ರ ಖುರ್‌ಆನಿನ ಹೊರತು ಈಗ ಬೇರೆ ಗ್ರಂಥವಿಲ್ಲ, ಎಲ್ಲಾ ಆದಮ್ ಸಂತತಿಗಳಿಗೆ ಈಗ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಂ ರ ಹೊರತು ಅನ್ಯ ಸಂದೇಶ ವಾಹಕನಾಗಲಿ ಶಿಫಾರಸು ಗಾರನಾಗಲೀ ಇಲ್ಲ. ನೀವು ಸತ್ಯವಾದ ಪ್ರೀತಿಯನ್ನು ಈ ವೈಭವಶಾಲಿಯೂ ಪ್ರತಾಪಶಾಲಿಯೂ ಆಗಿರುವ ಪ್ರವಾದಿಯೊಂದಿಗೆ ಇರಿಸಲು ಪ್ರಯತ್ನಿಸಿರಿ ಅನ್ಯರಿಗೆ ಅವರ ಮೇಲೆ ಯಾವುದೇ ಶ್ರೇಷ್ಠತೆ ನೀಡಬೇಡಿರಿ ಆಗ ನೀವು ಆಕಾಶದಲ್ಲಿ ಮೋಕ್ಷಗಳಿಸಿದವರೆಂದು ಬರೆಯಲ್ಪಡುವಿರಿ ನೀವು ನೆನಪಿಡಿರಿ. (ಕಶ್ತಿ ಎ ನೂಹ್, ರೂಹಾನಿ ಖಝಾಇನ್, ಸಂಪುಟ–19, ಪುಟ–13)

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಹೇಳುತ್ತಾರೆ:

"ಈಗ ಎಲ್ಲಾ ಪುಸ್ತಕಗಳನ್ನು ಬಿಟ್ಟು ಅಲ್ಲಾಹನ ಪುಸ್ತಕವನ್ನು ಮಾತ್ರ ಹಗಲು ರಾತ್ರಿ ಓದಿರಿ. ಪವಿತ್ರ ಖುರ್‌ಆನ್‌ಗೆ ಗಮನ ಕೊಡದ ಮತ್ತು ಹಗಲು ರಾತ್ರಿ ಇತರ ಪುಸ್ತಕಗಳ ಮೇಲೆ ಒಲವು ತೋರುವವನು ಮಹಾನ್ ನಂಬಿಕೆಯಿಲ್ಲದವನಾಗಿದ್ದಾನೆ. ನಮ್ಮ ಜಮಾಅತ್‌ನವರು ಪವಿತ್ರ ಖುರ್‌ಆನ್‌ನ ಅನ್ವೇಷಣೆ ಮತ್ತು ಧ್ಯಾನಕ್ಕೆ ಪೂರ್ಣ ಹೃದಯದಿಂದ ತಮ್ಮನ್ನು ತೊಡಗಿಸಿಕೊಳ್ಳಬೇಕು ಮತ್ತು ಹದೀಸ್‌ಗಳ ಅನ್ವೇಷಣೆಯನ್ನು ತ್ಯಜಿಸಬೇಕು. ಹದೀಸ್‌ಗಳಿಗೆ ನೀಡುವ ಗಮನ ಮತ್ತು ಮಾರ್ಗದರ್ಶನವನ್ನು ಪವಿತ್ರ ಖುರ್‌ಆನ್‌ಗೆ ನೀಡದಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ. ಈ ಸಮಯದಲ್ಲಿ, ನೀವು ಪವಿತ್ರ ಖುರ್‌ಆನ್ ತಂತ್ರವನ್ನು ಕೈಯಲ್ಲಿ ತೆಗೆದುಕೊಂಡರೆ, ಅದು ನಿಮ್ಮ ವಿಜಯವಾಗಿದೆ. ಈ ಬೆಳಕಿನ ಮುಂದೆ ಯಾವ ಕತ್ತಲೆಯೂ ನಿಲ್ಲಲಾರದು. (ಮಲ್‌ಫೂಝಾತ್, ಸಂಪುಟ–1, ಪುಟ–386)

ಆತ್ಮೀಯ ಕೇಳುಗರೇ! ಪವಿತ್ರ ಖುರ್‌ಆನ್‌ನ ಘನತೆಯನ್ನು ಕಡಿಮೆಯಾಗಲಿಕ್ಕೆ ಕಾರಣವಾದ ಪ್ರಮುಖ ಸಮಸ್ಯೆಯೆಂದರೆ ಜಿಹಾದ್‌ನ ತಪ್ಪು ದೃಷ್ಟಿಕೋನವಾಗಿದೆ, ಧರ್ಮೇತರರನ್ನು ಬಲವಂತದ ಮೂಲಕ ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸ ಬಹುದು ಮತ್ತು ಜಿಹಾದ್ ಎಂದರೆ ಖಡ್ಗದ ಜಿಹಾದ್

ಮಾತ್ರ ಆಗಿದೆ. ಮುಸ್ಲಿಮರಲ್ಲಿ ರಕ್ತಸಿಕ್ತ ಮಹದಿಯ ಪರಿಕಲ್ಪನೆಯ ಕಂಡುಬಂದಿದೆ, ಅವರು(ಅ) ಪವಿತ್ರ ಖುರ್‌ಆನ್‌ನಿಂದ ಜಿಹಾದ್‌ನ ಸರಿಯಾದ ವ್ಯಾಖ್ಯಾನವನ್ನು ವಿವರಿಸಿದರು ಮತ್ತು ನಿಜವಾದ ಜಿಹಾದ್ ಸ್ವಯಂ ಜಿಹಾದ್ ಆಗಿದೆ ಮತ್ತು ಅವರು(ಅ) ಪವಿತ್ರ ಖುರ್‌ಆನ್‌ನ ಬೋಧನೆಗಳ ಪ್ರಕಟಣೆ ಮತ್ತು ಪ್ರಚಾರವನ್ನು ಮಹಾನ್ ಜಿಹಾದ್ ಎಂದು ವ್ಯಾಖ್ಯಾನಿಸಿದರು.

ಅದೇ ರೀತಿ ಅವರು(ಅ) ಪವಿತ್ರ ಖುರ್‌ಆನ್‌ನ 30 ಆಯತ್‌ಗಳಿಂದ ಕ್ರಿಸ್ತನ ಜೀವನದ ನಂಬಿಕೆಯನ್ನು ತಿರಸ್ಕರಿಸಿ ಇಸ್ಲಾಮಿಗೆ ಹೊಸ ಜೀವನವನ್ನು ನೀಡಿದರು ಮತ್ತು ಪವಿತ್ರ ಖುರ್‌ಆನ್‌ನ ಹಿರಿಮೆಯನ್ನು ಇಮ್ಮಡಿಗೊಳಿಸಿದರು.

ಕೇಳುಗರೇ! ಪವಿತ್ರ ಖುರ್‌ಆನ್‌ನಲ್ಲಿ, ಸರ್ವಶಕ್ತನಾದ ಅಲ್ಲಾಹನು ಉತ್ತಮ ಅಮುದಾಯಕ್ಕೆ (ಖೈರೆ ಉಮ್ಮತ್) ಎಲ್ಲಾ ಆಧ್ಯಾತ್ಮಿಕ ಪ್ರತಿಫಲಗಳ ಬಗ್ಗೆ ಒಳ್ಳೆಯ ಸುದ್ದಿಯನ್ನು ನೀಡಿದ್ದಾರೆ, ಆದರೆ ಸಂಕುಚಿತ ಮನಸ್ಸುಳ್ಳ ಮುಸ್ಲಿಮರು ಆಯತ್ ಖಾತಮನ್ನಬೀಯೀನ್ ಅನ್ನು ಅನುಚಿತವಾಗಿ ಅರ್ಥೈಸಿಕೊಂಡು ಎಲ್ಲಾ ರೀತಿಯ ಪ್ರವಾದಿತ್ವದ ಬಾಗಿಲನ್ನು ಮುಚ್ಚಲ್ಪಟ್ಟಿದೆ ಎಂದು ಪರಿಗಣಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಆಯತ್ ಖಾತಮನ್ನಬೀಯೀನ್‌ನ ನೈಜ ತಿಳುವಳಿಕೆಯನ್ನು ನೀಡುತ್ತಾ ಹೇಳಿದರು: ಖಾತಮ್ ಎಂದರೆ 'ಮುದ್ರೆ' ಆಗಿದೆ. ಮತ್ತು ಹಝ್ರತ್ ಪೈಗಂಬರ್(ಸ) ಪರಿಪೂರ್ಣತೆಗಾಗಿ ಮುದ್ರೆಯನ್ನು ನೀಡಲಾಯಿತು, ಈಗ ಮುಹಮ್ಮದಿ ಮುದ್ರೆಯನ್ನು ತನ್ನೊಂದಿಗೆ ಕೊಂಡೊಯ್ಯುವವರಿಗೆ ಮಾತ್ರ ಪ್ರವಾದಿತ್ವದ ಬಹುಮಾನವನ್ನು ನೀಡಲಾಗುತ್ತದೆ. ದಾಮನ್ ಮುಸ್ತಫಾ ಅವರೊಂದಿಗೆ ಸಂಬಂಧ ಹೊಂದಿರುವವರಿಗೆ ಮಾತ್ರ. ಅವರು(ಅ) ಹೇಳಿದರು:

ಮನುಷ್ಯನು ಬಾಹ್ಯವೂ ಆಂತರಿಕವೂ ಆಗಿ ಅದರಿಂದ ವಿಮುಖನಾಗುವುದಿಲ್ಲವಾದರೆ ಒಂದು ವಾರದೊಳಗೆ ಪವಿತ್ರ ಖುರ್‌ಆನ್ ಅವನನ್ನು ಪರಿಶುದ್ಧನನ್ನಾಗಿ ಮಾಡುವುದು. ನೀವು ಸ್ವತಃ ಅದರಿಂದ ಓಡಿಹೋಗುವುದಿಲ್ಲವಾದರೆ ಅದು ನಿಮ್ಮನ್ನು ಪ್ರವಾದಿಗಳ ಹಾಗೆ ಮಾಡಲು ಸಾಧ್ಯವಿದೆ. ಪವಿತ್ರ ಖುರ್‌ಆನ್ ಹೊರತು ಬೇರೆ ಯಾವ ಗ್ರಂಥವು ತನ್ನ ಪ್ರಾರಂಭದಲ್ಲಿ ಈ ಕೆಳಗಿನ ಪ್ರಾರ್ಥನೆಯನ್ನು ಕಲಿಸಿದೆ? **ಇಹ್‌ದಿನಸ್ಸಿರಾತಲ್ ಮುಸ್ತಖೀಮ್ ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಮ್** ನೀನು ನಮಗಿಂತ ಹಿಂದಿನವರಿಗೆ ತೋರಿಸಿಕೊಟ್ಟ ಅನುಗ್ರಹದ ಮಾರ್ಗಗಳನ್ನು ನಮಗೆ ಸಹ ತೋರಿಸಿಕೊಡು. ಎಂದರೆ ನಬಿ, ರಸೂಲ್, ಸಿದ್ದೀಖ್ ಶಹೀದ್ ಮತ್ತು ಸಾಲಿಹ್‌ಗಳಿಗೆ ತೋರಿಸಿಕೊಟ್ಟ ಮಾರ್ಗ ಆದುದರಿಂದ ನಿಮ್ಮ ಧೈರ್ಯವನ್ನು ಉನ್ನತಗೊಳಿಸಿರಿ. ಪವಿತ್ರ ಖುರ್‌ಆನಿನ ಆಹ್ವಾನವನ್ನು ತಿರಸ್ಕರಿಸಬೇಡಿರಿ. ಹಿಂದಿನ ಕಾಲದವರಿಗೆ ನೀಡಲಾದ ಅನುಗ್ರಹಗಳನ್ನು ನಿಮಗೆ ನೀಡಲು ಅಲ್ಲಾಹನು ಬಯಸುತ್ತಾನೆ." (ಕಿಶ್ತಿ ಎ ನೂಹ್, ರೂಹಾನಿ ಖಝಾಈನ್, ಸಂಪುಟ–19, ಪುಟ–27)

ಕೇಳುಗರೇ! ಪವಿತ್ರ ಖುರ್‌ಆನ್‌ನ ಹಿರಿಮೆಯನ್ನು ಸ್ಥಾಪಿಸಲು ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಗೌರವದ ಸಂಕೇತವಾಗಿ ಪವಿತ್ರ ಖುರ್‌ಆನ್‌ನ ವ್ಯಾಖ್ಯಾನವನ್ನು ನೀಡಿದನು. ನಿಮ್ಮ ಎಲ್ಲಾ ಪುಸ್ತಕಗಳು ಪವಿತ್ರ ಖುರ್‌ಆನ್‌ನ ವ್ಯಾಖ್ಯಾನದ ಮೇರುಕೃತಿಗಳಾಗಿವೆ, ಆದರೆ ನೀವು ಅದ್ಭುತವಾಗಿ ಕೇವಲ ಪವಿತ್ರ ಖುರ್‌ಆನ್‌ನ ವ್ಯಾಖ್ಯಾನಕ್ಕಾಗಿ ಖುರ್‌ಆನ್‌ನ ಅರೇಬಿಕ್ ಭಾಷೆಯಲ್ಲಿ ಕೆಲವು ಪುಸ್ತಕಗಳನ್ನು ರಚಿಸಿದರು ಮತ್ತು ವಿರೋಧಿಗಳನ್ನು ಅದರ ವಿರುದ್ಧ ತಫ್ಸೀರ್ ಬರೆಯಲು ಚ್ಯಾಲೆಂಜ್ ನೀಡಿದರು, ಆದರೆ ಅವರ ವಿರುದ್ಧ ಸ್ಪರ್ಧಿಸುವ ಧೈರ್ಯ ಯಾರಿಗೂ ಇರಲಿಲ್ಲ. ಪೀರ್ ಮೆಹರ್ ಅಲಿ ಶಾ ಗೋಲ್ಡವಿ ಅವರಿಗೆ ವ್ಯಾಖ್ಯಾನ ಬರೆಯುವ ಚ್ಯಾಲೆಂಜ್ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು 'ಎಜಾಝುಲ್ ಮಸೀಹ್' ಎಂಬ ಹೆಸರಿನಲ್ಲಿ ಅರೇಬಿಕ್ ಭಾಷೆಯಲ್ಲಿ ಸೂರಾ ಫಾತಿಹಾದ ಮೇಲೆ ನಿರರ್ಗಳ ಮತ್ತು ನಿರರ್ಗಳ ವ್ಯಾಖ್ಯಾನವನ್ನು ಪ್ರಕಟಿಸಿದರು. ಈ ಪುಸ್ತಕದ ಬಗ್ಗೆ ನಿಮಗೆ ಇಲ್‌ಹಾಮ್ ಲಭಿಸಿತು: ಅದೇನೆಂದರೆ

**ಮನ್‌ಖಾಮ ಲಿಲ್‌ಜವಾಬಿ ವತನಮ್ಮರ**

**ಫಸೌಫ ಯರಾ ಅನ್ನಹು ತನದ್ದಮ ವತಝಮ್ಮರ**

ಅದೇನೆಂದರೆ, ಈ ಪುಸ್ತಕಕ್ಕೆ ಸಿಟ್ಟು ತುಂಬಿಕೊಂಡು ಉತ್ತರ ಬರೆಯಲು ತಯಾರಾಗುವವನು ಲಜ್ಜಿತನಾಗಿ ಮತ್ತು ದುರಾಸೆಯಿಂದ ಕೊನೆಗೊಳ್ಳುವುದಾಗಿ ಬಹುಬೇಗ ಕಂಡುಕೊಳ್ಳುತ್ತಾನೆ. ದೈವವಾಣಿಯ ಪ್ರಕಾರ ಪೀರ್ ಮೆಹರ್ ಅಲೀ ಶಾ ಅವರಿಗೆ ಈ ವ್ಯಾಖ್ಯಾನದ ವಿರುದ್ಧ ಒಂದು ಪದವನ್ನು ಬರೆಯಲು ಧೈರ್ಯವಾಗಲಿಲ್ಲ. ಅಂತಿಮವಾಗಿ ಪಶ್ಚಾತ್ತಾಪದಿಂದ ಸೋಲನ್ನು ಎದುರಿಸಬೇಕಾಯಿತು. ಈ ಪುಸ್ತಕದ ವಾಕ್ಚಾತುರ್ಯವನ್ನು ಅರಬ್ ದೇಶಗಳ ಪತ್ರಿಕೆಗಳು ಒಪ್ಪಿಕೊಂಡಿವೆ. ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ: "ಪವಿತ್ರ ಖುರ್‌ಆನಿನ ಅದ್ಭುತ ದೃಷ್ಟಾಂತದ ಪ್ರತಿರೂಪ ಎಂಬ ನೆಲೆಯಲ್ಲಿ ನನಗೆ ಅರಬಿ ಭಾಷೆಯ ಜಾಣ್ಮೆ ಮತ್ತು ಸಾಹಿತ್ಯ ಚಮತ್ಕಾರದ ದೃಷ್ಟಾಂತ ನೀಡಲ್ಪಟ್ಟಿದೆ. ಈ ವಿಷಯದಲ್ಲಿ ನನ್ನೊಂದಿಗೆ ಸ್ಪರ್ಧಿಸಲು ಯಾರಿಂದಲೂ ಸಾಧ್ಯವಿಲ್ಲ." (ಝುರೂರತುಲ್ ಇಮಾಮ್, ರೂಹಾನಿ ಖಝಾಈನ್, ಸಂಪುಟ–13,, ಪುಟ–496)

ಅದೇ ರೀತಿ ಅವರು ಹೇಳಿದರು, "ನನ್ನ ವಿರೋಧಿಗಳು ಸಹ ಒಂದು ಸೂರತ್‌ನ ವ್ಯಾಖ್ಯಾನವನ್ನು ಬರೆಯಬೇಕೆಂದು ನಾನು ಅನೇಕ ಬಾರಿ ಹೇಳಿದ್ದೇನೆ ತದನಂತರ ಅದನ್ನು ಸ್ಪರ್ಧಿಸಬೇಕು, ಆದರೆ ಯಾರೂ ಧೈರ್ಯ ಮಾಡಲಿಲ್ಲ. ಮುಹಮ್ಮದ್ ಹುಸೇನ್ ಮತ್ತಿತರರು ತಮಗೆ ಅರೇಬಿಕ್ ಭಾಷೆ ಅರ್ಥವಾಗುವುದಿಲ್ಲ ಮತ್ತು ಅವರಿಗೆ ಪುಸ್ತಕಗಳನ್ನು ನೀಡಿದಾಗ ಅರೇಬಿಕ್ ಎಂದು ಬೈಯ್ದು ತಪ್ಪಿಸಿದರು. ಆದರೆ ಅವರು ಒಂದೇ ಒಂದು ಪುಟವನ್ನಾದರು ಬರೆದು ಇದು ಅರೇಬಿಕ್ ಭಾಷೆಯಾಗಿದೆ ಎಂದು ತೋರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ, ಇದು ನನ್ನ ಸತ್ಯಾಸತ್ಯತೆಗೆ ವಿಶೇಷವಾಗಿ ಪಡೆದ ಚಿಹ್ನೆಗಳಾಗಿವೆ." (ಮಲ್‌ಫೂಝಾತ್, ಸಂಪುಟ–1, ಪುಟ–183)

ಆತ್ಮೀಯ ಕೇಳುಗರೇ, ಪ್ರಾಚೀನ ಕಾಲದ ವ್ಯಾಖ್ಯಾನಕಾರರು ಪವಿತ್ರ ಖುರ್‌ಆನ್‌ನಲ್ಲಿ ದಾಖಲಾಗಿರುವ ಪ್ರವಾದಿಗಳು ಮತ್ತು ಸಮುದಾಯಗಳ ಘಟನೆಗಳನ್ನು ಕೇವಲ ಉಪಾಖ್ಯಾನಗಳಾಗಿ ವಿವರಿಸುತ್ತಿದ್ದರು ಮತ್ತು ಪ್ರವಾದಿಗಳಿಗೆ ಮಾನಹಾನಿಯಾಗುವ ರೀತಿಯಲ್ಲಿ ಕೆಲವು ಆಯತ್‌ಗಳನ್ನು ವಿವರಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪವಿತ್ರ ಖುರ್‌ಆನ್‌ನಲ್ಲಿನ ಪ್ರವಾದಿಗಳ ಕಥೆಗಳಿಗೆ ಜ್ಞಾನ, ತತ್ವಶಾಸ್ತ್ರ ಮತ್ತು ಭವಿಷ್ಯವಾಣಿಯ ಬಣ್ಣವನ್ನು ನೀಡುವ ಮೂಲಕ ಪವಿತ್ರ ಖುರ್‌ಆನ್‌ನ ಶ್ರೇಷ್ಠತೆ ಮತ್ತು ಜ್ಞಾನವನ್ನು ಬಹಿರಂಗಪಡಿಸಿದರು ಮತ್ತು ಪ್ರವಾದಿಗಳ ದೋಷರಹಿತತೆಯನ್ನು ಸ್ಥಾಪಿಸಿದರು. ಅವರು(ಅ) ಹೇಳಿದರು:

"ಪವಿತ್ರ ಖುರ್‌ಆನ್‌ನಲ್ಲಿ ಎಷ್ಟು ಕಥೆಗಳಿವೆಯೊ, ಅವು ನಿಜವಾಗಿ ಕಥೆಗಳಲ್ಲ ಬದಲಿಗೆ ಕಥೆಗಳ ಬಣ್ಣದಲ್ಲಿ ಬರೆಯಲಾದ ಭವಿಷ್ಯವಾಣಿಗಳಾಗಿವೆ. ಹೌದು, ಅವು ತೌರಾತ್‌ನಲ್ಲಿರುವ ಕಥೆಗಳು ಖಂಡಿತವಾಗಿಯೂ ಕಥೆಗಳು ಮಾತ್ರ ಆಗಿವೆ, ಆದರೆ ಪವಿತ್ರ ಖುರ್‌ಆನ್ ಪ್ರತಿಯೊಂದು ಕಥೆಯನ್ನು ಹಝ್ರತ್ ಪೈಗಂಬರ್(ಸ) ಅವರಿಗಾಗಿ ಹಾಗೂ ಇಸ್ಲಾಮ್ ಧರ್ಮಕ್ಕಾಗಿ ಸಾಂಕೇತಿಕವಾಗಿ ಮಾಡಿದೆ, ಇದನ್ನು ಭವಿಷ್ಯವಾಣಿಯಂತೆ ಘೋಷಿಸಲಾಗಿದೆ ಮತ್ತು ಈ ಕಥೆಗಳ ಭವಿಷ್ಯವಾಣಿಗಳು ಸಹ ಸಂಪೂರ್ಣವಾಗಿ ನೆರವೇರಿವೆ." (ಚಶ್ಮ ಎ ಮಾರಿಫತ್, ರೂಹಾನಿ ಖಝಾಈನ್, ಸಂಪುಟ–23, ಪುಟ–271)

ಅವರು(ಅ) ಹೇಳಿದರು: "ಪವಿತ್ರ ಖುರ್‌ಆನ್ ತನ್ನ ಎಲ್ಲಾ ಬೋಧನೆಗಳನ್ನು ವಿಜ್ಞಾನ ಮತ್ತು ತತ್ವಶಾಸ್ತ್ರದ ರೂಪದಲ್ಲಿ ಪ್ರಸ್ತುತಪಡಿಸುತ್ತದೆ...

ಆತ್ಮೀಯ ಕೇಳುಗರೇ! ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ಪವಿತ್ರ ಖುರ್‌ಆನ್‌ನಲ್ಲಿರುವ ಒಂದು ದೊಡ್ಡ ವೈಜ್ಞಾನಿಕ ಪವಾಡವನ್ನು ಬಹಿರಂಗಪಡಿಸಿದರು, ಅದು ಖುರ್‌ಆನ್‌ನ ಮಹಿಮೆಯನ್ನು ದ್ವಿಗುಣಗೊಳಿಸುತ್ತದೆ, ಭೌತಿಕ ಮತ್ತು ಆಧ್ಯಾತ್ಮಿಕತೆಯ ಆರು ಹಂತಗಳನ್ನು ಬಹಿರಂಗಪಡಿಸುತ್ತಾ ಹೀಗೆ ಹೇಳಿದರು:

"ಪ್ರಪಂಚದಲ್ಲಿ ಸ್ವರ್ಗೀಯ ಪುಸ್ತಕಗಳು ಎಂದು ಕರೆಯಲ್ಪಡುವ ಎಷ್ಟು ಪುಸ್ತಕಗಳಿವೆಯೊ ಅಥವಾ ಋಷಿಗಳು ಆತ್ಮ ಮತ್ತು ಧರ್ಮಶಾಸ್ತ್ರದ ಬಗ್ಗೆ ಬರೆದಿರುವ ಬರಹಗಳಿವೆ ಅಥವಾ ಸೂಫಿಗಳ ಶೈಲಿಯಲ್ಲಿ ದೈವಜ್ಞಾನದ ಬಗ್ಗೆ ಬರೆದಿರುವ ಬೋಧನೆಗಳಿವೆ, ಅವುಗಳಲ್ಲಿ ಯಾರ ಮನಸ್ಸು ಈ ಸ್ಪರ್ಧೆಯ ಭೌತಿಕ ಮತ್ತು ಆಧ್ಯಾತ್ಮಿಕ ಅಸ್ತಿತ್ವವನ್ನು ತೋರಿಸುತ್ತದೆ ಎಂಬುದನ್ನು ಮೀರಿಸಲು ಸಾಧ್ಯವಿಲ್ಲ. ಯಾರಾದರೂ ನನ್ನ ಈ ವಾದವನ್ನು ನಿರಾಕರಿಸಿದರೆ ಮತ್ತು ಆಧ್ಯಾತ್ಮಿಕ ಮತ್ತು ಭೌತಿಕ ನಡುವಿನ ಈ ಸ್ಪರ್ಧೆಯನ್ನು ಬೇರೆಯವರು ತೋರಿಸಿದ್ದಾರೆ ಎಂದು ಭಾವಿಸಿದರೆ, ಈ ವೈಜ್ಞಾನಿಕ ಪವಾಡದ ಉದಾಹರಣೆಯನ್ನು ಬೇರೆ ಪುಸ್ತಕದಿಂದ ತೋರಿಸುವುದು ಅವರಿಗೆ ಕಡ್ಡಾಯವಾಗಿದೆ. ಮತ್ತು ನಾನು ತೌರಾತ್, ಇನ್‌ಜೀಲ್ ಹಾಗೂ ಹಿಂದುಗಳ ವೇದಗಳನ್ನು ನೋಡಿದ್ದೇನೆ. ಆದರೆ ನಾನು ಪವಿತ್ರ ಖುರ್‌ಆನ್ ಹೊರತುಪಡಿಸಿ ಯಾವುದೇ ಪುಸ್ತಕದಲ್ಲಿ ಈ ರೀತಿಯ ವೈಜ್ಞಾನಿಕ ಪವಾಡವನ್ನು ಕಂಡುಕೊಂಡಿಲ್ಲ ಎಂದು ನಾನು ನಿಜವಾಗಿ ಹೇಳುತ್ತೇನೆ. (ತಫ್ಸೀರ್ ಹಝ್ರತ್ ಮಸೀಹ್ ಮೌಊದ್(ಅ), ಸಂಪುಟ–6)

ಗೌರವಾನ್ವಿತ ಕೇಳುಗರೇ! ಅಂತಿಮವಾಗಿ, ನಾನು ನನ್ನ ಭಾಷಣವನ್ನು ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಾಲ ಬಿನಸ್ರಿಹಿಲ್ ಅಝೀಝ್ ಅವರ ಉಲ್ಲೇಖದೊಂದಿಗೆ ಕೊನೆಗೊಳಿಸುತ್ತೇನೆ.

ಹುಝೂರ್ ಅನ್ವರ್(ಅತಬಿಅ) ಹೇಳುತ್ತಾರೆ: ಈ ಮಹಾನ್ ದೈವಿಕ ಗ್ರಂಥವಾದ ಈ ಪವಿತ್ರ ಖುರ್‌ಆನ್‌ನ ಪಠಣದ ಹಕ್ಕನ್ನು ಪೂರೈಸುವುದು ಇಂದಿನ ಪ್ರತಿಯೊಬ್ಬ ಅಹ್ಮದಿಯ ಜವಾಬ್ದಾರಿಯಾಗಿದೆ. ಆದ್ದರಿಂದ ನಾವು, ಪ್ರತಿಯೊಬ್ಬರೂ ಪವಿತ್ರ ಖುರ್‌ಆನ್ ಅನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತಾರೆ, ಅದರ ಆಜ್ಞೆಗಳನ್ನು ಪಾಲಿಸುತ್ತಾರೆ ಮತ್ತು ಅನುಸರಿಸಲು ಪ್ರಯತ್ನಿಸುತ್ತಾರೆ ಎಂದು ಮೌಲ್ಯಮಾಪನ ಮಾಡಬೇಕು. ಪ್ರೀತಿಯನ್ನು ವ್ಯಕ್ತಪಡಿಸಲು ಮಾರ್ಗಗಳಿವೆ. ಪ್ರತಿಯೊಬ್ಬ ಅಹ್ಮದಿಯು ಮಾಡಬೇಕಾದ ಪ್ರಮುಖ

*(ಪುಟ ಸಂಖೆ 19ರಲ್ಲಿ ಮುಂದುವರಿಸಲಾಗಿದೆ)*

ಜಲ್ಸ ಸಾಲಾನ ಖಾದಿಯಾನ್ 2023ರ ಭಾಷಣ

# ದೈವಿಕ ಅನುಗ್ರಹಗಳ ಅವತರಣಿಕೆ ಮತ್ತು ಅಹ್ಮದಿಯಾ ಜಮಾಅತ್ತಿನ ಪ್ರಗತಿಗಳು

ಅತಾಉಲ್ ಮುಜೀಬ್ ಲೋನ್ ಸಾಹಿಬ್, ಪ್ರಾಂಶುಪಾಲರು ಜಾಮಿಯಾ ಅಹ್ಮದಿಯಾ ಖಾದಿಯಾನ್

ಸನ್ಮಾನ್ಯ ಸಭಾ ಅಧ್ಯಕ್ಷರೆ, ಮತ್ತು ಆದರಣೀಯ ಸಭಿಕರೆ, ನೀವು ಆಲಿಸಿದಂತೆ ನನ್ನ ಭಾಷಣದ ಶೀರ್ಷಿಕೆಯು "ದೈವಿಕ ಅನುಗ್ರಹಗಳ ಅವತರಣಿಕೆ ಮತ್ತು ಅಹ್ಮದಿಯಾ ಸಂಘಟನೆಯ ಪ್ರಗತಿಗಳು ಎಂದಾಗಿದೆ.

ಪವಿತ್ರ ಖುರ್‌ಆನ್ ವಿವರಿಸಿದ ತನ್ನ ಸಂದೇಶವಾಹಕರ ಮತ್ತು ಸತ್ಯವಿಶ್ವಾಸಿಗಳ ದೃಷ್ಟಾಂತಗಳಲ್ಲಿ ಒಂದು. ಭವ್ಯವಾದ ಹಾಗೂ ಉಜ್ವಲವಾದ ದೃಷ್ಟಾಂತವೂ ದೇವರ ಒಲವು ಮತ್ತು ಅವನ ಅನುಗ್ರಹವಾಗಿದೆ, ಅದು ನನಗೆ ಎಲ್ಲ ಕಡೆಯೂ ಎಲ್ಲಾ ಸ್ಥಳಗಳಲ್ಲಿಯೂ ಮತ್ತು ಎಲ್ಲಾ ಹಳ್ಳಿಗಳಲ್ಲಿಯೂ ಕಾಣಬಹುದಾಗಿದೆ. ಅಂದಹಾಗೆ ಅಲ್ಲಾಹನು ಹೇಳಿದನು. ಇನ್ನಾ ಲನನ್‌ಸುರು ರುಸುಲನಾ ವಲ್ಲಝೀನ ಆಮನೂ ಫಿಲ್ ಹಯಾತಿದ್ದುನಿಯಾ ವ ಯೌಮ ಯಖೂಮುಲ್ ಅಶ್‌ಹಾದು (ಮುಮಿನ್: 52) ಅನುವಾದ: ಖಂಡಿತವಾಗಿಯೂ ನಾವು ನಮ್ಮ ಸಂದೇಶವಾಹಕರಿಗೂ ಈ ಲೋಕದಲ್ಲೂ ಸಾಕ್ಷಿಗಳು ಎದ್ದು ನಿಲ್ಲುವ ದಿನದಂದು ಸಹಾಯ ಮಾಡುವೆವು. ಮತ್ತು ಹೇಳಿದನು. ವಲಖದ್ ಸಬಖತ್ ಕಲಿಮತುನಾ ಲಿಇಬಾದಿನಲ್ ಮುರ್ಸಲೀನ. ಇನ್ನಹುಮ್ ಲಹುಮುಲ್ ಮನ್‌ಸೂರೂನ್. ವ ಇನ್ನ ಜುನ್‌ದುನಾ ಲಹುಮುಲ್‌ಗ್ಹಾಲಿಬೂನ್ (ಅಸ್ಸಾಫ್ಫಾತ್: 172-174) ಅನುವಾದ: ನಮ್ಮ ಭಕ್ತದಾಸರಾದ ಸಂದೇಶವಾಹಕರ ಬಗ್ಗೆ ನಮ್ಮ ತೀರ್ಮಾನ ಮೊದಲೇ ವಿಧಿಸಲ್ಪಟ್ಟಿದೆ ಖಂಡಿತವಾಗಿಯೂ ಅವರಿಗೆ ನೆರವು ನೀಡಲಾಗುವುದು. ನಿಶ್ಚಯವಾಗಿಯೂ ನಮ್ಮ ಸೈನ್ಯವೇ ವಿಜಯಿಯಾಗುವುದು. ಅದೇ ರೀತಿ ಅಲ್ಲಾಹನು ನುಡಿಸನು: ಕತಬಲ್ಲಾಹು ಲಅಗ್ಲಿಬನ್ನ ಅನಾ ವ ರುಸುಲಿ ಇನ್ನಲ್ಲಾಹ ಖವಿಯ್ಯುನ್ ಅಝೀಝ್ (ಅಲ್‌ಮುಜಾದಲ:22) 'ನಾನೂ ನನ್ನ ಸಂದೇಶವಾಹಕರೂ ಖಂಡಿತವಾಗಿಯೂ ವಿಜಯಶಾಲಿಗಳಾಗುವೆವು' ಎಂದು ಅಲ್ಲಾಹನು (ವಿಧಿ) ಬರೆದಿರುವನು. ನಿಶ್ಚಯವಾಗಿಯೂ ಅಲ್ಲಾಹನು ಶಕ್ತಿಶಾಲಿಯೂ ಪ್ರತಾಪವಂತನೂ ಆಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ಆ ಶಕ್ತಿಶಾಲಿ, ಕರುಣಾಮಯಿಯಾದ ಅಲ್ಲಾಹನ ಮೇಲೆ ಆಣೆ ಮಾಡಿ ಹೇಳುತ್ತೇವೆ. ಅವನು ಸುಳ್ಳಿಗೆ ಶತ್ರುವಾಗಿದ್ದಾನೆ ಮತ್ತು ಸುಳ್ಳುಗಾರರನ್ನು ವಿನಾಶಗೊಳಿಸುವವನಾಗಿದ್ದಾನೆ. ನಾನು ಅವನ ಕಡೆಯಿಂದಲೇ ಬಂದವನಾಗಿದ್ದೇನೆ ಮತ್ತು ಅವನು ಕಳುಹಿಸಿದ ಸಮಯಕ್ಕೆ ಬಂದಿದ್ದೇನೆ ಮತ್ತು ಅವನ ಆಜ್ಞೆ ಪ್ರಕಾರ ನೆಲೆ ನಿಂತಿದ್ದೇನೆ. ನನ್ನ ಪ್ರತಿ ಹೆಜ್ಜೆಗೂ ಅವನು ನನ್ನ ಜೊತೆಗಿದ್ದಾನೆ, ಅವನು ನನ್ನನ್ನು ವ್ಯರ್ಥಗೊಳಿಸಲಾರನು. ತನ್ನ ಕಾರ್ಯ ಪೂರ್ಣಗೊಳಿಸುವವರೆಗೆ ನನ್ನ ಜಮಾಅತ್ತನ್ನು ನಾಶಪಡಿಸಲಾರನು. ಇದನ್ನು ಅವನು ನಿಶ್ಚಯಿಸಿಕೊಂಡಿದ್ದಾನೆ. (ಅರ್‌ಬಯೀನ್, ಭಾಗ 2, ರೂಹಾನಿ ಖಝಾಈನ್, ಸಂಪುಟ-17, ಪುಟ-348)

ನಂಬಿಕೆ, ವಿಶ್ವಾಸ ಮತ್ತು ವೈಭವದಿಂದ ತುಂಬಿರುವ ಈ ಮಂಗಳಕರ ಮಾತುಗಳು ಆ ಪವಿತ್ರ ವ್ಯಕ್ತಿಯಾಗಿದ್ದಾರೆ. ಅವರನ್ನು ಅಲ್ಲಾಹನು ಈ ಕಾಲಘಟ್ಟವು ಮಾನವ ಕುಲದ ಮಾರ್ಗದರ್ಶನಕ್ಕಾಗಿ ಕಳುಹಿಸಿದನು.

1882 ರ ಆರಂಭದಲ್ಲಿ ಅಲ್ಲಾಹನು ಅವರಿಗೆ ಈ ದಿವ್ಯವಾಣಿ ಅನುಗ್ರಹಿಸಿದನು. ಖುಲ್ ಇನ್ನಿ ಉಮಿರ್‌ತು ವ ಅನಾ ಅವ್ವಲುಲ್ ಮುಮಿನೀನ್ ಇದು ಅವರ ಮಾಮೂರಿಯತ್ ಮತ್ತು ಮುಜದ್ದಿದುಯತ್‌ಗೆ ಮೊದಲ ದಿವ್ಯವಾಣಿಯಾಗಿತ್ತು. ಅನಂತರ ಅಲ್ಲಾಹನು ಅವರಿಗೆ ಇಮಾಮ್ ಮಹದಿ ಮತ್ತು ಮುಹಮ್ಮದ್ (ಸ) ರ ಉಮ್ಮಾಗೆ ವಾಗ್ದಾನ ಮಾಡಿದ ವಾಗ್ದಾನವು ಈಡೇರಿದೆ ಎಂದರು. ಅದು ಅವರಿಗೆ ರಸೂಲುಲ್ಲಾಹ್ (ಸ) ರ ಪ್ರತಿನಿಧಿತ್ವ ರೂಪದಲ್ಲಿ ಇಮಾಮ್ ಮಹದಿ ಮತ್ತು ಮಸೀಹ್ ಸಾದೃಶ್ಯದ ಸ್ಥಾನ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಮಾಚ್ 23, 1889 ಇಸ್ಲಾಂ ಧರ್ಮದ ಇತಿಹಾಸದಲ್ಲಿ ಸುವರ್ಣ ಮತ್ತು ಮಂಗಳಕರ ದಿನವಾಗಿದ್ದು ವಾಗ್ದತ್ತ ಮಸೀಹರು(ಅ) 40 ವಿಶ್ವಾಸಿಗಳಿಂದ ನಿಷ್ಠೆಯ ಪ್ರಮಾಣ (ಬೈಅತ್) ಸ್ವೀಕರಿಸಿದರು. ಈ ರೀತಿಯಾಗಿ, ಆ ಪವಿತ್ರ ಸಂಘಟನೆ ಸ್ಥಾಪನೆಗೊಂಡಿತು. ಅದು ಈ ಕೊನೆಯ ಯುಗದಲ್ಲಿ ವಾಗ್ದಾನಿನ ಪ್ರಕಾರ ಸ್ಥಾಪನೆಗೊಂಡಿದೆ.

ಹಝ್ರತ್ ಮಸೀಹ್ ಮೌಊದ್(ಅ) ದೇವರ ಅನುಮತಿಯಿಂದ ನೇಮಕಗೊಂಡ ಸಮಯದಲ್ಲಿ ಹಾಗೂ ಆರಂಭದಲ್ಲಿ ಸಂಪೂರ್ಣವಾಗಿ ಏಕಾಂಗಿಯಾಗಿದ್ದರು. ಯಾವ ಲೌಕಿಕ ಸಹಾಯವಾಗಲಿ, ಒಡನಾಟವಾಗಲಿ ಇರಲಿಲ್ಲ. ಅವರು ತಮ್ಮ ಕವನದ ಸಾಲುಗಳಲ್ಲಿ ಆ ಪರಿಸ್ಥಿತಿಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ.

ಖಾದಿಯಾನಿನ ಹೆಸರು ಸಹ ತಿಳಿಯದ ಕಾಲ ಅದಾಗಿತ್ತು. ಆದರೆ ಈ ಯುಗದಲ್ಲೂ ಭೂಮಿ ಮತ್ತು ಆಕಾಶದ ಸೃಷ್ಟಿಕರ್ತ, ಸರ್ವಶಕ್ತನಾದ ತಮ್ಮನ್ನು ಕಳುಹಿಸಿದ ಆ ಅಲ್ಲಾಹನು ನಿಮ್ಮ ಜೊತೆಗಿದ್ದನು ಮತ್ತು ವಾಗ್ದಾನ ನೀಡುತ್ತಿದ್ದನು. "ನಾನು ನಿನ್ನ ಸಂದೇಶವನ್ನು ಭೂಮಿಯ ಕಟ್ಟಕಡೆಯವರೆಗೂ ತಲುಪಿಸುವೆನು". ನಾನು ಕಾರುಣ್ಯಗಳ ಮೇಲೆ ಕಾರುಣ್ಯಗಳನ್ನು ನಿನಗೆ ನೀಡುವೆನು. ಎಲ್ಲಿಯವರೆಗೆಂದರೆ ಅರಸರು ನಿನ್ನ ತಪ್ಪುಗಳಿಂದ ಕಾರುಣ್ಯ ಪಡೆಯುವವರು."

ಯಾತೀಕ ಮಿನ್ ಕುಲ್ಲು ಪಜ್ಜಿನ್ ಅಮೀನ್
ವ ಯಾತೂನ ಮಿನ್ ಹುಲ್ಲು ಪಜ್ಜಿನ್ ಅಮೀಖ್"

ಜನರು ನಿನ್ನ ಬಳಿ ಎಷ್ಟು ಅಧಿಕ ಸಂಖ್ಯೆಯಲ್ಲಿ ಬರುವವರು ಎಂದರೆ ರಸ್ತೆಗಳಲ್ಲಿ ಹೊಂಡಗಳು ಬೀಳುವುವು."

**"ಯನ್‌ಸುರುಕ ರಿಜಾಲನ್ ನೂಹೀ ಇಲೈಹಿಮ್ ಮಿನಸ್ಸಮಾಇ"**

ನಿನಗೆ ಸಹಾಯ ಮಾಡುವ ಜನರಿಗೆ ನಾವು ಅವರಿಗೆ ಸ್ವರ್ಗದಿಂದ ವಹಿ ಕಳುಹಿಸುವೆವು.

ಈ ವಾಗ್ದಾನದಂತೆಯೇ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅವರ ಜಮಾಅತಿನ ಮೇಲೆ ಮಳೆಯಂತೆ ತನ್ನ ಅನುಗ್ರಹಗಳನ್ನು ಅವತರಿಸಿದಳು ಮತ್ತು ಅವತರಿಸುತ್ತಾ ಬಂದಿದ್ದಾನೆ.

ಹಝ್ರತ್ ಮಸೀಹ್ ಮೌಊದ್(ಅ) ರಿಗೆ ಅಲ್ಲಾಹನ ಈ ವಾಗ್ದಾನಗಳು ಪೂರ್ಣಗೊಳ್ಳುವ ಕುರಿತು ಮತ್ತು ಜಮಾಅತಿನ ಮೇಲೆ ದೈವಿಕ ಅನುಗ್ರಹಗಳ ಅವತರಣಿಕೆಯ ಮೇಲೆ ದೃಢವಾದ ನಂಬಿಕೆಯಿತ್ತು. ಈ ಪೈಕಿ ಅವರು ಹೇಳುತ್ತಾರೆ:

"ನಾನು ನಿನ್ನ ಜೊತೆಗಿದ್ದೇನೆ ಮತ್ತು ನನ್ನ ಸ್ವರ್ಗೀಯ ಪಡೆಗಳು ನಿಮ್ಮೊಂದಿವೆ ಎಂಬ ಸಾಂತ್ವನ ಪಡೆಯದ ಯಾವ ರಾತ್ರಿಯು ಕಳೆಯುತ್ತಿರಲಿಲ್ಲ." (ಝಮೀಮ ತೊಹ್‌ಫ ಗೊಲಡ್ವಿಯಾ, ರೂಹಾನಿ ಖಝಾಈಣ್, ಸಂಪುಟ-17, ಪುಟ-49)

ನಂತರ ಮಹಾನ್ ವೈಭವ ಮತ್ತು ಪೂರ್ಣ ವಿಶ್ವಾಸದೊಂದಿಗೆ, ದೈವಿಕ ವಾಗ್ದಾನಗಳ ಮತ್ತು ದೈವಿಕ ಸಹಾಯಗಳ ಬಗ್ಗೆ ಹೀಗೆ ಘೋಷಿಸಿದರು:

"ನೋಡಿ ಆ ಸಮಯ ಬರುವುದು. ಬದಲಿಗೆ ಅದು ಅತೀ ಸಮೀಪದಲ್ಲಿದೆ. ಅಲ್ಲಾಹನು ಈ ಸಂಘಟನೆಯನ್ನು ಜಗತ್ತಿನಲ್ಲಿ ದೊಡ್ಡ ಸ್ವೀಕಾರದೊಂದಿಗೆ ಅವರನ್ನು ಹರಡುವನು ಮತ್ತು ಈ ಸಂಘಟನೆಯು ಪೂರ್ವ ಮತ್ತು ಪಶ್ಚಿಮ, ಉತ್ತರ ಮತ್ತು ದಕ್ಷಿಣಗಳಲ್ಲೂ ಹರಡುವುದು. ಜಗತ್ತಿನಲ್ಲಿ ಈ ಸಂಘಟನೆ ಮಾತ್ರ ಇಸ್ಲಾಂ ಧರ್ಮ ಎಂದು ಅರ್ಥೈಸಲಾಗುವುದು. ಈ ವಿಷಯಗಳು ಮನುಷ್ಯನ ಮಾತುಗಳಲ್ಲಿ ಅವು ದೇವರ ಮಾತುಗಳಾಗಿವೆ, ಅವನ ಮುಂದೆ ಯಾವ ಮಾತುಗಳಾಗಲಿ ಅಸಾಧ್ಯವೆಂಬುದು ಇಲ್ಲ.

(ತೊಹ್‌ಫ ಗೊಲಡ್ವಿಯಾ, ರೂಹಾನಿ ಖಝಾಈನ್, ಸಂಪುಟ-17, ಪುಟ-182)

ಮತ್ತು ಹೇಳುತ್ತಾರೆ:

"ಓ ಎಲ್ಲ ಜನರೇ ಇದು ಭೂಮ್ಯಾಕಾಶಗಳನ್ನು ಸೃಷ್ಟಿಸಿದವನ ಭವಿಷ್ಯವಾಣಿಯಾಗಿದೆ: ಅಲ್ಲಾಹನು ತನ್ನ ಈ ಜಮಾಅತನ್ನು ಎಲ್ಲ ದೇಶಗಳಲ್ಲಿಯೂ ಹರಡುವನು. ತರ್ಕ ಮತ್ತು ಸಾಕ್ಷ್ಯಾಧಾರ ಮೂಲಕ ಎಲ್ಲರ ಮೇಲೆ ಅವರಿಗೆ ಜಯವನ್ನು ನೀಡುವನು. ಆ ದಿನಗಳು ಬರಲಿವೆ, ಅವು ಸಮೀಪದಲ್ಲಿಯೇ ಇವೆ. ಲೋಕದಲ್ಲಿ ಕೇವಲ ಈ ಒಂದು ಧರ್ಮ ಮಾತ್ರ ಗೌರವಾದರಗಳೊಂದಿಗೆ ಸ್ಮರಿಸಲ್ಪಡುವುದು. ಅಲ್ಲಾಹನು ಈ ಧರ್ಮ ಮತ್ತು ಅಸಾಧಾರಣವಾದ ಅನುಗ್ರಹ ನೀಡುವನು. ಈ ಜಮಾಅತನ್ನು ನಾಶಮಾಡಲು ಚಿಂತಿಸುವ ಪ್ರತಿಯೊಬ್ಬನನ್ನು ನಿರಾಶೆ ಹೊಂದಿದವನಾಗಿ ಮಾಡುವನು. ಈ ಜಯ ಖಿಯಾಮತ್ ತನಕ ಜಾರಿಯಲ್ಲಿರುವುದು...... ನಾನು ಒಂದು ಬೀಜವನ್ನು ಬಿತ್ತಲು ಆಗಮಿಸಿದೆ. ನನ್ನ ಕೈಯಿಂದ ಆ ಬೀಜ ಬಿತ್ತಲ್ಪಟ್ಟಿದೆ. ಅದು ವೃಕ್ಷವಾಗಿ ಬೆಳೆಯುವುದು ಪುಷ್ಪ ಭರಿತವಾಗುವುದು. ಅದರ ಬೆಳವಣಿಗೆಯನ್ನು ತಡೆಯಬಲ್ಲವನು ಯಾರೂ ಇಲ್ಲ." (ತಝ್‌ಕಿರತುಶ್ಶಹಾದತೈನ್, ರಹಾನಿ ಖಝಾಈನ್, ಸಂಪುಟ-20ವ, ಪುಟ-66)

ಆದರಣೀಯ ಸಭಿಕರೇ! ಅಲ್ಲಾಹನ ವಾಗ್ದಾನಗಳ ಪ್ರಕಾರ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ನೀಡಲಾದ ಭವಿಷ್ಯವಾಣಿಗಳ ಪ್ರಕಾರವೇ ಅಹ್ಮದಿಯಾ ಜಮಾಅತಿನ ಮೇಲೆ ದೈವಿಕ ಅನುಗ್ರಹಗಳ ಅವತರಣಿಕೆ ಕೇವಲ ಮಸೀಹ್ ಮೌಊದ್(ಅ) ಅವರ ಕಾಲದಲ್ಲಿ ಮಾತ್ರವಲ್ಲ, ಬದಲು ನಂತರದ ಮಹಾನ್ ಖಲೀಫರ ಅವಧಿಗಳಲ್ಲಿಯೂ ಮುಂದುವರೆಯಿತು. ಮತ್ತು ಈಗ ನಾವು ನಮ್ಮ ಕಣ್ಣುಗಳಿಂದ ಪಂಚಮ

ಖಲೀಫರ ಅನುಗ್ರಹಿತ ಕಾಲದಲ್ಲೂ ಕಳೆದ ಇಪತ್ತು ವರ್ಷಗಳಿಂದ ಆ ಅನುಗ್ರಹಗಳ ಅವತರಣಿಕೆ ತಮ್ಮ ಕಣ್ಣುಗಳಿಂದ ನೋಡುತ್ತಿದ್ದೇನೆ. ಈ ಸಭೆಯಲ್ಲಿರುವ ನಾವೆಲ್ಲರೂ ಅದಕ್ಕೆ ಸಾಕ್ಷಿಯಾಗಿದ್ದೇವೆ. ಅಲ್ಲಾಹನು ಪಂಚಮ ಖಲೀಫರ ಈ ಪುಣ್ಯಕಾಲದಲ್ಲೂ ತಮ್ಮ ಪವಿತ್ರವಾದ ಮಸೀಹರಿಗೆ ನೀಡಿದ ವಾಗ್ದಾನಗಳನ್ನು ಈಡೇರಿಸಿದ್ದಾನೆ ಮತ್ತು ಈಡೇರಿಸುತ್ತಲೇ ಇದ್ದಾನೆ.

ಅಹ್ಮದಿಯಾ ಜಮಾಅತಿನ ಮೇಲೆ ಅವತರಿಸುತ್ತಿರುವ ದೈವಿಕ ಅನುಗ್ರಹಗಳು ಮತ್ತು ಜಮಾಅತಿನ ಪ್ರಗತಿಯು ಒಂದು ಎಲ್ಲೆ ಇಲ್ಲದ ಸಮುದ್ರದಂತಿದೆ. ಅದರ ಆಳ ಮತ್ತು ವಿಶಾಲತೆ ಎಷ್ಟು ಹೆಚ್ಚಾಗಿವೆ ಎಂದರೆ ಅದರ ಪಾತಾಳಕ್ಕೆ ತಲುಪುವುದು ಮನುಷ್ಯನ ಮಾತಿಗೆ ಸೇರಿದ್ದಲ್ಲ. ಜಮಾಅತಿನ ಮೇಲೆ ದೇವರ ಅನುಗ್ರಹ ಮತ್ತು ಜಮಾಅತಿನ ಪ್ರಗತಿಯನ್ನು ಯಾವ ಕೋನದಿಂದ ಪರಿಶೀಲಿಸಿದರೂ, ಜನರು ಆಶ್ಚರ್ಯಚಕಿತರಾಗುವ ಇಂತಹ ಭವ್ಯವಾದ ದರ್ಶನಗಳು ಕಂಡು ಬರುತ್ತವೆ. ಈ ದರ್ಶನಗಳು ಒಂದೆರಡು ದಿನದ, ಒಂದೆರಡು ವರ್ಷದ ಮಾತಲ್ಲ, ಬದಲು ಹಿಂದಿನ 144 ವರ್ಷಗಳು ಒಳಗೊಂಡ, ಸಮುದ್ರದ ಅಲೆಗಳು ಅಪ್ಪಳಿಸುವ ರೀತಿಯಲ್ಲಿ ಕಣ್ಣಿಗೆ ಸಾಲದಂತಹ ದೃಶ್ಯಗಳಾಗಿವೆ.

**ಆಧ್ಯಾತ್ಮಿಕ ಕ್ರಾಂತಿ:**

ಆದರಣೀಯ ಸಭಿಕರೇ ! ವಾಗ್ದತ್ತ ಮಸೀಹರು ಯಾವ ಆಧ್ಯಾತ್ಮಿಕ ಕ್ರಾಂತಿ ಉಂಟು ಮಾಡಲು ಆಗಮಿಸಿದರೋ. ಆ ಕ್ರಾಂತಿಯನ್ನು ಬಹಿರಂಗಪಡಿಸಿದರು. ಅಲ್ಲಾಹನು ತನ್ನ ಬೆಂಬಲ ಮತ್ತು ಸಹಾಯ ಯಾವ ರೀತಿಯಲ್ಲಿ ಜಮಾಅತ್‌ನೊಂದಿಗೆ ಇದೆ ಎಂದರೆ, ಅದರ ಪರಿಣಾಮವಾಗಿ ಉಂಟಾಗಿರುವ ಆಧ್ಯಾತ್ಮಿಕ ಕ್ರಾಂತಿಯ ಉದಾಹರಣೆ ಹಿಂದಿನ 1400 ವರ್ಷಗಳಲ್ಲಿ ಎಲ್ಲೂ ಕಾಣಸಿಗದು. ಖಾದಿಯಾನ್ ಎಂಬ ಅನಾಮಧೇಯ ಪಟ್ಟಣದಿಂದ ಬೆಳಕಿನ ಕಿರಣವು ಹೊರಹೊಮ್ಮಿತು ಅದು ಕ್ರಮೇಣ ಇಡೀ ಜಗತ್ತನ್ನು ಬೆಳಗಿಸಿತು.

ಹಝ್ರತ್ ಮಸೀಹ್ ಮೌಊದ್ (ಅ) ಯುಹ್‌ಯಿದ್ದೀನ ಯ ಯುಖಿಮುಶ್ಶರೀಅ ದ ಪ್ರಕಾರ ಇಸ್ಲಾಂ ಧರ್ಮವನ್ನು ಪುನರುಜ್ಜೀವನಗೊಳಿಸಲು ಮತ್ತು ಷರಿಯಾ ಪ್ರಕಾರ ನಿಜವಾದ ಮುಹಮ್ಮದ್(ಸ) ರ ಧರ್ಮವನ್ನು ಸ್ಥಾಪಿಸಲು ಆಗಮಿಸಿದ್ದರು. ಅವರ ಆಗಮನದ ಪರಿಣಾಮವಾಗಿ ಅಹ್ಮದಿಯಾ ಜಮಾಅತ್ ಬಹುದೇವತಾವಾದವನ್ನು ತ್ಯಜಿಸಿತು. ಪ್ರಪಂಚದಿಂದ ಭ್ರಷ್ಟ ಹಾಗೂ ಅವಿಶ್ವಾಸ ಮತ್ತು ನವೀನಾಚರಣೆಗಳನ್ನು ಕೊನೆಗಾಣಿಸಿತು.

ಹಝ್ರತ್ ಮಸೀಹ್ ಮೌಊದ್ (ಅ) ರವರ ಬೈಅತ್ತಿನಲ್ಲಿ ಸೇರಿದ ಪರಿಣಾಮವಾಗಿ ಜಮಾಅತಿನ ಬಂಧುಗಳ ಮೇಲೆ ಅಲ್ಲಾಹನ ಎಂತಹ ಅನುಗ್ರಹಗಳು ಅವತರಿಸಿದವು ಎಂದರೆ ಅವರು ಜೀವಂತ ಹಾಗೂ ನಿಜವಾದ ದೇವನನ್ನು ಪಡೆದರು. ಅದು ಪ್ರವಾದಿ ಮುಹಮ್ಮದ್(ಸ) ರು ಗುರುತಿಸಿಕೊಟ್ಟ ಫಲವಾಗಿತ್ತು. ಹಿಂದಿನ ವಿಷಮ ವಾತಾವರಣದಿಂದ ಬಾಧಿತರಾದವರೂಮ ಕೂಡ ಅಲ್ಲಾಹನ ಕೃಪೆಯಿಂದ ದೇವನ ಬಳಿಗೆ ಮರಳಿ ದೇವವಾಣಿ ಪಡೆದರು. ಅವನ ತಾಜಾ ದೃಷ್ಟಾಂತಗಳನ್ನು ವೀಕ್ಷಿಸಿದರು. ಅವರು ಉ ಜೀ ಬ ಇ ದಾವತದ್ದಾಇ ಇಝಾ ದಆನ್ ನ ದೃಶ್ಯಗಳನ್ನು ಸ್ವಯಂ ಅನುಭವಿಸಿದಂತಾಯಿತು. ದೇವನ ಉಪಸ್ಥಿತಿ ಮತ್ತು ಅವನ ದಿವ್ಯವಾಣಿ ಪಡೆದವರಾದರು. ದೇವನ ಸಾಂಗತ್ಯ ಮತ್ತು ದೇವನ ಭೇಟಿಯ ಸಿಹಿ ಪಾನೀಯ ಸೇವಿಸಿದರು. ಅವರು ನಾಸ್ತಿಕತೆಯಿಂದ, ಆಸ್ತಿಕತೆಯ ಕಡೆಗೆ ಎಷ್ಟೊಂದು ತೀವ್ರತೆಯಿಂದ ಮುಂದಾದರೆಂದರೆ ಅವರು ಕೇವಲ ದೇವಮಾನವರಾಗಿ ಬದಲು ದೇವದೂತರಾಗಿ ಇತರರಿಗೆ ಮಾರ್ಗದರ್ಶಕರಾದರು.

**ದೇವನು ಈಗಲೂ ತಾನಿಚ್ಛಿಸಿದವರೊಂದಿಗೆ ಮಾತನಾಡುವನು, ಈಗಲೂ ಸಹ ಅವನು ತಾನು ಪ್ರೀತಿಸುವವರೊಂದಿಗೆ ಮಾತನಾಡುತ್ತಾನೆ.**

ಹಝ್ರತ್ ಮಸೀಹ್(ಅ) ರು ತನ್ನ ಶಿಷ್ಯರ ಬಗ್ಗೆ ಹೇಳಿದರು.

"ನಾನು ನನ್ನ ಸಾವಿರಾರು ಪ್ರತಿಜ್ಞೆದಾರರಲ್ಲಿ ಯಾವ ರೀತಿಯ ಬದಲಾವಣೆಗಳನ್ನು ನೋಡುತ್ತಿದ್ದೇನೆಂದರೆ, ಮಲಾಸ್ ನಬಿ(ಅ) ರ ಶಿಷ್ಯರು ಅವರ ಜೀವನದಲ್ಲಿ ನಂಬಿಕೆ ತಂದದಕ್ಕಿಂತಲೂ ನನ್ನ ಶಿಷ್ಯಂದಿರನ್ನು ಉತ್ತಮರು ಎಂದು ಭಾವಿಸುತ್ತೇನೆ. ಮತ್ತು ಸಹಾಬರ ನಂಬಿಕೆ ಹಾಗೂ ಅವರ ಸಾಮರ್ಥ್ಯಗಳ ಪ್ರಕಾರ ಅವರಲ್ಲಿ ಕಾಣುತ್ತೇನೆ. ನಾನು ನೋಡುತ್ತಿದ್ದೇನೆ, ನನ್ನ ಜಮಾಅತ್, ಸತ್ಕರ್ಮಗಳಲ್ಲಿ ಮತ್ತು ಸಾಮರ್ಥ್ಯಗಳಲ್ಲಿ ಅಭಿವೃದ್ಧಿಗೊಂಡಿದ್ದು ಸಹ ಒಂದು ಪವಾಡವಾಗಿದೆ. ಸಾವಿರಾರು ಜನರು ಹೃದಯದಿಂದ ಬದ್ಧರಾಗಿದ್ದಾರೆ. ಇಂದು ಅವರಿಗೆ ತಮ್ಮ ಆಸ್ತಿಯನ್ನೆಲ್ಲಾ ಬಿಟ್ಟುಕೊಡಲು ಹೇಳಿದರೆ, ಅದಕ್ಕೆ ಅವರು ಸಿದ್ಧರಿದ್ದಾರೆ." (ಅಲ್‌ಫಝಲ್ ಇಂಟರ್‌ನ್ಯಾಶನಲ್, 15-21, ಸೆಪ್ಟೆಂಬರ್ 2006)

"ದೇವನ ಹಸ್ತದಿಂದ ನೆಡಲ್ಪಟ್ಟ ಗಿಡ ಇದಾಗಿದೆ"

ಪ್ರೀತಿಯ ಕೇಳುಗರೇ! ಅಹ್ಮದಿಯಾ ಜಮಾಅತ್‌ನ ಮೇಲೆ ದೇವನ ಕೃಪೆಯ ಇನ್ನೊಂದು ಬಹಿರಂಗ ಅಂಶವೆಂದರೆ, ಸಾವಿರಾರು ವಿರೋಧಗಳ ನಡುವೆಯೂ ಈ ಜಮಾಅತಿಗೆ ಮಹೋನ್ನತವಾದ ಅಭಿವೃದ್ಧಿಯನ್ನು ದಯಪಾಲಿಸುತ್ತಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಸೂರ: ಫತಹದಲ್ಲಿ ದೈವಿಕ ಸಂಘಟನೆಗಳ ಆರಂಭದ ಉದಾಹರಣೆ ಒಂದು ತಿರಸ್ಕೃತಗೊಂಡ ಬೀಜಕ್ಕೆ ಹೋಲಿಸಿದೆ. ಚಿಗುರೊಡೆಯುವ ಒಂದು ಸಸ್ಯ ಸ್ವಲ್ಪಮಟ್ಟಿಗೆ ಅದು ಫಲಭರಿತವಾದ ಒಂದು ಮರವಾಗುತ್ತದೆ. ಅದನ್ನು ನೋಡಿ ಅದನ್ನು ಬೆಳೆಸುವ ಭಕ್ತರು ಸಂತೋಷಪಡುತ್ತಾರೆ. ಆದರೆ ವಿರೋಧಿಗಳ ಕೋಪ ಉತ್ಸಾಹ ಇನ್ನಷ್ಟು ಹೆಚ್ಚಾಗುತ್ತದೆ.

ಅಹ್ಮದಿಯಾ ಜಮಾಅತ್ ದೇವನ ಕೈಯಿಂದ ನೆಟ್ಟ ಗಿಡವಾಗಿರುವ ಬದಲು ಯಾವನೇ ಮನುಷ್ಯನ ಕೈವಾಡವಿರುತ್ತಿದ್ದರೆ ಹಝ್ರತ್ ಮಸೀಹ್ ಮೌಊದ್ (ಅ) ರವರು ತೀರಿ ಹೋಗುತ್ತಿದ್ದಂತೆಯೇ ಈ ಸಂಘಟನೆಯು ನಿರ್ನಾಮಗೊಳ್ಳುತ್ತಿತ್ತು. ಅವರು ನಿಧನಗೊಂಡ ನಂತರ "ವಫಾದಾರ್" ಪತ್ರಿಕೆ ಸರಿಯಾಗಿಯೇ ಬರೆದಿದ್ದಾನೆ. "ಮಿರ್ಝಾ ಸಾಹಿಬರ ನಂತರ ಅವರ ಸಂಘಟನೆ ನಿರ್ನಾಮವಾದರೆ ತಿಳಿದುಕೊಳ್ಳಿ, ಮಿರ್ಝಾ ಸುಳ್ಳುಗಾರನಾಗಿದ್ದಾರೆ. ಅವರ ನಂತರ ಅವರ ಜಮಾಅತಿನ ಅಥವಾ ಅವರ ಯಾವೊಬ್ಬ ಉತ್ತರಾಧಿಕಾರಿ ಅವರ ಪ್ರೀತಿಯಿಂದ ಜಮಾಅತನ್ನು ಬೆಳೆಸುವಲ್ಲಿ ಯಶಸ್ವಿಯಾದರೆ ತಿಳಿದುಕೊಳ್ಳಬೇಕು. ಮಿರ್ಝಾ ಸತ್ಯವಂತರಾಗಿದ್ದಾರೆ. ಅವರು ದೇವವಾಣಿಯಿಂದ ಅನುಗ್ರಹಿತರಾದರು. ಅವರ ಜಮಾಅತಿನ ಅಥವಾ ಅವರ ಉತ್ತರಾದಿಕಾರಿಗಳು ನಶಿಸುತ್ತ ಹೋದರೆ ತಿಳಿದುಕೊಳ್ಳಬೇಕು, ಅಲ್ಲಾಹನು ಧರ್ಮದಲ್ಲಿ ಇಂತಹ ಹಸ್ತಕ್ಷೇಪ ಎಂದೂ ಮೆಚ್ಚುವುದಿಲ್ಲ. (ಅಖ್ಬಾರ್ ವಫಾದಾರ್ ಲಾಹೋರ್, 14-07-1908)

ಆದರಣೀಯ ಸಭಿಕರೇ! ಅಹ್ಮದಿಯತ್‌ನ ವೃಕ್ಷವು 'ಅಖ್ರಜು ಶತಾಅ" ಪ್ರಕಾರ ಚಿಗುರೊಡೆಯ ರೂಪದಲ್ಲಿದ್ದಾಗ ಅದನ್ನು ಪುಡಿ ಮಾಡಲು ತುಳಿಯಲು ವಿರೋಧಿಗಳು ಮತ್ತು ನಿರಾಕರಿಸುವವರು. ಶಕ್ತಿ ಮೀರಿ ಪ್ರಯತ್ನಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ರವರ ಕಾಲದಲ್ಲೂ, ಅಹ್ಮದಿಯಾ ಖಲೀಫರ ಕಾಲಗಳಲ್ಲೂ ಮತ್ತು ಈಗ ಪಂಚಮ ಖಿಲಾಫತ್ ಕಾಲದಲ್ಲೂ ಈ ಪ್ರಯತ್ನಗಳು ನಡೆಯುತ್ತಿವೆ ಆದರೆ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಚಿಗುರೊಡೆದ ಮರವು ಬೆಳೆಯುತ್ತಲೇ ಇದೆ ಒಂದೆಡೆ, ಲಿಯಗೀಝಬಿಹಿಮುಲ್ ಕುಫ್ಫಾರ್ ಅನ್ವಯ ನಿರಾಕರಿಸುವವರು ಕೋಪಕ್ರೋಧಗಳಲ್ಲಿ ಮುಂದುವರೆಯುವವರಾದರೆ, ಇನ್ನೊಂದೆಡೆ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಅಹ್ಮದಿಯತ್ ಪರವಾಗಿ ತನ್ನ ನೆರವು ಮತ್ತು ಸಹಕಾರ ಮತ್ತು ಅನಂತ ಅನುಗ್ರಹಗಳನ್ನು ಪ್ರತಿ ಕ್ಷಣ, ಪ್ರತಿ ಸಮಯ, ಪ್ರತಿದಿನ ತೋರಿಸುತ್ತಲೇ ಇದ್ದಾನೆ.

ಹಝ್ರತ್ ಮಸೀಹ್ ಮೌಊದ್(ಅ) ವಿರೋಧಿಗಳನ್ನು ಉದ್ದೇಶಿಸಿ ತುಂಬಾ ವೈಭವದಿಂದ ಹೇಳುತ್ತಾರೆ.

"ನೀವು ನೋಡುತ್ತಿದ್ದೀರಿ. ಬಲವಾದ ವಿರೋಧ ಮತ್ತು ವಿರೋಧದ ಪ್ರಾರ್ಥನೆಗಳ ಹೊರತಾಗಿಯೂ ಅವನು ನನ್ನನ್ನು ಬಿಡಲಿಲ್ಲ ಮತ್ತು ಅವನು ಎಲ್ಲಾ ಕ್ಷೇತ್ರಗಳಲ್ಲಿಯೂ ನನ್ನ ಬೆಂಬಲಿಗನಾದನು. ನನ್ನ ಮೇಲೆ ಎಸೆದ ಪ್ರತಿ ಕಲ್ಲನ್ನು ತನ್ನ ಕೈಗೆ ಎತ್ತಿಕೊಂಡನು. ನನಗೆ ಹೊಡೆದ ಪ್ರತಿಯೊಂದು ಬಾಣವು, ಅದೇ ಬಾಣವನ್ನು ಶತ್ರುಗಳಿಗೆ ಹಿಂದಿರುಗಿಸಿತು. ನಾನು ನಿರ್ಗತಿಕನಾಗಿದ್ದೆ. ಅವನು ನನಗೆ ಆಶ್ರಯ ನೀಡಿದನು. ನಾನು ಒಬ್ಬಂಟಿಯಾಗಿದ್ದೆನು. ಅವನು ನನಗೆ ತನ್ನ ಮಡಿಲಿಗೆ ಸೇರಿಸಿಕೊಂಡನು. ನಾನು ಲವಲೇಶವು ಆಗಿರಲಿಲ್ಲ. ನನಗೆ ಗೌರವದೊಂದಿಗೆ ಹೆಸರುವಾಸಿಯನ್ನಾಗಿ ಮಾಡಿದನು ಮತ್ತು ಲಕ್ಷಾಂತರ ಮನುಷ್ಯರನ್ನು ತನ್ನ ಶಿಷ್ಯರನ್ನಾಗಿ ಮಾಡಿದನು. ನಾನು ಬರಾಹೀನೆ ಅಹ್ಮದಿಯಾ ಪ್ರಕಟಣೆಗೊಳ್ಳುವ ಸಮಯ ಯಾವ ಮಟ್ಟಿಗೆ ಅನಾಮಿಕವಾಗಿದ್ದೆನೆಂದರೆ, ಅಮೃತ್ಸರದಲ್ಲಿ ಒಂದು ಪಾದರಿಯ ಮುದ್ರಾಯಣದಲ್ಲಿ ಅವನ ಹೆಸರು ರಜ್ಜಬ್ ಅಲಿ ಎಂದಿತ್ತು, ನನ್ನ ಪುಸ್ತಕ ಬರಾಹೀನ್ ಅಹ್ಮದಿಯಾ ಮುದ್ರಣಗೊಳ್ಳುತ್ತಿತ್ತು. ಮತ್ತು ನಾನು ಅದನ್ನು ಪರಿಶೀಲಿಸುವುದಕ್ಕೆ ಮತ್ತು ಪುಸ್ತಕ ಮುದ್ರಿಸಲು ಒಬ್ಬಂಟಿಯಾಗಿಯೇ ಅಮೃತ್ಸರ ಹೋಗುತ್ತಿದ್ದೆನು ಮತ್ತು ಮರಳುತ್ತಿದ್ದೆನು. ಯಾರೂ ಸಹ ನಾನು ಹೋಗುವ ಸಮಯವಾಗಲಿ, ಬರುವ ಸಮಯವಾಗಲಿ, ನೀನು ಯಾರು ಎಂದು ಕೇಳುವರು ಇರಲಿಲ್ಲ ಮತ್ತು ಯಾರಿಗೂ ನನ್ನ ಪರಿಚಯವು ಇರಲಿಲ್ಲ ಮತ್ತು ನನ್ನ ಯಾವ ಗೌರವಯುತ ಅಂತಸ್ತು ಇರಲಿಲ್ಲ. ಸ್ವಯಂ ಆ ಪಾದರಿ ಭವಿಷ್ಯವಾಣಿಗಳನ್ನು ಆಶ್ಚರ್ಯಚಕಿತನಾಗಿ ಓದುತ್ತಿದ್ದನು ಮತ್ತು ಹೇಳುತ್ತಿದ್ದನು. ಇದು ಹೇಗೆ ಸಾಧ್ಯ. ಒಬ್ಬ ಸಾಧಾರಣ ಮನುಷ್ಯನೆಡೆ ಒಂದು ಜಗತ್ತೇ ಮರಳಿ ನೋಡುವುವು. ಆದರೆ ಆ ಮಾತುಗಳು ದೇವನ ಮಾತುಗಳಾಗಿದ್ದವು. ನನ್ನ ಮಾತುಗಳಾಗಿರಲಿಲ್ಲ. ಆದ್ದರಿಂದ ಅವು ಸಮಯಕ್ಕೆ ಸರಿಯಾಗಿ ಪೂರ್ಣಗೊಂಡವು ಮತ್ತು ಪೂರ್ಣಗೊಳ್ಳುತ್ತಿವೆ."

(ಬರಾಹೀನೆ ಅಹ್ಮದಿಯಾ, ಭಾಗ-5, ರೂಹಾನಿ ಖಝಾಇನ್ ಸಂಪುಟ-21, ಪುಟ-79)

**ಖಿಲಾಫತೆ ಅಹ್ಮದಿಯಾದ ಕಾಲಾವಧಿಯಲ್ಲಿ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ನಿಧನದ ನಂತರ ಮೊದಲ ಖಿಲಾಫತ್ತಿನಲ್ಲಿ, ವೈಯಕ್ತಿಕ ಖಲೀಫ ನೆಲೆಯಲ್ಲಿ ಜಮಾಅತ್‌ನಲ್ಲಿ ಅವ್ಯವಸ್ಥೆಯಲ್ಲಿ ಸೃಷ್ಟಿಸಲು ಪ್ರಯತ್ನಿಸಲಾಯಿತು. ಎರಡನೆಯ ಖಲೀಫ ಅವಧಿಯಲ್ಲೂ ವಿವಿಧ ಪ್ರಲೋಭನೆಗಳು ಒಂದರ ನಂತರ ಒಂದನ್ನು

ಅನುಸರಿಸಿದವು. ಅಹ್ರಾರಿಗಳ ಷಡ್ಯಂತರಗಳು ಹುಟ್ಟಿಕೊಂಡಿತು. ಅವರು ರಾಷ್ಟ್ರವ್ಯಾಪಿ ಚಳುವಳಿಗಳು ಅನುಸರಿಸಿದರು. ತೃತೀಯ ಖಿಲಾಫತ್ ಕಾಲದಲ್ಲಿ ಅಹ್ಮದಿಯಾ ಜಮಾಅತಿನ ವಿರುದ್ಧ ಕ್ರೂರ ಶಾಸನ ರಚನೆಯಿಂದ ವಿರೋಧಿಗಳು ಸಂತೋಷದಿಂದ ಕುಣಿದಾಡಿದರು. ಮತ್ತು ಜಮಾಅತಿನ ಕೈಗಳಲ್ಲಿ ಬೇಡುವ ಭಿಕ್ಷೆ ಪಾತ್ರೆ ಹಿಡಿಸಲು ಮಾತನಾಡಿದರು. ಚತುರ್ಥ ಖಿಲಾಫತ್ ಕಾಲದಲ್ಲಿ ಇನ್ನೋರ್ವ ಕ್ರೂರಿ ಮತ್ತು ದುಷ್ಕರ್ಮಿ ಆಡಳಿತಗಾರನು ಕಪ್ಪು ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಮೂಲಕ ಜಮಾಅತಿನ ಜೀವಿತಾವಧಿ ಕನಿಷ್ಠಗೊಳಿಸಲು ಪ್ರಯತ್ನಿಸಿದರು ಮತ್ತು ಅಹ್ಮದಿಯತ್ತನ್ನು (ನೌಝುಬಿಲ್ಲಾಹ್) ಒಂದು ಕ್ಯಾನ್ಸರ್ ರೋಗ ಎಂದು ಕರೆದು ಅದನ್ನು ಬೇರು ಸಮೇತ ಕಿತ್ತು ಹಾಕುವ ಘೋಷಣೆ ಹಾಕಿದನು ಈಗ ಪಂಚಮ ಖಿಲಾಫತ್‌ನಲ್ಲೂ ವಿವಿಧ ರೀತಿಯ ಕುಟಿಲ ಕಾರ್ಯಗಳಿಂದ ಜಮಾಅತಿಗೆ ಕಷ್ಟಗಳನ್ನು ಒಡ್ಡಲು ಪ್ರಯತ್ನಿಸುತ್ತಿದ್ದಾರೆ. ಸುಮಾರು ಒಂದು ನೂರು ಜನರಿಗೆ ಹುತಾತ್ಮರನ್ನಾಗಿ ಮಾಡಿದ್ದಾರೆ.

ಆದರೆ ಶ್ರೋತೃಗಳೇ! ಎಲ್ಲ ಸಮಯಕ್ಕೂ ಶತ್ರುಗಳು ಅವಮಾನಿತರಾಗುತ್ತಿದದನ್ನು ನೀವು ಕಾಣಲಿಲ್ಲವೇ? ಎಲ್ಲಾ ಕ್ಷಣಗಳಲ್ಲಿಯೂ ಸೋಲು ಕಾಣುವಂತಾಯಿತು. ಅವರ ಧ್ಯೇಯೋದ್ದೇಶಗಳನ್ನು ಅಲ್ಲಾಹನು ಮಣ್ಣುಮುಕ್ಕಿಸಿದನು ಮತ್ತು ಪ್ರತಿಸಲವೂ ಅವರಿಗೆ ವಿಫಲಗೊಳಿಸಿದನು. ಇನ್ನೊಂದೆಡೆ ಅಲ್ಲಾಹನು ತನ್ನ ಅನುಗ್ರಹದಿಂದ ಜಮಾಅತನ್ನು ತನ್ನ ವಾಗ್ದಾನಗಳ ಪ್ರಕಾರ ಪ್ರಗತಿಯ ಮೇಲೆ ಪ್ರಗತಿ ನೀಡುತ್ತಾ ಹೋಗುತ್ತಿದ್ದಾನೆ. ಲೋಕದ 213 ರಾಷ್ಟ್ರಗಳಲ್ಲಿ ಜಮಾಅತ್ ಸ್ಥಾಪನೆಗೊಂಡಿದೆ.

ತುಮ್‌ಹೇಂ ಮಿಟಾನೆಕಾ ಝೋಮ್ ಲೇಕರ್ ಉಠೇ ಹೈಂ ಜೊ ಖಾಕ್ ಕೇ ಬಗೋಲೆ

ಖುದಾ ಉಡಾ ದೇಗಾ ಖಾಕ್ ಉನ್‌ಕೀ ಕರೇಗಾ ರುಸ್ವಾ ಎ ಆಮ್ ಕೆಹ್‌ನಾ

ಅನುವಾದ: ನಿಮ್ಮನ್ನು ಆವರಿಸುವ ಉದ್ದೇಶದಿಂದ, ಧೂಳನ್ನು ಎಬ್ಬಿಸುವವರು ಎದ್ದು ನಿಂತಿದ್ದಾರೆ. ದೇವನು ಅವರ ಧೂಳನ್ನು ಎಬ್ಬಿಸಿಬಿಡುವನು, ಸಾರ್ವಜನಿಕವಾಗಿ ಅವಮಾನಿಸುವನು. ನೋಡುತ್ತಿರಿ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮ್ಮ ಜಮಾಅತ್ ಎಷ್ಟು ವೇಗವಾಗಿ ಬೆಳೆಯುತ್ತಿದೆ, ಅಷ್ಟು ವೇಗವಾಗಿ ಯಾವ ಮರವು ಫಲವನ್ನು ಕೊಡುವುದಿಲ್ಲ! ಇದು ಅಲ್ಲಾಹನ ಕಾರ್ಯವಾಗಿದೆ ಮತ್ತು ಆಶ್ಚರ್ಯಕರವಾಗಿದೆ! ಇದು ಅಲ್ಲಾಹನ ಅದ್ಭುತ ಪವಾಡವಾಗಿದೆ!

**ಇಸ್ಲಾಮಿನ ಪ್ರಕಟಣೆಯ ಐದು ಶಾಖೆಗಳು:**

ಆದರಣೀಯ ಸಭಿಕರೇ, ದೈವಿಕ ಭವಿಷ್ಯವಾಣಿಯ ಪ್ರಕಾರ ಇಸ್ಲಾಂ ಧರ್ಮದ ಪುನರುಜ್ಜೀವನವು ಹದಿನಾಲ್ಕನೆ ಶತಮಾನದ ಮುಜದ್ದಿದ್ ಮಸೀಹ್ ಮೌಊದ್ ಅವರ ಯುಗದಲ್ಲಿ ಉದ್ದೇಶಿಸಲಾಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) 1891 ರಲ್ಲಿ ಇಸ್ಲಾಮಿನ ಪ್ರಗತಿ ಮತ್ತು ಪುನರ್ಜೀವನದ ಉದ್ದೇಶದಿಂದ ಐದು ಶಾಖೆಯ ಬುನಾದಿಯನ್ನು ಸ್ಥಾಪಿಸುವ ಘೋಷಣೆ ಮಾಡಿದರು.

(1) ಗ್ರಂಥ ರಚನೆ ಮತ್ತು ಸಂಕಲನಗಳು (2) ಜಾಹೀರಾತುಗಳು (3) ಅತಿಥಿಗಳ ಆಗಮನ (4) ಪತ್ರಗಳು (5) ಅನುಯಾಯಿಗಳ ಹಾಗೂ ಶಿಷ್ಯಂದಿರ ಸ್ಮರಣೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು, ಹಝ್ರತ್ ವಾಗ್ದತ್ತ ಮಸೀಹ್, ಮತ್ತು ಮಹದಿಯರ ಮಂಗಳಮಯ ಯುಗದಲ್ಲಿ ಇಸ್ಲಾಮಿನ ವೃಕ್ಷದ ಈ ಶಾಖೆಗಳು ಹಚ್ಚ ಹಸಿರಾಗಿವೆ ಮತ್ತು ಅಲ್ಲಾಹನ ನೆರವು ಹಾಗೂ ಸಹಾಯ ಮತ್ತು ಅನಿಯಮಿತ ಅನುಗ್ರಹ ಹಾಗೂ ಕಾರುಣ್ಯಗಳಿಂದಾಗಿ ಇದು ಫಲಿತಗೊಳ್ಳುತ್ತಿದೆ. ಮತ್ತು ಫಲ ನೀಡುತ್ತಿದೆ.

ವಾಗ್ದತ್ತ ಮಸೀಹರ ನಿಧನದ ನಂತರ ಜಮಾಅತಿನಲ್ಲಿ ದೈವಿಕ ವಾಗ್ದಾನಗಳನ್ವಯ ಅಹ್ಮದಿಯಾ ಖಿಲಾಫತ್ ಸ್ಥಾಪನೆಗೊಂಡಿತು. ಅವರ ಮಂಗಳಕರವಾದ ಪ್ರತಿ ಕಾಲದಲ್ಲೂ ಇಸ್ಲಾಮಿನ ಪ್ರಚಾರದ ಕಾರ್ಯ ನಿಯಮಿತವಾಗಿ ಮುಂದುವರೆದಿವೆ. ಈ ಶಾಖೆಗಳು ನಿರಂತರವಾಗಿ ಬೆಳೆಯುತ್ತ ಫಲ ನೀಡುತ್ತಾ ಇದೆ. ಪಂಚಮ ಖಿಲಾಫತ್‌ನ ಕ್ರಾಂತಿಕಾರಿ ಯುಗದಲ್ಲಿ "ಇನ್ನೀ ಮಾಅಕ ಯಾ ಮಸ್‌ರೂರ್" ವಾಗ್ದಾನಗಳು ನಾವು ನಮ್ಮ ಕಣ್ಣುಗಳಿಂದ ಪೂರ್ಣ ವೈಭವದಿಂದ ಪೂರ್ಣಗೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಸಮಯದ ಅಭಾವದಿಂದಾಗಿ ಈ ಶಾಖೆಗಳ ಸಂಕ್ಷಿಪ್ತ ವಿವರಗಳನ್ನು ಮಾತ್ರ ವಿವರಿಸ ಬಯಸುತ್ತೇನೆ.

**1. ಧರ್ಮ ಪ್ರಚಾರದ ಮೊದಲ ಶಾಖೆ ಗ್ರಂಥರಚನೆ ಹಾಗೂ ಸಂಕಲನಗಳು:**

ಧರ್ಮ ಪ್ರಚಾರದ ಈ ಐದು ಶಾಖೆಗಳಲ್ಲಿ ಮೊದಲ ಶಾಖೆ "ಗ್ರಂಥ ರಚನೆ ಹಾಗೂ ಸಂಕಲನಗಳು" ಎಂದಾಗಿದೆ. ಈ ಶಾಖೆಯನ್ವಯ ಇಸ್ಲಾಂ ಧರ್ಮದ ಕಾರ್ಯಗಳ ನಿಮಿತ್ತ ಹಝುರತ್ ಮಸೀಹ್ ಮೌಊದ್(ಅ) ರವರ ಕಾಲದಿಂದಲೇ ಅಲ್ಲಾಹನು ಅಸಂಖ್ಯಾತ ಅನುಗ್ರಹಗಳನ್ನು ಸುರಿಸುತ್ತಿದ್ದಾನೆ. ಗ್ರಂಥಗಳು ಮತ್ತು ಸಂಕಲನದ ಕಾರ್ಯಗಳ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ರವರ ಕಾಲದಲ್ಲಿ ವಿರೋಧಿಗಳಿಗೆ ಅವರ 70 ಕಪಾಟುಗಳ (ಅಲ್ಮಾರಿಗಳ) ಮೇಲೆ ಆಕ್ಷೇಪವಿತ್ತು. ಇದೀಗ ಪ್ರಕಟಣೆಗೊಳ್ಳುತ್ತಿರುವ ಸಾಹಿತ್ಯ ಲೋಕದಾದ್ಯಂತ ಪ್ರಕಟವಾಗುತ್ತಿದ್ದು, ಅವು 70 ಕಪಾಟುಗಳೇನು, ಎಪ್ಪತ್ತ ನೂರು ಏನು, 70 ಸಾವಿರವೇನು, ಬದಲು ನಿರ್ಭಯವಾಗಿ ಹೇಳಬಹುದು. 70 ಲಕ್ಷ ಕಪಾಟುಗಳು ಸಹ ಸಾಲದು. ಆ ಗ್ರಂಥಗಳು ಆದದ್ದು ಪಂಚಮ ಖಿಲಾಫತ್ತಿನ ಈ ಮಂಗಳಕರ ಯುಗದಲ್ಲಿ ಇಂದು ಅಲ್ಲಾಹನ ಅನುಗ್ರಹದಿಂದ ಅದರ ಸಂಖ್ಯೆ ಲಕ್ಷಗಳನ್ನು ಮೀರಿದೆ. ಹಲವು ದೇಶಗಳಲ್ಲಿ ಜಮಾಅತ್ ತನ್ನ ಮುದ್ರಣಾಲಯ ಸ್ಥಾಪಿಸಿಕೊಂಡಿದೆ. ಅದರಿಂದ ಪ್ರತಿ ವರ್ಷ ಲಕ್ಷಗಳ ಸಂಖ್ಯೆಯಲ್ಲಿ ಗ್ರಂಥಗಳು ಪ್ರಕಟಗೊಳ್ಳುತ್ತಿವೆ.

ಪಂಚಮ ಖಿಲಾಫತ್ ಅವಧಿಯಲ್ಲಿ ವಾರ್ಷಿಕ ಸುಮಾರು 9 ಲಕ್ಷದಿಂದ 10 ಲಕ್ಷಗಳವರೆಗಿನ ಪುಸ್ತಕಗಳ ಪ್ರಕಟಣೆ ಹೊರ ಬರುತ್ತಿವೆ. ಐಜಚಿಜಿ ಟಜಣ ಮತ್ತು ಜಾಹೀರಾತುಗಳ ಲಕ್ಷಾಂತರ ಸಂಖ್ಯೆ ಅದರ ಹೊರತಾಗಿದೆ. 19 ಕ್ಕಿಂತ ಹೆಚ್ಚು ಹೊಸ ಭಾಷೆಗಳಲ್ಲಿ ಪವಿತ್ರ ಖುರ್‌ಆನ್‌ನ ಭಾಷಾಂತರಗಳು ಮತ್ತು ವ್ಯಾಖ್ಯಾನ ಟಿಪ್ಪಣಿಗಳ ಪ್ರಕಟಣೆ ಪಂಚಮ ಖಿಲಾಫತ್ ಕಾಲದಲ್ಲಾಗಿವೆ. ಅದಾಗ್ಯೂ ಜಮಾಅತಿನ ಮೂಲಕ ಇಲ್ಲಿಯವರೆಗೆ ಪ್ರಕಟಗೊಂಡ ಪವಿತ್ರ ಖುರ್‌ಆನ್‌ನ ಭಾಷಾಂತರವಾದ ಒಟ್ಟು ಸಂಖ್ಯೆ 76 ಆಗಿವೆ. ಸಂಘಟನೆಯ ಸಾಹಿತ್ಯ ಭಾಷಾಂತರದ ಸಂಖ್ಯೆಯಂತೂ ಲಕ್ಷಗಟ್ಟಲೆಯಿಂದ ಕೋಟ್ಯಾಂತರ ಸಂಖ್ಯೆಗೆ ತಲುಪಿದೆ.

**2. ಧರ್ಮ ಪ್ರಚಾರದ ಎರಡನೆಯ ಶಾಖೆ ಜಾಹೀರಾತುಗಳು:**

ಇಸ್ಲಾಂ ಧರ್ಮದ ಪ್ರಚಾರ ಮಾಡುವ ಮತ್ತೊಂದು ಶಾಖೆಯು ಜಾಹೀರಾತುಗಳ ಪ್ರಕಟಣೆಯ ಸರಣಿಯಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಪ್ರಾರಂಭದ ಮೂರು ವರ್ಷಗಳಲ್ಲಿ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಸಾವಿರಾರು ಜಾಹೀರಾತುಗಳನ್ನು ಹೊರಡಿಸಿದ್ದರು. ಅದನ್ನು ಪ್ರಕಟಿಸಿ ತುಂಬಾ ಖುಷಿಪಟ್ಟರು ಇಂದು ಅದರ ಸಂಖ್ಯೆ ಲಕ್ಷಾಂತರದಿಂದ ಕೋಟಿಗೆ ಏರಿದೆ.

ಹುಝೂರೆ ಅನ್ವರ್(ಅತಬಿಅ) ಖಿಲಾಫತ್ ಶತಮಾನೋತ್ಸವ ಜುಬಿಲಿ ಸಂದರ್ಭದಲ್ಲಿ ಪರಿಚಯಾಧಾರಿತ ಜಾಹೀರಾತುಗಳು ಎಲ್ಲಾ ದೇಶಗಳ ಕನಿಷ್ಠ ಹತ್ತು ಪ್ರತಿಶತ ಭಾಗದವರೆಗೆ ತಲುಪುವಂತೆ ನಿರ್ದೇಶನ ಮಾಡಿದ್ದರು. ಅದು ಕಾರ್ಯಗತವಾದ ಪರಿಣಾಮವಾಗಿ ಜಗತ್ತಿನ ವಿವಿಧ ಭಾಷೆಗಳಲ್ಲಿ ಕೋಟಿ ಕೋಟಿ ಜಾಹೀರಾತುಗಳ ಮುಖಾಂತರ ಕೋಟ್ಯಾಂತರ ಜನರಿಗೆ ಇಸ್ಲಾಮ್ ಅಹ್ಮದಿಅತ್‌ನ ಸಂದೇಶ ತಲುಪಿದೆ. ಪತ್ರಿಕೋದ್ಯಮದ ಒಂದು ಶಾಖೆಯು ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು. ಆದ್ದರಿಂದ ಜಮಾಅತಿನಲ್ಲಿ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಪ್ರಕಟವಾಗುತ್ತಿವೆ. ಇತರ ಪತ್ರಿಕೆಗಳು ಸಹ ಸಾವಿರಾರು ಪಕ್ಷದ ಲೇಖನಗಳನ್ನು ಪ್ರಕಟಿಸುವುದನ್ನು ಮುಂದುವರೆಸಿದೆ. ಅದರ ಮೂಲಕ ಲಕ್ಷಾಂತರ ಜನರಿಗೆ ಅಹ್ಮದಿಯಾ ಇಸ್ಲಾಮಿನ ಸಂದೇಶವು ತಲುಪುತ್ತಿದೆ.

21ನೇ ಶತಮಾನದಲ್ಲಿ ಪಂಚಮ ಖಿಲಾಫತ್ ಅವಧಿಯಲ್ಲಿ ಪತ್ರಿಕೋದ್ಯಮವು ಮಾಧ್ಯಮದ ರೂಪದ ಪಡೆದಿದೆ. ಉದಾಹರಣೆಗೆ ಖಿ.ಗಿ. ರೇಡಿಯೋ ಚಾನಲ್ ಮೂಲಕ ಇಸ್ಲಾಂ ಪ್ರಚಾರದ ಕಾರ್ಯ ಜಾರಿಯಲ್ಲಿದೆ. ಒಖಿಂ ಯ 8 ಚಾನಲ್‌ಗಳು ಮತ್ತು 27 ರೇಡಿಯೋ ಖಣಚಿಣುಂಟ ಗಳು ಹಗಲಿರುಳು ಜಗತ್ತಿನ ವಿವಿಧ ಭಾಷೆಗಳಲ್ಲಿ ಇಸ್ಲಾಂ ಅಹ್ಮದಿಅತ್ತಿನ ಸಂದೇಶ ಜಗತ್ತಿನೆಲ್ಲೆಡೆಗೆ ತಲುಪಿಸುತ್ತಿದೆ.

**3. ಧರ್ಮ ಪ್ರಚಾರದ ಮೂರನೆ ಶಾಖೆ (ಅತಿಥಿಗಳ ಆಗಮನ ಸಭೆ ಭೇಟಿಗಳು)**

ಇಸ್ಲಾಂ ಧರ್ಮವನ್ನು ಹರಡುವ ಮೂರನೆ ಶಾಖೆ ಅತಿಥಿಗಳ ಆಗಮನಕ್ಕೆ ಸಂಬಂಧಿಸಿದೆ. ಈ ವಿಷಯದಲ್ಲಿ ಹಝುರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಏಳು ವರ್ಷಗಳಲ್ಲಿ 60,000 ಕ್ಕೂ ಹೆಚ್ಚು ಅತಿಥಿಗಳು ಬಂದಿದ್ದಾರೆ. (ಫತಹ್ ಇಸ್ಲಾಂ, ರೂ. ಖ. ಸಂ 3, ಪುಟ 14)

ಎಲ್ಲಾ ಖಲೀಫರಂತೆ ಹಝ್‌ರತ್ ಖಲೀಫತುಲ್ ಮಸೀಹ್ ಪಂಚಮ (ಅಬಿಅ) ರವರು ಹಗಲಿರುಳಿನ ಕಾರ್ಯಗಳ ಒಂದು ಅಂಶ. ಜಮಾಅತ್ ಬಂಧುಗಳು ಮತ್ತು ಇತರ ಕಾರಣಗಳಿಂದ ಆಗಮಿಸುವ ಅಹ್ಮದಿಯೇತರ ಹಾಗೂ ಗಣ್ಯ ವ್ಯಕ್ತಿಗಳೊಡನೆ ಭೇಟಿ ಮಾಡುವ ಕಾರ್ಯವಿದೆ. ಇದರಲ್ಲಿ ಪ್ರತಿವರ್ಷ ಜಲ್ಸ ಸಾಲಾನ ಬ್ರಿಟಾನಿಯಾ (ಗ.ಏ) ಮತ್ತು ಇತರ ದೇಶಗಳ ಜಲ್ಸ ಸಾಲಾನಗಳಲ್ಲಿ ಆಗಮಿಸುವ ಆಧ್ಯಾತ್ಮಿಕ ಹಕ್ಕಿಗಳಲ್ಲದೇ ವರ್ಷದ ನಡುವೆ ಆಗಮಿಸುವ ಭಕ್ತರು ಸಹ ಸೇರಿದ್ದಾರೆ.

ಖಾದಿಯಾನಿನಲ್ಲಿ 1891 ರಲ್ಲಿ ಆದ ಜಲ್ಸ ಸಾಲಾನದ ಬುನಾದಿ ಹಝ್‌ರತ್ ಮಸೀಹ್ ಮೌಊದ್(ಅ) ಹಾಕಿದ್ದರು, ಅದು ಈಗ 80 ಕ್ಕಿಂತ ಹೆಚ್ಚು ದೇಶಗಳಲ್ಲಿ ಜರಗುತ್ತಿದೆ. ಅಲ್ಲೆಲ್ಲ ಲಂಗರ್ ಮಸೀಹ್ ಮೌಊದ್ (ಮಸೀಹ್ ಮೌಊದರ ಅತಿಥಿಗೃಹ) ಏರ್ಪಡಿಸಲಾಗುತ್ತದೆ. ಈ ಸಮ್ಮೇಳನಗಳಲ್ಲಿ ಭಾಗವಹಿಸುವ ಅತಿಥಿಗಳ ಸಂಖ್ಯೆ ಲಕ್ಷಗಳ ಸಂಖ್ಯೆಯಲ್ಲಿರುತ್ತವೆ.

ಅಹ್ಮದಿಯಾ ಜಮಾಅತ್ ಸ್ಥಾಪಕರು ಖಾದಿಯಾನ್‌ನ ಅಂದಿನ

ಬಡತನದ ಕಾಲದಲ್ಲಿ 1882 ರಲ್ಲಿ ಮನೆಯನ್ನು ವಿಸ್ತರಿಸಲು ದಿವ್ಯವಾಣಿಯಾಯಿತು. ಇದು ಅತಿಥಿಗಳ ಆಗಮನವನ್ನು ಸೂಚಿಸುತ್ತದೆ. ಹುಝೂರ್(ಅ) ರ ಆ ಸಮಯದಲ್ಲಿ ಅವರ ಆರ್ಥಿಕ ಸಾಮರ್ಥ್ಯಧ ಪ್ರಕಾರ ಮೂರು ಚಪ್ಪರಗಳು ಮಾತ್ರ ಮಾಡಬಹುದಾಗಿತ್ತು. ಆದರೆ ಅದರ ನಂತರ ಹಝ್ರತ್ ಮಸೀಹ್ ಮೌಊದ್(ಅ) ಅತಿಥಿಗಳಿಗಾಗಿ ನಿರ್ಮಿಸಲ್ಪಟ್ಟ ವಿಸ್ತೃತ ಸುಂದರ ಮನೆಗಳ ನೋಟವು ಯಾವಾಗಲೂ ಪ್ರಪಂಚದಾದ್ಯಂತ ಮುಂದುವರೆದಿದೆ. ಪಂಚಮ ಖಿಲಾಫತ್ತಿನ ಈ ವಿಸ್ತರಣೆಯು ವಿಶೇಷವಾಗಿ ಗ್ರೇಟ್ ಬ್ರಿಟನ್, ಅಮೇರಿಕಾ, ಕೆನಡಾ, ಜರ್ಮನಿ, ಪಾಕಿಸ್ತಾನ ಮತ್ತು ಭಾರತದಲ್ಲಿ ಮುಂದುವರೆಯಿತು. ಆದರೆ ವಿಶೇಷವಾಗಿ ಪಂಚಮ ಖಿಲಾಫತ್ ಅವಧಿಯಲ್ಲಿ ಪ್ರಕಟಗೊಂಡ ಅಲ್ಲಾಹನ ಅನುಗ್ರಹಗಳ ಉದಾಹರಣೆ ಮೊದಲೆಲ್ಲೂ ಕಾಣಸಿಗದು.

**4. ಧರ್ಮ ಪ್ರಚಾರದ 4ನೇ ಶಾಖೆ (ಪತ್ರಗಳು):**

ಇಸ್ಲಾಂ ಪ್ರಕಟಣೆಯ ನಾಲ್ಕನೇ ಶಾಖೆ ಪತ್ರಗಳಾಗಿವೆ. ಹಝ್ರತರ್ ಅಖದಸ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಇಲ್ಲಿಯವರೆಗೆ, ಮೇಲೆ ತಿಳಿಸಿದ ಅವಧಿಯಲ್ಲಿ ತೊಂಭತ್ತು ಸಾವಿರಕ್ಕೂ ಹೆಚ್ಚು ಪತ್ರಗಳು ಸ್ವೀಕರಿಸಲಾಗಿದೆ. ಅವುಗಳಿಗೆ ಉತ್ತರಿಸಲಾಗಿದೆ. (ಫತಹ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ-3, ಪುಟ-23)

ಹಝ್ರತ್ ಮಸೀಹ್ ಮೌಊದ್(ಅ) ನಂತರ ಅಹ್ಮದಿಯಾ ಖಲೀಫರ ಎಲ್ಲಾ ಅವಧಿಗಳಲ್ಲಿ, ಪತ್ರಗಳ ಮೂಲಕ ಸಂವಹನ, ಶಿಕ್ಷಣ ಮತ್ತು ಅಲ್ಲಾಹನೆಡೆಗೆ ಕರೆ ನೀಡುವ ಕಾರ್ಯ ಎಂದಿನಂತೆ ಪ್ರಗತಿಶೀಲವಾಗಿದೆ.

ಪಂಚಮ ಖಿಲಾಫತ್ ಅವಧಿಯಲ್ಲಿ ಜಮಾಅತ್‌ನ ವಿಸ್ತರಣೆಯಲ್ಲಿ ಪತ್ರಿಕೆ, ಪುಸ್ತಕ ಇತ್ಯಾದಿ ಕಾರ್ಯಗಳಲ್ಲಿ ಅಸಾಧಾರಣ ಬೆಳವಣಿಗೆ ಕಂಡು ಬರುತ್ತಿದೆ. ಖಾಸಗಿ ಕಾರ್ಯದರ್ಶಿಯ ಕಚೇರಿಯಲ್ಲಿ ವಿವಿಧ ಪತ್ರಗಳನ್ನು ಹೊಂದಿರುವ ಮೇಲ್‌ಗಳ ಸಂಖ್ಯೆ ವಾರ್ಷಿಕವಾಗಿ ಒಂದು ಮಿಲಿಯನ್‌ಗಿಂತಲೂ ಹೆಚ್ಚಾಗಿದೆ. ಇದಲ್ಲದೆ ವಿವಿಧ ದೇಶಗಳು ಮತ್ತು ಸಂಸ್ಥೆಗಳಿಂದ ಬರುವ ವರದಿಗಳು ಸಹ ಇವೆ.

**(A day in the Life of Hazrat Khalifatul Masih aba (youtube/mtaonline)**

ನಿಶ್ಚಯವಾಗಿಯೂ ಸರ್ವಶಕ್ತನಾದ ಅಲ್ಲಾಹನ ಕಾಣದ ಹಸ್ತವು ಖಿಲಾಫತ್ ಅನ್ನು ನಿರಂತರವಾಗಿ ಬೆಂಬಲಿಸುತ್ತಿದೆ ಎಂಬುದಕ್ಕೆ ಇದು ಪುರಾವೆಯಾಗಿದೆ.

ಹುಝೂರೆ ಅನ್ವರ್(ಅಬಿಅ) ಖಿಲಾಫತ್‌ನ ಪೀಠ ಅಲಂಕರಿಸಿದ ನಂತರ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವ ಸಲುವಾಗಿ ವಿಶ್ವದ ಪ್ರಮುಖ ರಾಜರು ಮತ್ತು ನಾಯಕರನ್ನು ಪತ್ರಗಳ ಮೂಲಕ ಸಂಬೋಧಿಸುವ ಅವಕಾಶವನ್ನು ಪಡೆದರು. ಇದು ಪಂಚಮ ಖಿಲಾಫತ್ ಅವಧಿಯ ಒಂದು ಅತಿದೊಡ್ಡ ಸಾಧನೆ ಹಾಗೂ ಐತಿಹಾಸಿಕ ಸತ್ಯವಾಗಿದೆ. ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು (ಅಬಿಅ) ಜಾಗತಿಕ ಬಿಕ್ಕಟ್ಟುಗಳ ಬಗ್ಗೆ ವಿಶ್ವದ ಆಡಳಿತಗಾರರಿಗೆ ಎಚ್ಚರಿಕೆ ನೀಡಿದರು. ಈ ಹಿನ್ನಲೆಯಲ್ಲಿ ಶಾಂತಿ ಸ್ಥಾಪನೆಗೆ ಗಂಭೀರ ಸಹಕಾರ ಮತ್ತು ಪ್ರಯತ್ನಗಳಿಗೋಸ್ಕರ ಪತ್ರ ಬರೆಯಲು ವ್ಯವಸ್ಥೆ ಮಾಡಿದರು.

**5. ಧರ್ಮ ಪ್ರಚಾರದ 5ನೇ ಶಾಖೆ (ಅನುಯಾಯಿಗಳು ಮತ್ತು ಶಿಷ್ಯಂದಿರು)**

ಇಸ್ಲಾಂ ಧರ್ಮದ ಪ್ರಚಾರದ 5ನೇ ಶಾಖೆ ಅನುಯಾಯಿಗಳು ಹಾಗೂ ಶಿಷ್ಯಂದಿರ ಸರಣಿಯಾಗಿದೆ. 40 ಜನರುಗಳನ್ನೊಂಡ ಕಾರವಾನ್ ಹಝ್ರತ್ ಮಸೀಹ್ ಮೌಊದ್(ಅ) ರವರ ಜೀವನದಲ್ಲಿಯೇ 4 ಲಕ್ಷವನ್ನು ದಾಟಿತ್ತು. 27 ಡಿಸೆಂಬರ್ ಶುಕ್ರವಾರದಂದು ಜಲ್ಸ ಸಾಲಾನ ಸಂದರ್ಭದಲ್ಲಿ ಹಝ್ರತ್ ಅಖದಸ್ ತಮ್ಮ ಭಾಷಣದಲ್ಲಿ ಹೇಳಿದ್ದರು. "ಇಷ್ಟು ಪ್ರಮಾಣದ ನಿರಾಕರಣೆ ಮತ್ತು ತಕ್ಫೀರ್ ಹಾಗೂ ವಿರೋಧಿಗಳ ಹಗಲಿರುಳು ಪ್ರಯತ್ನಗಳ ಹೊರತಾಗಿಯೂ ಈ ಗುಂಪು ಬೆಳೆಯುತ್ತಲೇ ಇರುವುದು ಸರ್ವಶಕ್ತನಾದ ಅಲ್ಲಾಹನ ದೊಡ್ಡ ಪವಾಡವಾಗಿದೆ. ಆ ಸಮಯದಲ್ಲಿ ನಮ್ಮ ಜಮಾಅತಿನ ಸಂಖ್ಯೆ 4 ಲಕ್ಷಕ್ಕಿಂತಲೂ ಹೆಚ್ಚಾಗಬಹುದು. ಇದೊಂದು ದೊಡ್ಡ ಪವಾಡವಾಗಿದೆ. ನಮ್ಮ ವಿರೋಧಿಗಳು ಹಗಲಿರುಳು ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಶ್ರಮವಹಿಸಿ ನಾನಾ ತರಹದ ಯೋಜನೆಗಳನ್ನು ಯೋಚಿಸುತ್ತಿದ್ದಾರೆ, ಈ ಸಂಘಟನೆಯನ್ನು ಮಟ್ಟ ಹಾಕಲು ಪೂರ್ಣ ಶಕ್ತಿಯನ್ನು ಉಪಯೋಗಿಸುತ್ತಿದ್ದಾರೆ. ಆದರೆ ಅಲ್ಲಾಹನು ನಮ್ಮ ಜಮಾಅತನ್ನು ಹೆಚ್ಚಿಸುತ್ತಲೇ ಇದ್ದಾನೆ. (ಮಲ್ಫೂಝಾತ್, ಸಂಪುಟ-5, ಪುಟ-374)

ಇಂದು ಪಂಚಮ ಖಿಲಾಫತ್ ಅವಧಿಯಲ್ಲಿ ಅಹ್ಮದಿಯಾ ಜಮಾಅತ್ 213 ದೇಶಗಳಲ್ಲಿ ಸ್ಥಾಪನೆಗೊಂಡಿದೆ. ಅದರಲ್ಲಿ 38 ದೇಶಗಳು ಪಂಚಮ ಖಿಲಾಫತ್ ಅವಧಿಯಲ್ಲಿ ಸೇರಿವೆ. ಮೊದಲು 40 ಇದ್ದ ಸಂಖ್ಯೆ ನೂರುಗಳಲ್ಲಿ ಪರಿವರ್ತನೆಗೊಂಡಿತು. ಮತ್ತೆ ಸಾವಿರ ಮತ್ತೆ ಲಕ್ಷ ಇದೀಗ ಅಲ್ಲಾಹನ ಅನುಗ್ರಹದಿಂದ ಕೋಟಿಗಳ ಸಂಖ್ಯೆಗೆ ಪ್ರವೇಶ ಮಾಡಿದೆ. ಕೇವಲ ಪಂಚಮ ಖಿಲಾಫತ್ ಅವಧಿಯಲ್ಲೇ 20 ವರ್ಷಗ ಮಂಗಳಕರ ಅವಧಿಯಲ್ಲಿ ಸಮೀಪ ಒಂದು ಕೋಟಿಯ ಸಂಖ್ಯೆಯಲ್ಲಿ ಸಜ್ಜನ ಸ್ವಭಾವದ ಜನರು ಅಹ್ಮದಿಯತ್ತಿಗೆ ಪ್ರವೇಶಿಸಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಕೇವಲ ವರ್ಷ 2022-23 ರಲ್ಲೇ ಬೈಅತ್ ಮಾಡಿರುವವರ ಸಂಖ್ಯೆ 2 ಲಕ್ಷ 17 ಸಾವಿರ 168 ಆಗಿದೆ. 1016 ಸ್ಥಳಗಳಲ್ಲಿ ಮೊದಲ ಬಾರಿಗೆ ಅಹ್ಮದಿಅತ್‌ನ ಗಿಡವು ನೆಡಲ್ಪಟ್ಟಿದೆ. ಲೋಕದಾದ್ಯಂತ 330 ಹೊಸ ಜಮಾಅತ್‌ಗಳು ಸ್ಥಾಪನೆಗೊಂಡಿವೆ. ಹೊಸ ಮಸೀದಿಗಳು ಮತ್ತು ಜಮಾಅತಿಗೆ ಸೇರಿಸಲ್ಪಟ್ಟ ಮಸೀದಿಗಳ ಸಂಖ್ಯೆ 185 ಆಗಿದೆ. ಅಲ್ಲಾಹನ ಅನುಗ್ರಹದಿಂದ ಸದರಿ ವರ್ಷ 124 ಮಿಷನ್ ಹೌಸ್ ಹೆಚ್ಚುವರಿಯಾಗಿ ದೊರೆತಿವೆ. (ಹುಝೂರ್(ಅತಬಿಅ) ರವರ ಸಂಬೋಧನೆ ಸಂದರ್ಭ ಜಲ್ಸ ಸಾಲಾನ ಯು.ಕೆ 2023)

**"ನಾನು ನಿನ್ನ ಸಂದೇಶವನ್ನು ಭೂಮಿಯ ಮೂಲೆ ಮೂಲೆಯವರೆಗೆ ತಲುಪಿಸುತ್ತೇನೆ."**

ಹಝ್ರತ್ ಮಸೀಹ್ ಮೌಊದ್(ಅ) ರನ್ನು ಅಲ್ಲಾಹನು 1898 ರಂದು ದಿವ್ಯವಾಣಿ ಮೂಲಕ ಸಂಬೋಧಿಸಿ ಹೇಳಿದನು". ನಾನು ನಿನ್ನ ಸಂದೇಶವನ್ನು ಭೂಮಿಯ ಮೂಲೆ ಮೂಲೆಯವರೆಗೆ ಸಾಗಿಸುತ್ತೇನೆ." ಹಝ್ರತ್ ಮಸೀಹ್ ಮೌಊದ್(ಅ) ರ ಈ ಒಂದೇ ದಿವ್ಯವಾಣಿ ಅವರ ಸತ್ಯತೆ ಸಾಬೀತುಪಡಿಸಲು ಸಾಕಾಗಿದೆ. ಅಹ್ಮದಿಅತ್‌ನ ಸಂದೇಶ ತಲುಪದೆ ಲೋಕದ ಯಾವ ಭಾಗವೂ ಉಳಿದಿಲ್ಲ. ಅಹ್ಮದಿಅತ್ತಿನ ಪ್ರಕಾಶ ಇಲ್ಲದೇ ಇರುವ ಯಾವ ಮೂಲೆಯೂ ಉಳಿದಿಲ್ಲ. ಈ ದಿವ್ಯವಾಣಿಯ ಪೂರ್ತಿ ಅಲ್ಲಾಹ ಸುವಾರ್ತೆ, **"ವ ಅಶ್ರಕತಿಲ್ ಅರ್‌ಝು ಬಿನೂರಿ ರಬ್ಬಿಹ"** ಅನ್ವಯ ಪೂರ್ಣಗೊಂಡಿದೆ.

ಒಬ್ಬ ಅಹ್ಮದಿಯೇತರ ಜಮಾಅತಿನ ಮೌಲ್ವಿ ಹೇಳುತ್ತಾರೆ: ನಾವು ಮಲೇಶಿಯಾಗೆ ಹೋದೆವು. ಅಲ್ಲಿ ಖಾದಿಯಾನಿ, ನಾವು ಇಂಡೋನೇಷ್ಯಾಗೆ ಹೋದೆವು ಅಲ್ಲಿ ಖಾದಿಯಾನಿ, ಜಗತ್ತಿನ ಕೊನೆಯ ಮೂಲೆಯಾದ ದಕ್ಷಿಣದ ಕೇಪ್‌ಟೌನ್ (ದಕ್ಷಿಣ ಆಫ್ರಿಕಾ) ದ ಅದು ಕೊನೆಯ ನಗರ ಅಲ್ಲೂ ಖಾದಿಯಾನಿ, ನಮ್ಮ ತಂದೆಯರು ಅಲ್ಲಿಗೆ ಹೋಗಿದ್ದರು, ನಮ್ಮ ಸಹೋದರ ಜಾಮೀದ್ ಹೋಗಿದ್ದನು ಉತ್ತರದ ಕೊನೆಯ ಭಾಗ ಅಲ್ಲೂ ಖಾದಿಯಾನಿ, ಲೋಕದ ಪೂರ್ವ ಭಾಗದ ಕೊನೆಯ ಮೂಲೆ ಜಝಾಮರ್ ಫಿಜಿ ಅಲ್ಲೂ ಖಾದಿಯಾನಿ. ಲೋಕದ ಪಶ್ಚಿಮ ಮೂಲೆ ಘಾನಾದಲ್ಲೂ ಖಾದಿಯಾನಿ"

(ಕಿತಾಬ್ ಅಲ್‌ಫಝಲ್ ಆನ್‌ಲೈನ್ "ನಾನು ನಿನ್ನ ಸಂದೇಶ ಭೂಮಿಯ ಮೂಲೆ ಮೂಲೆಯವರೆಗೆ ಸಾಗಿಸುತ್ತೇನೆ.")

ಅಲ್ಲಾಹನ ಅನುಗ್ರಹದಿಂದ ಜಮಾಅತ್‌ನ ಸಂದೇಶವನ್ನು ಜಗತ್ತಿನ ಕೊನೆಯ ಭಾಗಕ್ಕೆ ತಲುಪಿಸುವ ಮಹತ್ತರವಾದ ಪಾತ್ರವನ್ನು ಸ್ವಯಂ ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು (ಅಬಿಅ) ಈ ಕಾಲದಲ್ಲಿ ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಅವರ ಉಪದೇಶಗಳು ಮತ್ತು ಭಾಷಣಗಳು, ವಾರ್ಷಿಕ ಸಭೆಯ ಭಾಷಣಗಳು, ಶಿಬಿರದಲ್ಲಿ ಸಭೆಗಳು, ವಿವಿಧ ದೇಶಗಳ ಭೇಟಿಗಳು, ಪತ್ರಿಕಾಗೋಷ್ಠಿಗಳು, ಶಾಂತಿ ಸಮ್ಮೇಳನಗಳು, ಪ್ರಪಂಚದ ಪಾರ್ಲಿಮೆಂಟುಗಳ ಭಾಷಣಗಳು, ಈ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಜಗತ್ತಿನಲ್ಲಿ ಸ್ಥಾಪನೆಗೊಂಡ 11 ಜಮಾಅತ್ ವಿಶ್ವವಿದ್ಯಾನಿಲಯಗಳಿಂದ ವಿದ್ಯೆ ಪಡೆದಿರುವ ಮುರಬ್ಬಿ, ವಾಖಿಫೀನ್ ನೌ ಮತ್ತು ವಾಖಿಫೀನ್ ಜ್ಜಿಂದಗಿ ಈ ಕಾರ್ಯದಲ್ಲಿ ಸಹಾಯಕರಾಗುವ ಕರ್ತವ್ಯವನ್ನು ಪೂರೈಸುತ್ತಿದ್ದಾರೆ.

**ಜನಸೇವೆ:**

ಜನಸೇವಾ ಕ್ಷೇತ್ರದಲ್ಲಿ ಅಲ್ಲಾಹನ ಕೃಪೆಯಿಂದ ಜಮಾಅತಿಗೆ ಮನ್ನಣೆ ಯಾರಿಂದಲೂ ಮರೆಯಾಗಿಲ್ಲ. ನುಸ್ರತ್ ಜಹಾಂ ಅಡಿಯಲ್ಲಿ 12 ದೇಶಗಳ 37 ಆಸ್ಪತ್ರೆಗಳು ಮತ್ತು ಕ್ಲಿನಿಕ್‌ಗಳಲ್ಲಿ 50ಕ್ಕೂ ಹೆಚ್ಚು ವೈದ್ಯರು ಜನರ ಸೇವೆಯ ಪವಿತ್ರ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಪಂಚಮ ಖಿಲಾಫತ್‌ನಲ್ಲಿ 300 ಕ್ಕಿಂತ ಹೆಚ್ಚು ಶಾಖೆಗಳನ್ನು ಸ್ಥಾಪಿಸಲಾಯಿತು. ಮತ್ತು ಈಗ ಈ ಯೋಜನೆ ಅಡಿಯಲ್ಲಿ 680 ಕ್ಕೂ ಹೆಚ್ಚು ಶಾಖೆಗಳು ಬಡ ದೇಶಗಳಲ್ಲಿ ಜ್ಞಾನದ ಬೆಳಕನ್ನು ಹರಡುತ್ತಿವೆ. ಊಣಟಚಿಛಟಿಣಥಿ ಈಟಿಛಿ ಅನ್ನು 60 ಕ್ಕೂ ಹೆಚ್ಚು ದೇಶಗಳಲ್ಲಿ ನೊಂದಾಯಿಸಲಾಗಿದೆ ಮತ್ತು ವಿಶ್ವಾದ್ಯಂತ ಮಾನವೀಯತೆಗೆ ಅಸಾಧಾರಣ ಸೇವೆಯ ಕೊಡುಗೆ ನೀಡಿದೆ.

**ಸ್ವಪ್ನ ದರ್ಶನಗಳ ಮೂಲಕ ಅಹ್ಮದಿಅತ್ ಸ್ವೀಕಾರದ ಘಟನೆಗಳು:**

ದೈನಿಕ ಅನುಗ್ರಹಗಳ ಅವತರಣಿಕೆ ಅಹ್ಮದಿಅತ್ ಬೆಳವಣಿಗೆಗೆ ಒಂದು ಕಾರಣ. ಪ್ರಚಾರ ಕಾರ್ಯಗಳಲ್ಲಿ ದೈವಿಕ ನೆರವು ಅಥವಾ ಸಹಾಯವಾಗಿದ್ದರೆ, ಅಹ್ಮದಿಅತ್ ಸ್ವೀಕರಕ್ಕಾಗಿ, ಸ್ವಪ್ನ ದರ್ಶನವು ಅಲ್ಲಾಹನ ಮಾರ್ಗದರ್ಶನ ಇನ್ನೊಂದು ಕಾರಣವಾಗಿದೆ. ಇಂತಹ ನೂರಾರು ಘಟನೆಗಳು ಹುಝೂರೆ ಅನ್ವರ್ ತಮ್ಮ ಖುತುಬಗಳಲ್ಲಿ ಮತ್ತು ಭಾಷಣಗಳಲ್ಲಿ ವಿವರಿಸಿದ್ದುಂಟು. ಅವುಗಳಿಂದ ಒಂದು ಘಟನೆ ಪ್ರಸ್ತುತಪಡಿಸುತ್ತೇನೆ!

ಗಿನಿ ಬಿಸಾವು ಎಂಬುದು ಆಫ್ರಿಕಾದ ದೂರದಲ್ಲಿರುವ ಒಂದು ದೇಶವಾಗಿದೆ. ಅಲ್ಲಿ ಅಬ್ದುಲ್ಲ ಸಾಹಿಬ್ ಮೊದಲು ಓರ್ವ ಕ್ರಿಸ್ತ ಮಿತ್ರರಾಗಿದ್ದರು. ಅವರು ಹೇಳುತ್ತಾರೆ.

ಕೆಲ ದಿನಗಳ ಹಿಂದೆ ಅವರು ಒಂದು ಸ್ವಪ್ನವನ್ನು ಕಂಡಿದ್ದರು.

ಬಿಳಿಯಾದ ಗಡ್ಡ ಮತ್ತು ಪೇಟಧಾರಿಯಾದ ಓರ್ವ ವ್ಯಕ್ತಿ ಜನರನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆ. ಸಂಪೂರ್ಣ ಮೌನನೊಂದಿಗೆ ಜನರು ಅವರ ಭಾಷಣ ಆಲಿಸುತ್ತಿದ್ದಾರೆ. ಈ ವ್ಯಕ್ತಿಯ ಸಂಬೋಧನೆಯ ಶೈಲಿ ತುಂಬಾ ಸರಳ ಹಾಗೂ ಇತರ ಜನರಿಗಿಂತ ಭಿನ್ನವಾಗಿತ್ತು. ಅವರು ಕಣ್ಣು ತೆರೆದಾಗ, ಅವರಿಗೆ ಏನೂ ತೋಚಲಿಲ್ಲ ಮತ್ತು ಮರೆತುಬಿಟ್ಟರು. ಸ್ವಲ್ಪ ದಿನಗಳ ನಂತರ ಮತ್ತದೇ ಸ್ವಪ್ನ ಮರುಕಳಿಸಿತು ಅವರ ಪುಸ್ತಕದಲ್ಲಿ ಈ ಮುಖ ಮನದಟ್ಟಾಯಿತು. ಮತ್ತೆ ಮೂರನೇ ಸಲ ಈ ಸ್ವಪ್ನ ಬಂತು, ಅವರು ಈ ವ್ಯಕ್ತಿ ಯಾರು ಎಂದು ಹುಡುಕಲು ಪ್ರಯತ್ನ ಪ್ರಾರಂಭಿಸಿದರು. ಆದರೆ ವಿಳಾಸ ದೊರೆಯಲಿಲ್ಲ. ಒಂದು ದಿನ ಆಕಸ್ಮಾತ್ತಾಗಿ ಊರಿನ ಸಮೀಪದಲ್ಲಿರುವ ಫರೀಮ್ (ಈಚಿಡಿಟು) ನಗರದಲ್ಲಿ ನಮ್ಮ ಮಸೀದಿ ಇದೆ ಅದು ಶುಕ್ರವಾರದ ದಿನವಾಗಿತ್ತು. ಬಂಧುಗಳು ಒಬಿಂ ಮೇಲೆ ನನ್ನ ಖುತುಬ ಆಲಿಸುತ್ತಿದ್ದರು. ಅವರು ಹೇಳುತ್ತಾರೆ. ನನ್ನನ್ನು ನೋಡುತ್ತಲೇ ಅವರು ತಕ್ಷಣ ಮೌಲ್ವಿ ಸಾಹೇಬರೊಂದಿಗೆ ಕೇಳಿದರು. ಖುತುಬ ಕೊಡುತ್ತಿರುವ ವ್ಯಕ್ತಿ ಯಾರು? ಅವರು ಹೇಳಿದರು. ಇವರು ನಮ್ಮ ಖಲೀಫರು ಒಟ್ಟಿನಲ್ಲಿ ಅವರು ಮೌನವಾಗಿ ಕುಳಿತು ಖುತುಬ ಆಲಿಸಿದರು, ಖುತುಬ ಜುಮುಅ ನಂತರ ಬಂಧುಗಳೊಡನೆ ನಮಾಝ್ ನಿರ್ವಹಿಸಿದರು. ನಮಾಝ್ ನಿರ್ವಹಿಸಿದ ನಂತರ ತಕ್ಷಣ ಎದ್ದು ನಿಂತು ಎಲ್ಲರ ಮುಂದೆ ಹೇಳಿದರು. ನಾನು ಇಂದು ಇಸ್ಲಾಂ ಧರ್ಮ ಸ್ವೀಕರಿಸುತ್ತೇನೆ. ಮತ್ತು ಹೇಳಿದರು. ನನಗೆ ಅಲ್ಲಾಹನು ಮೂರು ಸಲ ಈ ವ್ಯಕ್ತಿಯನ್ನು ಸ್ವಪ್ನದಲ್ಲಿ ತೋರಿಸಿದ್ದಾನೆ, ಅದರ ಪ್ರಭಾವ ನನ್ನ ಆತ್ಮವನ್ನು ಆವರಿಸಿತ್ತು. ನಾನು ಎಷ್ಟೋ ದಿನಗಳಿಂದ ಈ ವ್ಯಕ್ತಿಯ ಹುಡುಕಾಟದಲ್ಲಿದ್ದೆ. ಆದರೆ ಇಂದು ಆಕಸ್ಮಿಕವಾಗಿ ನಿಮ್ಮ ಮಸೀದಿಗೆ ಬಂದೆ ಮತ್ತು ಖಲೀಫರನ್ನು ಕಂಡಿದ್ದೇನೆ. ಈ ಮುಖ ನಾನು ಸ್ವಪ್ನದಲ್ಲಿ ಕಂಡಿದ್ದೆ ಆಗಿದೆ. ನಾನು ಸ್ವಪ್ನದಲ್ಲಿ ಕಂಡಿದ್ದ ದೃಶ್ಯವೇ ಇಲ್ಲಿದೆ, ಜನರು ಸಂಪೂರ್ಣ ಮೌನದಿಂದ ಕುಳಿತು ಭಾಷಣ ಆಲಿಸುತ್ತಿದ್ದಾರೆ. ಕಾರಣ ನಾನು ಇಸ್ಲಾಂ ಅಹ್ಮದಿಅತ್ ಸ್ವೀಕರಿಸುತ್ತೇನೆ.

ಆಸ್ಮಾನ್ ಪರ್ ದಾವತೆ ಹಖ್ ಕೇ ಲಿಏ ಇಕ್ ಜೋಷ್ ಹೈ
ಹೊ ರಹಾ ಹೈ ನೇಕ್ ತಬ್‌ಓಂ ಪರ್ ಫರಿಶ್ತೊಂ ಕಾ ಉತಾರ್

ಅಂದರೆ: ಆಕಾಶದಲ್ಲಿ ಸತ್ಯದ ಆಮಂತ್ರಣಕ್ಕಾಗಿ ಒಂದು ಉತ್ಸಹವಿದೆ. ಸಜ್ಜನರ ಮೇಲೆ ದೇವದೂತರು ಅವತರಿಸುತ್ತಿದ್ದಾರೆ.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ನುಡಿದರು: "ಹಝ್ರತ್ ಮಸೀಹ್ ಮೌಊದ್(ಅ) ರ ವಿರುದ್ಧದ ವಿರೋಧ ಎಲ್ಲಿ ಎಲ್ಲಿಯವರೆಗೆ ತಲುಪಿದೆ. ಮತ್ತು ಅದೇ ಸಮಯದಲ್ಲಿ ಅವರಿಗೆ ಬೆಂಬಲದ ದರ್ಶನಗಳು ಹೇಗೆ ತೋರಿಸುತ್ತಿದ್ದಾನೆ. ಇದು ಮಾನವ ನಿರ್ಮಿತ ಜಮಾಅತ್ ಆಗಿದ್ದರೆ, ಎಷ್ಟೆಲ್ಲ ಜಮಾಅತಿನ ವಿರುದ್ಧ ವಿರೋಧವು ಜಮಾಅತ್ ಸ್ಥಾಪನೆಗೊಂಡ ಮೊದಲ ದಿನದಿಂದ ಹಝ್ರತ್ ಮಸೀಹ್ ಮೌಊದ್(ಅ) ರಿಗೆ ಆಗಿದೆ ಮತ್ತು ಈಗಲೂ ಆಗುತ್ತಿದೆ. ಅವರ ಅನುಯಾಯಿಗಳ ಜೊತೆಯು ಪ್ರತಿ ದಿನ ಅದೇ ವ್ಯವಹಾರ ವಿವಿಧ ಸ್ಥಳಗಳಲ್ಲಿ ಆಗುತ್ತಿದೆ. ಈ ವಿರೋಧದಿಂದಾಗಿ ಈ ಸಂಘಟನೆ ಕೊನೆಗೊಳ್ಳಬೇಕಿತ್ತು ಮತ್ತು ಇದರ ಸುಳ್ಳು ಬಹಿರಂಗಗೊಳ್ಳಬೇಕಿತ್ತು. ಆದರೆ ಕೊನೆಗೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇಲ್ಲಂತೂ ಅಲ್ಲಾಹನು ಪ್ರಗತಿಯೇ ತೋರಿಸುತ್ತಿದ್ದಾನೆ.

ಹಝ್ರತ್ ಮಸೀಹ್ ಮೌಊದ್(ಅ) ತನ್ನ ಒಂದು ಸಭೆಯಲ್ಲಿ ಹೇಳಿದರು. ವಿರೋಧಿಗಳು ಎಲ್ಲಾ ರೀತಿಯಿಂದಲೂ ವಿರೋಧಿಸಿದರು. ಆದರೆ ದೇವರು ಪ್ರಗತಿಯನ್ನು ಕೊಟ್ಟನು. ಜಗತ್ತು ಶಕ್ತಿ ಮೀರಿ ಪ್ರಯತ್ನಿಸಬೇಕು ಮತ್ತು ಸತ್ಯ ಬಹಿರಂಗಗೊಳ್ಳಬೇಕು". ಸತ್ಯಕ್ಕೆ ಇದು ಸಾಕ್ಷಿಯಾಗಿದೆ. ನಮ್ಮ ಎದುರು ಅವರು ಯಾವ ತಂತ್ರ ಬಳಸಲಿಲ್ಲ, ಕೊನೆಗೆ ಅವರು ಸೋತರು. ಇದು ಅಲ್ಲಾಹನ ದೃಷ್ಟಾಂತವಾಗಿದೆ. (ಮಲ್ಫೂಝಾತ್, ಸಂಪುಟ–4, ಪುಟ–186)

ಆದ್ದರಿಂದ ನಾನು ಹೇಳಿದಂತೆ ವಿರೋಧಿಗಳು ತಮ್ಮ ಬಲ ಪ್ರಯೋಗಿಸುತ್ತಲೇ ಇದ್ದರು ಮತ್ತು ಬಲ ಪ್ರಯೋಗಿಸುತ್ತಿದ್ದಾರೆ. ಆದರೆ ಇಂದು ಸಹ ವಿರೋಧಿಗಳ ಶಕ್ತಿ ಮೀರಿ ಬಲ ಪ್ರಯೋಗಿಸಿದ ಹೊರತಾಗಿಯೂ, ದೊಡ್ಡ ದೊಡ್ಡ ಪಂಡಿತರು (ಉಲಮಾಅ) ನಮ್ಮ ವಿರುದ್ಧ ಯಂತ್ರ ತಂತ್ರ ಉಪಯೋಗಿಸಿದರೂ, ಅಲ್ಲದೆ ಅಹ್ಮದಿಅತ್ತಿನ ವಿರೋಧದಲ್ಲಿ ಸರ್ಕಾರಗಳೇ ಕ್ರಮ ಕೈಗೊಂಡರೂ, ಹಝ್ರತ್ ಮಸೀಹ್ ಮೌಊದ್(ಅ) ರವರ ಮಾತು ಪೂರ್ಣಗೊಳ್ಳುತ್ತಿದೆ. ವಿರೋಧಿಗಳು ಸೋತರು, ಇದು ಅಲ್ಲಾಹನ ದೃಷ್ಟಾಂತವಾಗಿದೆ. (ಖುತುಬ ಜುಮುಅ ದಿನಾಂಕ: 16 ಅಕ್ಟೋಬರ್2015)

**ವಆಖಿರುದ್ದಾವನಾ ಅನಿಲ್ ಹಮ್‌ದುಲಿಲ್ಲಾಹಿ ರಬ್ಬಿಲ್ ಆಲಮೀನ್**

************

*(ಪುಟ ಸಂಖ್ಯೆ* **09ರ** *ಉಳಿದ ಭಾಗ)*

ಇನ್ನೊಂದು ಆವೃತ್ತಿಯಾಗಿರುವುದು. ಆದ್ದರಿಂದ ಅವನ ಮತ್ತು ಸಾಮಾನ್ಯ ಉಮ್ಮತಿಯ ನಡುವೆ ಬಹಳ ವ್ಯತ್ಯಾಸವಿದೆ." (ಅಲ್‌ಖೈರುಲ್ ಕಸೀರ್, ಹಝ್ರತ್ ಶಾ ವಲಿಯುಲ್ಲಾಹ್ ಮುಹದ್ದಿಸ್ ದೆಹಲ್ವಿ, ಪುಟ–72, ಮದೀನಾ ಪ್ರೆಸ್ ಬಿಜ್ನೂರ್)

**ಎಲ್ಲಾ ಪ್ರವಾದಿಗಳೊಂದಿಗೆ ನಿಮ್ಮ ಸಂಬಂಧ:**

**ಹಝ್ರತ್ ಇಮಾಮ್ ಬಾಕಿರ್ ಅಲೈಹಿಸ್ಸಲಾಮ್ (51 ರಿಂದ 114 ಹಿಜ್ರಿ) ಹೇಳುತ್ತಾರೆ:**

"ಇಮಾಮ್ ಮಹದಿ ಬಂದಾಗ ಅವರು ಹೀಗೆ ಘೋಷಣೆ ಮಾಡುವರು. ಓ ಜನರೇ ! ಯಾರಾದರು ಇಬ್ರಾಹೀಮ್(ಅ) ಮತ್ತು ಇಸ್ಮಾಯೀಲ್(ಅ) ರನ್ನು ನೋಡಲು ಬಯಸಿದರೆ, ಆಲಿಸಿರಿ, ನಾನೇ ಆ ಇಬ್ರಾಹೀಮ್ ಮತ್ತು ಇಸ್ಮಾಯೀಲ್ ಆಗಿರುವೆನು. ನಿಮ್ಮ ಪೈಕಿ ಯಾರಾದರೂ ಮೋಶೆ (ಮೂಸಾ) ಮತ್ತು ಯಹೋಶೂರವರನ್ನು ನೋಡಲು ಬಯಸಿದರೆ, ಆ ಮೋಶೆ ಮತ್ತು ಯಹೋಶರವನು ನಾನೇ ಆಗಿದ್ದೇನೆ. ನಿಮ್ಮ ಪೈಕಿ ಯಾರಾದರು ಯೇಸು ಮತ್ತು ಸೈಮನ್ ಅನ್ನು ನೋಡಲು ಬಯಸಿದರೆ, ಆ ಯೇಸು ಮತ್ತು ಸೈಮನ್ ನಾನೇ ಆಗಿದ್ದೇನೆ. ನಿಮ್ಮ ಪೈಕಿ ಯಾರಾದರೂ ಮುಹಮ್ಮದ್ ಮುಸ್ತಫಾ(ಸ) ಮತ್ತು ಅಮಿರುಲ್ ಯುಮಿನೀನ್(ಅಲಿ) ರನ್ನು ನೋಡಲು ಬಯಸಿದರೆ, ಆಲಿಸಿರಿ. ಆ ಮುಹಮ್ಮದ್ ಮುಸ್ತಫಾ(ಸ) ಮತ್ತು ಅಮೀರುಲ್ ಮುಮಿನೀನ್ ನಾನೇ ಆಗಿದ್ದೇನೆ."

(ಬಹಾರುಲ್ ಅನ್ವಾರ್, ಸಂಪುಟ–43, ಪುಟ–202)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಆದಮ್(ಅ) ರಿಂದ ಕೊನೆಯವರೆಗೆ ಎಷ್ಟೆಲ್ಲಾ ಪ್ರವಾದಿಗಳು(ಅ) ಅಲ್ಲಾಹನ ಕಡೆಯಿಂದ ಲೋಕಕ್ಕೆ ಬಂದಿದ್ದಾರೆ, ಎಲ್ಲರ ವಿಶೇಷ ಘಟನೆಗಳು ಅಥವಾ ವಿಶೇಷ ಗುಣಗಳು ಈ ವಿನಿತನಿಗೆ ಒಂದಿಷ್ಟು ಭಾಗ ದಯಪಾಲಿಸಲಾಗಿದೆ. ಅವರಿಂದ ವಿಶೇಷಗಳು ಅಥವಾ ವಿಶೇಷ ಘಟನೆಗಳು ಪಡೆಯದ ಯಾವ ಪ್ರವಾದಿಯು ಹೊರಗೆ ಉಳಿಯಲಿಲ್ಲ. ಪ್ರತಿಯೊಬ್ಬ ಪ್ರವಾದಿಯ ಆತ್ಮಗುಣ ನನ್ನ ಆತ್ಮದಲ್ಲಿದೆ. (ಬರಾಹೀನ್ ಅಹ್ಮದಿಯಾ, ಭಾಗ–5, ಪುಟ–134)

ಅಂತೆಯೇ, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಅವರಿಗೆ ಹೀಗೆ ದೈವವಾಣಿ ನೀಡಿದನು: **ಜರಿಯುಲ್ಲಾಹು ಫೀ ಹುಲಲಿಲ್ ಅಂಬಿಯಾ** ಅಂದರೆ: ನೀವು ಎಲ್ಲಾ ಪ್ರವಾದಿಗಳ ವೇಷಭೂಷಣದಲ್ಲಿ ಅಲ್ಲಾಹನ ಭೇಟಿಯಾಗಿರುವಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾವ್ ತಮ್ಮ ಪರ್ಷಿಯನ್ ಪದ್ಯವೊಂದರಲ್ಲಿ ಹೀಗೆ ಹೇಳುತ್ತಾರೆ:

ಮನಮ್ ಮಸೀಹೆ ಝಮಾನ್ ವ ಮನಮ್ ಕಲೀಮೆ ಖುದಾ
ಮನಮ್ ಮಯಹಮ್ಮದ್(ಸ) ವ ಅಹ್ಮದ್(ಸ) ಕೆ ಮುಜ್ತಬಾ ಬಾಶದ್

(ತಿರ್ಯಾಖುಲ್ ಖುಲೂಬ್, ಸಂಪುಟ–15)

ನೀವು(ಅ) ನಿಮ್ಮ ಒಂದು ಉರ್ದು ಕವಿತೆಯಲ್ಲಿ ಹೇಳುತ್ತೀರಿ:

ಮೆಂ ಕಭಿ ಆದಮ್ ಕಭಿ ಮೂಸಾ ಕಭಿ ಯಾಖೂಬ್ ಹೂಂ
ನೀಝ್ ಇಬ್ರಾಹೀಮ್ ಹೂಂ ನಸ್ಲೇಂ ಹೈಂ ಮೇರಿ ಬೆ ಶುಮಾರ್

ಅದೇ ರೀತಿ ಅವರು(ಅ) ಹೀಗೆ ಹೇಳುತ್ತಾರೆ:

"ಎಷ್ಟೆಲ್ಲ ಸಜ್ಜನ ಹಾಗೂ ಸತ್ಯವಂತ ಪವಿತ್ರ ಪ್ರವದಿಗಳು ಅಗಲಿ ಹೋಗಿದ್ದಾರೆ, ಅವರ ಮಾದರಿಗಳನ್ನು ಜಾಹೀರುಪಡಿಸಲು ಅಲ್ಲಾಹನು ಈ ಕಾಲಘಟ್ಟದಲ್ಲಿ ಇಚ್ಛಿಸಿದ್ದಾನೆ. ಅದು ನಾನಾಗಿದ್ದೇನೆ. (ಬರಾಹೀನ್ ಅಹ್ಮದಿಯಾ, ಭಾಗ–5, ಪುಟ–135)

ಸರ್ವಶಕ್ತನಾದ ಅಲ್ಲಾಹನು ನಮಗೆ ನಿಜ ಅರ್ಥದಲ್ಲಿ ಸಯ್ಯದನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸ್ಥಾನಮಾನ ಅರಿತುಕೊಳ್ಳುವ ಭಾಗ್ಯ ದಯಪಾಲಿಸಲಿ. ಮತ್ತು ನಾವು ಅವರ(ಅ) ಆಜ್ಞೆಗಳ ಮೇಲೆ, ಅಧ್ಯಾಪನೆಗಳನ್ನು ಪರಿಪೂರ್ಣ ರೀತಿಯಲ್ಲಿ ಅನುಸರಿಸುವವರಾಗುವಂತೆ ಮತ್ತು ಅವರ ಮಹೋನ್ನತವಾದ ಗುರಿಯಲ್ಲಿ ಪರಿಪೂರ್ಣ ರೀತಿಯಲ್ಲಿ ಭಾಗವಹಿಸಿ ಅಲ್ಲಾಹನ ಆಸ್ಥಾನದಲ್ಲಿ ಉನ್ನತಿ ಸಾಧಿಸುವಂತೆ ದಯಪಾಲಿಸಲಿ. ಆಮೀನ್.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ* **14ರ** *ಉಳಿದ ಭಾಗ)*

ವಿಷಯವೆಂದರೆ ಆತನು ಪ್ರತಿ ದಿವಸ ಕನಿಷ್ಠ ಎರಡು ಅಥವಾ ಮೂರು ರುಕು ಪವಿತ್ರ ಖುರ್‌ಆನ್ ಅನ್ನು ಪಠಿಸಬೇಕು. ತದನಂತರ ಮುಂದಿನ ಹಂತದಲ್ಲಿ ಅನುವಾದವನ್ನು ಓದಿ, ಪ್ರತಿದಿನ ಪಠಣದೊಂದಿಗೆ ಅನುವಾದವನ್ನು ಓದುವ ಮೂಲಕ ಕ್ರಮೇಣ ಈ ಸುಂದರವಾದ ಬೋಧನೆಯು ಅಗ್ರಾಹ್ಯ ರೀತಿಯಲ್ಲಿ ಮನಸ್ಸಿನಲ್ಲಿ ನೆಲೆಗೊಳ್ಳಲು ಪ್ರಾರಂಭಿಸುತ್ತದೆ. ಅಲ್ಲಾಹನು ನಮಗೆಲ್ಲರಿಗೆ ಇದರ ತೌಫೀಖ್ ನೀಡಲಿ." ಆಮೀನ್

**ವ ಆಖಿರಿದ್ದಾವನಾ ಅನಿಲ್ ಹಮ್‌ದು ಲಿಲ್ಲಾಹಿ ರಬ್ಬಿಲ್ ಆಲಮೀನ್.**

**ಪ್ರೀತಿ ಎಲ್ಲರಲ್ಲೂ, ದ್ವೇಷವಿಲ್ಲ ಯಾರಲ್ಲೂ**

ಜಲ್ಸ ಸಾಲಾನ ಖಾದಿಯಾನ್ 2023ರ ಭಾಷಣ

# ಷರತ್ತು ಅನ್ವಯ ಚಂದಾದ ಪ್ರಾಮುಖ್ಯತೆ ಹಾಗೂ ನಿಝಾಮೆ ವಸಿಯ್ಯತ್ತಿನ ಅನುಗ್ರಹಗಳು

ಸೈಯದ್ ಕಲೀಮ್ ಉದ್ದೀನ್ ಸಾಹಿಬ್, ಖಾಝೀ ಸಿಲ್‌ಸಿಲಾ ಮರ್ಕಝಿಯಾ ಖದಿಯಾನ್

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ
وَاَشْهَدُ اَنَّ مُحَمَّدًا عَبْدُهٗ وَرَسُوْلُهٗ
اَمَّا بَعْدُ فَاَعُوْذُ بِاللّٰهِ مِنَ الشَّيْطٰنِ الرَّجِيْمِ-
بِسْمِ اللّٰهِ الرَّحْمٰنِ الرَّحِيْمِ-
مَثَلُ الَّذِيْنَ يُنْفِقُوْنَ اَمْوَالَهُمْ فِيْ
سَبِيْلِ اللّٰهِ كَمَثَلِ حَبَّةٍ اَنْۢبَتَتْ سَبْعَ سَنَابِلَ
فِيْ كُلِّ سُنْۢبُلَةٍ مِّائَةُ حَبَّةٍ ؕ وَاللّٰهُ يُضٰعِفُ لِمَنْ
يَّشَآءُ ؕ وَاللّٰهُ وَاسِعٌ عَلِيْمٌ ۝ (سورة البقرة:262)

ಸನ್ಮಾನ್ಯ ಸಭಾಧ್ಯಕ್ಷರೆ ಹಾಗೂ ಆದರಣೀಯ ಸಭಿಕರೇ ಅಸ್ಸಲಾಮು ಅಲೈಕುಮ್.

ನನ್ನ ಭಾಷಣದ ವಿಷಯ ಬಾಷರಹ ಚಂದಾ ಅರ್ಥಾತ್ ಷರತ್ತು ಪೂರ್ಣ ಚಂದಾ ಹಾಗೂ ನಿಝಾಮೆ ವಸಿಯ್ಯತಿನ ಪ್ರಾಮುಖ್ಯತೆ ಹಾಗೂ ಅನುಗ್ರಹಗಳು. ತಮ್ಮ ಮುಂದೆ ಪಠಿಸಲ್ಪಟ್ಟ ಪವಿತ್ರ ಖುರ್‌ಆನ್‌ನ ವಚನಗಳ ಅರ್ಥ ಹೀಗಿದೆ:

"ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ವ್ಯಯ ಮಾಡುವವರ ಹೋಲಿಕೆ, ಒಂದು ಧಾನ್ಯ ಏಳು ತೆನೆಗಳನ್ನು ಹೊಂದಿ ಪ್ರತಿಯೊಂದು ತೆನೆಯಲ್ಲೂ ನೂರು ಕಾಳುಗಳನ್ನು ಉತ್ಪಾದಿಸುವಂತಾಗಿದೆ. ಅಲ್ಲಾಹನು, ತಾನಿಚ್ಛಿಸುವವರಿಗೆ (ಇದಕ್ಕಿಂತಲೂ) ಅಧಿಕ ಪಟ್ಟು ನೀಡುತ್ತಾನೆ. ಅಲ್ಲಾಹನು ಅತಿ ಉದಾರಿಯೂ ಸರ್ವಜ್ಞನೂ ಆಗಿದ್ದಾನೆ." (2:262).

ಈ ವಚನದಲ್ಲಿ ಒಳ್ಳೆಯ ಉದಾಹರಣೆಯಿಂದ ದೇವ ಮಾರ್ಗದಲ್ಲಿ ಖರ್ಚು ಮಾಡುವ ಕುರಿತು ಅನುಗ್ರಹಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಅಲ್ಲಾಹನು ಹೇಳುತ್ತಾನೆ - ಯಾವ ರೀತಿ ದೇವ ಮಾರ್ಗದಲ್ಲಿ ಖರ್ಚು ಮಾಡುವಿರಿ. ಅದೇ ರೀತಿ ಒಂದು ಕಾಳಿನಿಂದ ಏಳುನೂರು ಕಾಳುಗಳನ್ನು ಅಲ್ಲಾಹನು ಉತ್ಪಾಧಿಸುತ್ತಾನೆ. ಅದೇ ರೀತಿ ಅಲ್ಲಾಹನು ನಿಮ್ಮ ಸ್ವತ್ತಿನಲ್ಲಿ ಅನುಗ್ರಹವನ್ನು ಸುರಿಸುವನು. ಅದು ಹೆಚ್ಚಾಗುವುದು - ಅಲ್ಲದೆ ಇದಕ್ಕಿಂತ ಮಿಗಿಲಾಗಿ ದೇವನು ನೀಡುವನು. ಅರ್ಥಾತ್ ಅದಕ್ಕೆ ಕೊನೆಯಿಲ್ಲ, ಮಿತಿ ಇಲ್ಲ ಹಾಗೂ ಅವನ ಅನುಗ್ರಹಗಳಿಗೆ ಯಾವುದೇ ಕೊನೆ ಇಲ್ಲ. ಇದೇ ರೀತಿ ವಿವಿಧ ರೀತಿಯಲ್ಲಿ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಮೂಮಿನೀನ್ ಸತ್ಯ ವಿಶ್ವಾಸಿಗಳಿಗೆ ದೇವ ಮಾರ್ಗದಲ್ಲಿ ಖರ್ಚು ಮಾಡಿ ಎಂದು ಒತ್ತಿ ಒತ್ತಿ ಹೇಳಿದ್ದಾನೆ. ವಾಸ್ತವಿಕವಾಗಿ ಆರ್ಥಿಕ ತ್ಯಾಗವು ಅಲ್ಲಾಹನ ಆರಾಧನೆಯ ಒಂದು ಭಾಗವಾಗಿದೆ. ಇದು ಅಲ್ಲಾಹನ ಹಕ್ಕುಗಳು ಮತ್ತು ಅಲ್ಲಾಹನ ಸೃಷ್ಟಿಗಳ ಹಕ್ಕುಗಳೆರಡಕ್ಕೂ ಸಂಬಂಧಿಸಿದೆ. ಸಂಪತ್ತಿನ ದಾನದಿಂದ ಧರ್ಮ ಪ್ರಚಾರ, ವಿಶ್ವಾಸಿಗಳ ಶಿಕ್ಷಣ, ತರಬೇತಿ, ಸಮುದಾಯಗಳ, ದೇಶದ ಸೇವೆ, ಬಡವರ ಸೇವೆ, ನಿರ್ಗತಿಕರ ಸಹಾಯ ಅವರ ಅಗತ್ಯಗಳ ಬಗ್ಗೆ ಕಾಳಜಿ ವಹಿಸುವುದು ಅದೇ ಧರ್ಮದ ಪ್ರಮುಖ ಭಾಗವಾಗಿದೆ.

ಸನ್ಮಾನ್ಯ ಶ್ರೋತೃಗಳೇ, ಈ ಕಾಲವು ಇಸ್ಲಾಂ ಧರ್ಮದ ಪುನರುಜ್ಜೀವನದ ಅವಧಿಯಾಗಿದೆ. ಇದರ ಭದ್ರವಾದ ಬುನಾದಿಯನ್ನು ಕಾಲದ ಇಮಾಮರಾದ ವಾಗ್ದತ್ತ ಮಹ್‌ದಿ ಇಮಾಮರು ಮಸೀಹರಿಂದ ಇಡಲಾಗಿದೆ. ಅಲ್ಲಾಹನು ಈ ಜಮಾಅತಿನ ಅಭಿವೃದ್ಧಿಯ ಬಗ್ಗೆ ದೊಡ್ಡ ದೊಡ್ಡ ಭರವಸೆಗಳನ್ನು ನೀಡಿದ್ದಾನೆ. ಇದು ಅಲ್ಲಾಹನ ಅನುಗ್ರಹ. ನಮ್ಮನ್ನು ಅವನು ಈ ಜಮಾಅತಿನಲ್ಲಿ ಸೇರಿಸಿದ್ದಾನೆ. ಈಗ ನಾವು ನಮ್ಮ ಹಕ್ಕು ಬಾದ್ಯತೆಗಳನ್ನು, ಜವಾಬ್ದಾರಿಗಳನ್ನೂ ಇಸ್ಲಾಮಿನ ಸೇವೆಗಾಗಿ ಈಡೇರಿಸುವುದು ನಮ್ಮ ಕರ್ತವ್ಯ. ಈ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನುಡಿಯುತ್ತಾರೆ:

ನೋಡಿ, ಯಾರು ಪ್ರವಾದಿಗಳ ಕಾಲವನ್ನು ಕಂಡರು ಅವರು ಧರ್ಮ ಪ್ರಚಾರಕ್ಕಾಗಿ, ಸೇವೆಗಾಗಿ ಎಂತಹ ತ್ಯಾಗ ಮಾಡಿದರು. ಶ್ರೀಮಂತರು ಕೂಡ ತಮ್ಮ ಪ್ರಿಯವಾದ ಸ್ವತ್ತನ್ನು ತ್ಯಾಗ ಮಾಡಿದರು. ಹಾಗೆಯೇ ಬಡವರು ಕೂಡ ತಮ್ಮಲ್ಲಿದ್ದ ಸರ್ವವನ್ನೂ ತ್ಯಾಗ ಮಾಡಿದರು. ಹಾಗೆಯೇ ಮಾಡುತ್ತಾ ಹೋದರು. ಎಲ್ಲಿಯ ವರೆಗೆ ಎಂದರೆ ದೇವ ಸನ್ನಿಧಿಯಲ್ಲಿ ವಿಜಯದ ಸಮಯ ಪ್ರಾಪ್ತವಾಯಿತು. ಮುಸ್ಲಿಮನಾಗುವುದು ಸುಲಭವಲ್ಲ. ಮೂಮಿನ್ (ವಿಶ್ವಾಸಿ) ಎಂಬ ಪದವಿ ಪಡೆಯುವುದು ಸುಲಭವಲ್ಲ. ಹೇ ಜನರೇ, ಭಕ್ತರಿಗೆ ನೀಡುವ ಸದಾಚಾರದ ಮನೋಭಾವ ನಿಮ್ಮಲ್ಲಿದ್ದರೆ ನನ್ನ ಈ ಆಹ್ವಾನವನ್ನು ಲಘುವಾಗಿ ತೆಗೆದುಕೊಳ್ಳಬೇಡಿರಿ. ಒಳ್ಳೆಯದಾಗುವ ಚಿಂತೆ ಒಳ್ಳೆಯವರಾಗುವ ಚಿಂತೆ ಮಾಡಿರಿ. ದೇವನು ನಿಮ್ಮನ್ನು ಆಕಾಶದಿಂದ ನೋಡುತ್ತಿದ್ದಾನೆ. ನೀವು ಈ ಸುವಾರ್ತೆಯನ್ನು ಆಲಿಸಿ ಏನು ಉತ್ತರ ಕೊಡುತ್ತೀರೆಂದು (ಫತ್ಹೇಹ್ ಇಸ್ಲಾಂ ಪುಟ 52).

ಪುನಃ ಹೀಗೆ ಹೇಳುತ್ತಾರೆ:

ನಿಮಗೆ ಎಚ್ಚರಿಕೆ ನೀಡಲು ನನಗೆ ಆದೇಶಿಸಲಾಗಿದೆ. ಆದ್ದರಿಂದ ಅಲ್ಲಾಹನು ನಿಮ್ಮ ಕಾರ್ಯಗಳನ್ನು ನೋಡುತ್ತಿದ್ದಾನೆ. ನೀವು ನಿಮ್ಮ ದೇವನಿಗೆ ನಿಮ್ಮ ಸ್ವತ್ತು, ಪ್ರಾಣಗಳಿಂದ ಸಹಾಯವನ್ನು ಮಾಡಿ. ನೀವು ಪಾಲಿಸುವಿರಾಗಿರಿ. ಯಾರು ನಿಮ್ಮಲ್ಲಿ ದೇವನ ಸಹಾಯವನ್ನು ಮಾಡುತ್ತಾನೋ ಅವನಿಗೆ ಸಹಾಯ ಒದಗಿಸಲಾಗುವುದು. ಏನೆಲ್ಲ ಅವನು ದೇವಮಾರ್ಗದಲ್ಲಿ ಕೊಟ್ಟಿದ್ದಾನೋ ಅದರ ಹೆಚ್ಚಿನಾಂಶವನ್ನು ಅವನಿಗೆ ಹಿಂದಿರುಗಿಸಲಾಗುವುದು. ಆ ದೇವನು ಎಲ್ಲ ಹಿತಚಿಂತಕರಿಗಿಂತ ಶ್ರೇಷ್ಠ ಹಿತಚಿಂತಕನಾಗಿದ್ದಾನೆ. (ಉತ್ತಮ ಉಪಕಾರಿಯಾಗಿದ್ದಾನೆ.) (ಮಜ್‌ಮುಅ ಇಶ್ತಿಹಾರತ್ ಸಂಪುಟ ಮೂರು ಪುಟ 153.)

ಆದರಣೀಯ ಶ್ರೋತೃಗಳೇ, ಇತಿಹಾಸ ಸಾಕ್ಷ್ಯ ನುಡಿಯುತ್ತದೆ. ಅಂತಿಮ ಕಾಲದ ಇಮಾಮರಾದ ವಾಗ್ದತ್ತ ಮಹ್‌ದಿ ಇಮಾಮ್, ಮಸೀಹ್(ಅ)ರವರ ಧ್ವನಿಗೆ ಅವರ ಸಹಚರರು, ಅನುಯಾಯಿಗಳು ಸದಾ - ಸಮೀಅ್‌ನಾ ವ ಅತಾಅ್‌ನಾ - ನಾವು ಆಲಿಸಿದೆವು ನಾವು ವಿಧೇಯರಾದೆವು, ಪಾಲಿಸಿದೆವು ಎಂಬ ನಮೂನೆಯನ್ನು (ರೀತಿಯನ್ನು) ಪ್ರಸ್ತುತ ಪಡಿಸಿದರು. ಎಂತಹ ಉದಾಹರಣೆ ಎಂದರೆ ಇಸ್ಲಾಮಿನ ಆರಂಭ ಕಾಲದ ನೆನಪು ತಾಜಾವಾಯಿತು ಮರುಕಳಿಸಿತು. ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರ ಸಹಚರರು ಪ್ರತಿ ಆರ್ಥಿಕ ತ್ಯಾಗ ಮಾಡಿದಂತೆ ವಾಗ್ದತ್ತ ಮಸೀಹರ ಅನುಯಾಯಿಗಳು ಕೂಡ ಇಸ್ಲಾಮಿನ ಉನ್ನತಿಗಾಗಿ ತಮ್ಮ ಸಂಪತ್ತನ್ನು ತನು ಮನ ಧನವನ್ನು ಖರ್ಚು ಮಾಡಿದರು. ಮುಂದೆ ಬರುವ ಅಹ್ಮದಿಯರಿಗೆ ಉದಾತ್ತ ಉದಾಹರಣೆಯ ಜ್ಯೋತಿಗಳಾದರು.

ಆದ್ದರಿಂದ ನಾವು ಪ್ರತಿಯೊಬ್ಬರು ಅಲ್ಲಾಹನು ನೀಡಿದ ತೌಫೀಕ್ ಭಾಗ್ಯದ ಪ್ರಕಾರ ಪ್ರಾಮಾಣಿಕತೆಯಿಂದ ಅಲ್ಲಾಹನ ಮಾರ್ಗದಲ್ಲಿ ಆರ್ಥಿಕ ತ್ಯಾಗ ಮಾಡುತ್ತಿದ್ದೇವೆಯೇ ಎಂದು ಸ್ವತಃ ಪರೀಕ್ಷಿಸಿಕೊಳ್ಳಬೇಕು. ಯಾವೊಬ್ಬ ವ್ಯಕ್ತಿ ಇದನ್ನು ಮಾಡುತ್ತಿದ್ದಾರೆಯೇ ಅಂತಹ ವ್ಯಕ್ತಿಗೆ ಅಭಿನಂದನೆಗಳು. ಆದರೆ ಅದರಲ್ಲಿ ಯಾವುದೇ ಕುಂದುಕೊರತೆ ಇದ್ದರೆ ಅದು ಅವನಿಗೆ ಕಾಳಜಿಯ ವಿಷಯವಾಗಿದೆ. ಅವನು ತನ್ನ ಸ್ವಂತ ಆತ್ಮಕ್ಕೆ ದ್ರೋಹ ಬಗೆಯುತ್ತಿದ್ದಾನೆ. ಹಾಗೂ ಒಳಿತು ಮತ್ತು ಸೌಭಾಗ್ಯದಿಂದ ವಂಚಿತನಾಗುತ್ತಿದ್ದಾನೆ. ಇವು ದೇವನ ಕೆಲಸ ಯಾವುದೇ ಕಾರಣಕ್ಕೆ ನಿಲ್ಲುವುದಿಲ್ಲ. ಅವನ ಧರ್ಮವು ಮೇಲುಗೈ ಸಾಧಿಸುತ್ತದೆ.

ಸರಿ ಏನೆ ಆಗಲಿ ದೇವನ ಕೆಲಸಗಳು ಮಾನವರಿಂದ ತಡೆಯುವುದು ಆಗುವುದಿಲ್ಲ. ಏನು ದೇವನ ಮುಂದೆ ಸೃಷ್ಟಿಗಳದ್ದು ಏನಾದರು ನಡೆಯುತ್ತಿದೆಯೇ? ಎಂದಿಗೂ ನಡೆಯುವುದಿಲ್ಲ. ಈ ಕುರಿತು ವಾಗ್ದತ್ತ ಮಹ್‌ದಿ ಇಮಾಮ್, ಮಸೀಹ್(ಅ)ರವರು ನುಡಿಯುತ್ತಾರೆ: ನೀವು ದೃಢವಾಗಿ ತಿಳಿದುಕೊಳ್ಳಿ. ಈ ಕಾರ್ಯವು ಆಕಾಶದಿಂದ ಬಂದಿದೆ. ಮತ್ತು ನಿಮ್ಮ ಸೇವೆಯೂ ನಿಮ್ಮ ಒಳಿತಿಗಾಗಿ ಮಾತ್ರ ಎಂದು ನೀವು ಖಂಡಿತವಾಗಿ ಅರ್ಥ ಮಾಡಿಕೊಳ್ಳಿರಿ. ಆದ್ದರಿಂದ ನೀವು ನಿಮ್ಮ ಹೃದಯದಲ್ಲಿ ಅಹಂಕಾರವನ್ನು ಹೊಂದಲು ನಾವು ಹಣಕಾಸಿನ ಸೇವೆಯನ್ನು ಅಥವಾ ಯಾವುದೇ ರೀತಿಯ ಸೇವೆಯನ್ನು ಮಾಡಿದ್ದೇವೆಯೆಂದು ಅಹಂಭಾವಿಯಾಗಬೇಡಿ. ನಾನು ನಿಮಗೆ ಸಾರಿ ಸಾರಿ ಹೇಳುತ್ತೇನೆ. ದೇವನಿಗೆ ನಿಮ್ಮ ಸೇವೆಯ ಅಗತ್ಯವಿಲ್ಲ, ಆವಶ್ಯಕತೆ ಇಲ್ಲ. ಬದಲಾಗಿ ಆ ದೇವನ ಅನುಗ್ರಹ ನಿಮಗೆ ಈ ಸೇವೆಗಳನ್ನು ಅರ್ಪಿಸಲು ಅವಕಾಶವನ್ನು ನೀಡುತ್ತಿದೆ. (ಮಜ್‌ಮೂಅ ಇಶ್ತಿಹಾರತ್ ಸಂಪುಟ 3 ಪುಟ 498).

ಆದರಣೀಯ ಸಭಿಕರೇ, ನಮಗೆಲ್ಲರಿಗೂ ತಿಳಿದಿರುವಂತೆ ವಾಗ್ದತ್ತ ಮಹ್‌ದಿ, ಮಸೀಹ್ ಅಲೈಸ್ಸಲಾಮರು ದೈವಾಧೀನರಾದ ಬಳಿಕ ಅಲ್ಲಾಹನು ತನ್ನ ಧ್ಯೇಯವನ್ನು ಮುಂದುವರಿಸುವ ಮತ್ತು ಅದನ್ನು ಪರಿಪೂರ್ಣತೆಗೆ ತರುವ ಭರವಸೆಯಂತೆ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನಲ್ಲಿ ಖಿಲಾಫತ್ ಎಂಬ ಅನುಗ್ರಹಪೂರ್ಣ ವ್ಯವಸ್ತೆಯನ್ನು ಸ್ಥಾಪಿಸಿದನು. ಹಝ್ರತ್ ಅಕ್‌ದಸ್ ಮಸೀಹ್ ಮೌಊದ್(ಅ)ರವರ ವಚನಗಳ ಬೆಳಕಿನಲ್ಲಿ ಅವರ ಖಲೀಫರು ಪದೇ ಪದೇ ಆರ್ಥಿಕ ತ್ಯಾಗದತ್ತ ಗಮನ ಸೆಳೆಯುತ್ತಿದ್ದಾರೆ. ಇಂತಹ ಸುಸಂದರ್ಭದಲ್ಲಿ ನಮ್ಮ ಆದ್ಯ ಕರ್ತವ್ಯವೇನೆಂದರೆ ನಾವು ನಮ್ಮ ಖಲೀಫತುಲ್ ಮಸೀಹರ ಧ್ವನಿಗೆ ಓಗೊಡಬೇಕು. ಲಬ್ಬೈಕ್ ಎಂದು ಹೇಳಿ ನಾನು ಹಾಜರಿದ್ದೇನೆ. ಯಾಕೆಂದರೆ ಇಸ್ಲಾಂ ಧರ್ಮದ ಆಧ್ಯಾತ್ಮಿಕ ವಿಜಯದ ದಿನವು ಅತ್ಯಂತ ಸಮೀಪವಾಗುತ್ತ ಹೋಗಬೇಕು. ಹಾಗೂ ನಾವು ಇಂತಹ ಅನುಗ್ರಹಪೂರ್ಣ ಸಮಯದಲ್ಲಿ ದೇವ ಸನ್ನಿಧಿಯಲ್ಲಿ ದೇವನ ಜಮಾಅತಿನಲ್ಲಿ ನಾವು

ಬರೆಯಲ್ಪಡಬೇಕು. ಮಹ್‌ದಿ ಇಮಾಮರ ದ್ವಿತೀಯ ಖಲೀಫರು ಈ ಕುರಿತು ನುಡಿಯುತ್ತಾರೆ:

ನಾವು ಯಾವಾಗಲೂ ನಮ್ಮ ಜಮಾಅತಿನ ಸದಸ್ಯರಿಂದ ಇದನ್ನು ಕೇಳುತ್ತೇವೆ ಹಾಗೂ ಸದಾ ಹಝ್ರತ್ ಮಸೀಹ್ ಮೌಊದ್(ಅ) ಕೂಡ ಇದನ್ನು ಒತ್ತಾಯಿಸುತ್ತಿದ್ದರು. ದೇವನಿಗಾಗಿ ನಿಮ್ಮ ಜೀವನ, ನಿಮ್ಮ ಸಂಪತ್ತು, ದೇವನಿಗೆ ಅರ್ಪಿಸಿ. ಆದರೆ ಪ್ರತಿ ಯುಗದಲ್ಲಿ ಈ ಮಾನದಂಡವು ಬದಲಾಗಿದೆ. ಅರ್ಧ ಪೈಸೆ, ಈ ಧ್ವನಿ ನಿಧಾನವಾಗಿ ಪ್ರಾರಂಭವಾಯಿತು. ನಂತರ ಅದು ಪೈಸೆಗೆ ತಲುಪಿತು. ನಂತರ ಎರಡು ಪೈಸೆ, ಮತ್ತೆ ಹೇಳಲಾಯಿತು ಈ ಎರಡು ಪೈಸೆಯ ಪ್ರಶ್ನೆಯೇ ಇಲ್ಲ. ಮೂರು ಪೈಸೆ ಕೊಡಿ ಎಂದಿದ್ದರು. ಮೂರು ಪೈಸೆ ಕೊಡುವ ಸಮಯದಲ್ಲಿ ಈ ನಾಲ್ಕು ಪೈಸೆ ಕೊಡಿ ಎಂದರು. ನಂತರ ಸಮಯ ಬಂದಾಗ ನಿಮ್ಮ ಆಸ್ತಿ ಮತ್ತು ನಿಮ್ಮ ಆದಾಯವನ್ನು (ವಸಿಯ್ಯತ್) ಉಯಿಲು ಮಾಡಿ ಎಂದು ಹೇಳಲಾಯಿತು. ಹಾಗೆ ಈ ವಸಿಯ್ಯತ್‌ನಲ್ಲಿ ಕನಿಷ್ಠ ಪಕ್ಷ ಹತ್ತರ ಒಂದನೆ ಭಾಗವನ್ನು ಕೇಳಲಾಯಿತು. ಮತ್ತೆ ಹೇಳಲಾಯಿತು ನೀವು ಒಂಬತ್ತರ ಒಂದು ಭಾಗವನ್ನು ನೀಡಲು ಪ್ರಯತ್ನಿಸಬೇಕು. ಹಾಗೂ ಯಾರಿಗೆ ದೇವನು ಸೌಭಾಗ್ಯವನ್ನು ದಯಪಾಲಿಸಿದ್ದಾನೆ ಅವರು ಇದಕ್ಕಿಂತ ಮಿಗಿಲಾಗಿ ನೀಡಿ. (ಭಾಷಣ ಮಜ್ಲಿಸ್ ಮುಶಾವರತ್ 1946, ಅಲ್‌ಫಝುಲ್ 10 ಎಪ್ರಿಲ್ 1962).

ಹಝ್ರತ್ ಮುಸ್ಲಿಹ್ ಮೌಊದ್(ರ) ಇಸ್ಲಾಮ್ ಧರ್ಮ ಪ್ರಚಾರ ಹಾಗೂ ಜಮಾಅತಿನ ಆಡಳಿತ, ಶೈಕ್ಷಣಿಕ ಮತ್ತು ತರಬೇತಿ ಕಾರ್ಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲಿಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ)ರವರ ವಚನಗಳ ಮತ್ತು ಉದ್ದೇಶಗಳ ಪ್ರಕಾರ ಜಮಾಅತಿನ ಸದಸ್ಯರು ಹಣಕಾಸಿನ ನೆರವು ನೀಡುವುದು ಕಡ್ಡಾಯವೆಂದು ಘೋಷಿಸಲಾಗಿದೆ. ಇದರಲ್ಲಿ ಕೆಲವು ಕಡ್ಡಾಯ ದೇಣಿಗೆಗಳು ಮತ್ತು ಕೆಲವು ಸ್ವಯಂ ಪ್ರೇರಿತ ದೇಣಿಗೆಗಳು ವಿಶೇಷವಾಗಿ ಝಕಾತ್, ಚಂದಾ ನಿಝಾಮೆ ವಸಿಯ್ಯತ್, ಚಂದಾ ಆಮ್, ಚಂದಾ ಜಲ್ಸಾ ಸಾಲಾನ ಆಗಿದೆ. ಚಂದಾ ಆಮ್ ಸಾಮಾನ್ಯ ದೇಣಿಗೆ ಎಂದರೆ ಯಾವುದೇ ರೀತಿಯ ಆದಾಯ ಹೊಂದಿರುವ ಅಹ್ಮದಿ ಗಂಡಸರು, ಅಹ್ಮದಿ ಹೆಣ್ಣು ಮಕ್ಕಳು, ಮೂಸಿ ಅಲ್ಲದಿದ್ದರೆ ಇಸ್ಲಾಂ ಧರ್ಮದ ಪ್ರಕಟಣೆಗಾಗಿ ತನ್ನ ಮಾಸಿಕ ಆದಾಯ 1/16 ಅನ್ನು ದೇಣಿಗೆಯಾಗಿ ನೀಡುತ್ತಾನೆ. ಅದೇ ರೀತಿ ಚಂದಾ ಜಲ್ಸಾ ಸಾಲಾನ ಆದಾಯದ ನೂರ ಇಪ್ಪತ್ತನೇ ಭಾಗವನ್ನು ಪ್ರತಿ ವರ್ಷ ಪಾವತಿಸುತ್ತಿರಬೇಕು. ಮತ್ತು ಸ್ವಯಂ ಪ್ರೇರಿತ ಆರ್ಥಿಕ ತ್ಯಾಗವು ವಿವಿಧ ಸಮಯದಲ್ಲಿ ಖಲೀಫರಿಂದ ಶಾಶ್ವತ ಅಥವಾ ತಾತ್ಕಾಲಿಕ ಚಂದಾ ಆಗಿದ್ದು ಪ್ರತಿಯೊಬ್ಬರು ಪ್ರಮಾಣಿಕತೆಯಿಂದ ಮತ್ತು ಅವುಗಳಲ್ಲಿ ಭಾಗವಹಿಸುವ ಸಾಮರ್ಥ್ಯ ಅವರಿಗೆ ಬಿಟ್ಟದ್ದು.

ಆದ್ದರಿಂದ ಪ್ರತಿಯೊಬ್ಬ ಅಹ್ಮದಿ ಪುರುಷ ಅಥವಾ ಮಹಿಳೆ ಸ್ವಲ್ಪ ಅಥವಾ ಇತರ ಆದಾಯವನ್ನು ಹೊಂದಿರುವವರು ಮೇಲಿನ ದರದ ಪ್ರಕಾರ ವಾರ್ಷಿಕವಾಗಿ ಸಾಮಾನ್ಯ ದೇಣಿಗೆ ಮತ್ತು ಜಲ್ಸಾ ದಾನವನ್ನು ಪಾವತಿಸಿದರೆ ಅವನನ್ನು ಯೋಗ್ಯ ಪಾವತಿದಾರ ಎಂದು ಕರೆಯಲಾಗುತ್ತದೆ. ಆದುದರಿಂದ ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ನಾವು ಎಷ್ಟು ಆರ್ಥಿಕ ತ್ಯಾಗವನ್ನು ನೀಡುತ್ತಿದ್ದೇವೆ, ನಮ್ಮ ತ್ಯಾಗದ ಗುಣಮಟ್ಟ ಏನು, ದರಕ್ಕೆ ಅಣುಗುಣವಾಗಿ ನಮ್ಮ ದೇಣಿಗೆ ಇದೆಯೋ ಎಂದು ನಾವು ಮೌಲ್ಯ ಮಾಪನ ಮಾಡಬೇಕಾಗಿದೆ. ನಾವು ಸಂದಾಯ ಮಾಡುವ ಚಂದಾ ಯಾವ ಮಟ್ಟದ್ದಾಗಿದೆ. ಏನು ನಮ್ಮ ಚಂದಾ ಆದಾಯ ಗಳಿಕೆಯ ಅನುಗುಣವಾಗಿ ಸಂದಾಯ ಮಾಡುವುದಾದರೆ ಹಾಗೆ ಎಡೆಬಿಡದೇ ನಿರಂತರವಾಗಿ ಸಹಾಯ ಮಾಡುವುದಾದರೆ ನಾವು ಅನುಗ್ರಹದಾತರೆ. ಈ ರೀತಿ ಇಲ್ಲವೆಂದಾದರೆ ನಾವು ನಮ್ಮ ಜೀವಗಳ ಮೇಲೆ ದೌರ್ಜನ್ಯ ವೆಸಗುತ್ತಿದ್ದೇವೆ. ಮತ್ತು ನಾವು ನಮ್ಮ ಇಹಪರವನ್ನು ನಾಶಮಾಡಿಕೊಳ್ಳುತ್ತಿದ್ದೇವೆ. ನಾವು ನಮ್ಮ ಆದಾಯದ ಅನುಗುಣವಾಗಿ ಸರಿಯಾಗಿ ಸ್ವತ್ತನ್ನು ದೇವಮಾರ್ಗದಲ್ಲಿ ತ್ಯಾಗ ಮಾಡಲಾಗದಿದ್ದರೆ (ಚಂದಾ ಪಾವತಿಸದಿದ್ದರೆ) ನಾವು ಅತಿ ದೊಡ್ಡ ಒಳಿತಿನಿಂದ ಹಾಗು ಅಲ್ಲಾಹನ (ಕೃಪೆ) ಅನುಗ್ರಹದಿಂದ ದೂರವಾಗುತ್ತಿದ್ದೇವೆ. ಇದರ ಕೆಟ್ಟ ಅಪಾಯಕಾರಿ ಪರಿಣಾಮಗಳು ಹೃದಯ ಬಡಿತವಾಗಿದೆ. ಮತ್ತೊಂದು ವಿಷಯ ಗಂಭೀರವಾದದ್ದು ಏನೆಂದರೆ ನಮ್ಮವರಲ್ಲಿ ಕೆಲವರು ಬಜೆಟ್ ಬರೆಸುತ್ತಾರೆ. ಆದರೆ ಸಂದಾಯ ಮಾಡುವುದಿಲ್ಲ. ಇಂತವರಿಗೂ ಕೂಡ ಆತಂಕದ ವಿಷಯವಾಗಿದೆ.

ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿಯುತ್ತಾರೆ: ಅಲ್ಲಾಹನ ಧರ್ಮದ ಸೇವೆಗಾಗಿ ಯಾರು ಏನನ್ನಾದರೂ ಕೊಡುತ್ತಾರೋ ಸರ್ವಶಕ್ತನಾದ ಅಲ್ಲಾಹನಿಂದ ಒಪ್ಪಂದವನ್ನು ಮಾಡಿಕೊಳ್ಳುತ್ತಾರೆ ಮತ್ತು ಆ ಒಪ್ಪಂದವನ್ನು ಪೂರೈಸದಿದ್ದದಕ್ಕಾಗಿ ಅಲ್ಲಾಹನ ಸನ್ನಿಧಿಯಲ್ಲಿ ಜವಾಬ್ದಾರರಾಗಿರುತ್ತಾರೆ. ಹಾಗೂ ಬರೆಸಿ ಸಂದಾಯ ಮಾಡದ ಆ ಚಂದಾದ ಬಾಕಿಯೂ ಈ ಲೋಕದಲ್ಲಿ ಸಂದಾಯ ಮಾಡದೇ ಹೋದರೆ ದೇವನಾದ ಅಲ್ಲಾಹನ ಮುಂದೆ ಮರಣದ ಬಳಿಕ ಹಾಜರಾದಾಗ ದೇವನು ಹೇಳುವನು, ಹೋಗಿ ಬಾಕಿ ಚಂದಾವನ್ನು ನರಕದಲ್ಲಿ ಸಂದಾಯ ಮಾಡಿ ಬನ್ನಿ ಎಂದು. (ಭಾಷಣ ಮಜ್ಲಿಸ್ ಸಮಾಲೋಚನೆ 1933)

ಕಡ್ಡಾಯ ದಾನದ ವಿಷಯದಲ್ಲಿ ನಾವು ಎರಡು ವಿಷಯಗಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು. ಪ್ರಥಮವಾಗಿ ತನ್ನ ಆದಾಯದ ಅನುಗುಣವಾಗಿ ಸರಿಯಾಗಿ ಚಂದಾ ಬಜೆಟ್ ಬರೆಸಬೇಕು. ಹಾಗೂ ನಿರಂತರವಾಗಿ ಎಡಬಿಡದೆ ಆ ಚಂದಾ ಸಂದಾಯ ಮಾಡುತ್ತಿರಬೇಕು. ಇದೇ ಪ್ರತಿಯೊಬ್ಬ ಅಹ್ಮದಿಯ ಕಡ್ಡಾಯ ಕರ್ತವ್ಯವಾಗಿದೆ.

ಕಡ್ಡಾಯ ದಾನ ಬಾಷರಹ ಚಂದಾದ ಕುರಿತು ನಮ್ಮ ಇಮಾಮರು ನೇತಾರರು ಆದ ಪಂಚಮ ಖಲೀಫರು ಅಲ್ ಖಾಮಿಸ್ (ಅ.ಬಿ.ಅ) ನುಡಿಯುತ್ತಾರೆ: ಯಾವ ಶ್ರೀಮಂತ ಜನರು ಜಿಪುಣತನದಿಂದ ವರ್ತಿಸುತ್ತಾರೆ. ಅವರು ನೆನಪಿನಲ್ಲಿಡಲಿ ಎಲ್ಲ ಚಂದಾಗಳು ಅಲ್ಲಾಹನ ಅನುಗ್ರಹಗಳನ್ನು ಬಾಚಿಕೊಳ್ಳುವ (ದಾರಿ) ಮಾರ್ಗವಾಗಿದೆ. ನೆನಪಿಡಿರಿ ಯಾರು ಅಲ್ಲಾಹನಿಗಾಗಿ, ಧರ್ಮ ಸೇವೆಗಾಗಿ ತಮ್ಮ ಸ್ವತ್ತಿನಲ್ಲಿ 16ನೇ ಒಂದು ಭಾಗ ಸಂದಾಯ ಮಾಡುವುದಾದರೆ ಅದು ಅವರ ಏಳಿಗೆಗಾಗಿ, ಒಳಿತಿಗಾಗಿ ಆಗಿದೆ. ಅಲ್ಲಾಹನು ಇನ್ನೊಂದೆಡೆಯಲ್ಲಿ ನಾನು ನಿಮ್ಮ ಸ್ವತ್ತನ್ನು ಏಳು ನೂರು ಪಟ್ಟು, ಬದಲಾಗಿ ಅದಕ್ಕಿಂತ ಅಧಿಕವಾಗಿ ಹೆಚ್ಚಿಗೆ ಹಿಂದಿರುಗಿಸುವೆನು. ಅಲ್ಲಾಹನ ಮಾರ್ಗದಲ್ಲಿ ತನ್ನ ಸ್ವತ್ತಿನ ಒಳ್ಳೆಯ ಭಾಗವನ್ನು ಕಡಿದುಕೊಡುತ್ತಾರೆ. ನಿಮಗೆಯೇ ಇದರಲ್ಲಿ ಒಳಿತು ಇದೆ. ಲಾಭ ಇದೆ. ಇದರಲ್ಲಿ ಒಬ್ಬ ವಿಶ್ವಾಸಿಗೆ ಮೂಮಿನ್‌ಗೆ ಈ ಸನ್ಮಾರ್ಗವಿದೆ. ಅದೇನೆಂದರೆ, ನೀವು ಸದಾ ಒಳ್ಳೆಯ ಮಾರ್ಗದಿಂದ ಗಳಿಸಿರಿ. ಏಕೆಂದರೆ ಸರ್ವಶಕ್ತನಾದ ಅಲ್ಲಾಹನಿಗೆ ಒಳ್ಳೆಯ ಸ್ವತ್ತು ಮಾತ್ರ ಮೀಸಲಾಗಿಡಬೇಕು. ದೇವ ಸನ್ನಿಧಿಗೆ ಅರ್ಪಿಸಬೇಕು. ಅದಕ್ಕಾಗಿ ಒಳ್ಳೆಯ ಮಾರ್ಗದಿಂದ ಗಳಿಸಿರಿ. ಅದಕ್ಕಾಗಿ ಯಾರು ಚಂದಾವನ್ನು ಸಂದಾಯ ಮಾಡುತ್ತಿದ್ದಾರೆ. ಈ ಎಲ್ಲ ಮಾತುಗಳನ್ನು ತನ್ನ ಗಮನದಲ್ಲಿಡಬೇಕು. ಇವರ ದುಡ್ಡು ಇವರ ಗಳಿಕೆಯ ಮಾರ್ಗ ಹಾಗೂ ಆದಾಯದ ಮಾರ್ಗ ಸ್ವಚ್ಛ ಪರಿಶುದ್ಧ ಆಗುವುದು. ಸ್ವಚ್ಛ ಈ ಸ್ವತ್ತಿನ ತ್ಯಾಗವು ಇತರರಿಗಾಗಿ ಇವರ ಜೀವಗಳ ಆತ್ಮಗಳ ಶುದ್ಧೀಕರಿಸಲಿಕ್ಕೆ ದಾರಿಯಾಗುವುದು. ಹಾಗು ಇದೇ ರೀತಿ (ಅವರು) ಇಂತವರು ಅಲ್ಲಾಹನ ಸಾಮೀಪ್ಯವನ್ನು ಗಳಿಸುವರಾಗುವರು ಹಾಗೂ ಪವಿತ್ರ ಪ್ರವಾದಿ ಮುಹಮ್ಮದ್(ಸ) ರವರ ಪ್ರಾರ್ಥನೆಗಳು ಇವರ ಹಕ್ಕಿನಲ್ಲಿ ಸ್ವೀಕೃತಗೊಳ್ಳುವುವು. ಇವರು ಈ ದುಆಗಳ ಪ್ರಾರ್ಥನೆಗಳ ವಾರಸುದಾರರಾಗುತ್ತಾರೆ. (ಖುತ್‌ಬ ಜುಮುಅ 31 ಮಾರ್ಚ್ 2006).

ಒಟ್ಟಾರೆಯಾಗಿ ಆರ್ಥಿಕ ತ್ಯಾಗ ಮಾಡುವವರಿಗೆ ಅಲ್ಲಾಹುವಿನ ವಾಗ್ದಾನಗಳ ಈಡೇರುವಿಕೆ ಇದೆ. ಅದಕ್ಕಾಗಿ ಆ ಉದ್ದೇಶಕ್ಕಾಗಿ ನಾವು ಆ ಅನುಗ್ರಹಗಳನ್ನು ಪಡೆಯಲಿಕ್ಕಾಗಿ ನಾವು ನಮ್ಮ ಇಮಾಮರ ಅನುಸರಣೆಯಲ್ಲಿ ಹಾಗೂ ಇಮಾಮರ ಆಜ್ಞೆಯ ಅಡಿಯಲ್ಲಿ ಆಸಕ್ತಿಯೊಂದಿಗೆ ಶುದ್ಧ ಮತ್ತು ಉತ್ತಮ ಆದಾಯ ಗಳಿಕೆಯಿಂದ ಚಂದಾ ಕೊಡುವವರಾಗಬೇಕು.

ಈ ಕುರಿತು ಜಮಾಅತಿನ ಚತುರ್ಥ ಖಲೀಫರು ನುಡಿಯುತ್ತಾರೆ ಯಾರು ಅಲ್ಲಾಹನ ಮಾರ್ಗದಲ್ಲಿ ತ್ಯಾಗ ಮಾಡುವರೋ ಅಲ್ಲಾಹನು ಅವರ ತ್ಯಾಗಗಳನ್ನು ತಡೆಹಿಡಿಯುವುದಿಲ್ಲ. ಆರ್ಥಿಕ ತ್ಯಾಗ ಮಾಡಿದ ಯಾವುದೇ ವ್ಯಕ್ತಿಯನ್ನು ನೀವು ನೋಡಿರಿ. ಅವರ ಮಕ್ಕಳು ಹಸಿವಿನಿಂದ ಬಳಲುತ್ತಿದ್ದಾರೋ? ನೋಡಿ ವಾಗ್ದತ್ತ ಮಹ್‌ದಿ ಇಮಾಮರ ವಂಶವನ್ನು ಯಾವ ರೀತಿ ಅಲ್ಲಾಹನು ಆ ವಂಶಕ್ಕೆ ಅನುಗ್ರಹದ ಮೇಲೆ ಅನುಗ್ರಹವನ್ನು ದಯಪಾಲಿಸಿದ್ದಾನೆ. ಇದು ಕೇವಲ ಕೆಲವು ರೊಟ್ಟಿಗಳ ತ್ಯಾಗದ ಪ್ರತಿಕಾರವಾಗಿ ದೇವನು ಅನುಗ್ರಹಿಸುತ್ತಿದ್ದಾನೆ. ಇನ್ನೂ ಅವರಿಗೆ ನುಬುವ್ವತ್ ಕೂಡ ಲಭಿಸಿರಲಿಲ್ಲ. ಆ ಸಮಯದಲ್ಲಿ ಏನೆಲ್ಲ ಇತ್ತು ಅದೆನ್ನೆಲ್ಲ ದೇವನಿಗೆ ಸಮರ್ಪಿಸಿದರು. ಇದೆಲ್ಲವೂ ದಾನದ ಪ್ರತಿಫಲವಾಗಿದೆ. ಯಾವುದನ್ನು ಉಣ್ಣುತ್ತಿದ್ದೀರಿ. ಈ ವಂಶ ಮಾತ್ರವಲ್ಲ. ಇಂತಹ ನೂರಾರು ಅಹ್ಮದಿ ಮನೆತನಗಳು ಇಂತಹ ಆರ್ಥಿಕ ತ್ಯಾಗದ ಪ್ರತಿಫಲವಾಗಿ ಅದರ ಹಣ್ಣುಗಳನ್ನು ತಿನ್ನುತ್ತಿದ್ದಾರೆ. ಇವರ ತಂದೆ ತಾಯಂದಿರು ಅಥವಾ ಪೋಷಕರು ತುಂಬಾ ಕಷ್ಟಕರ ಪರಿಸ್ಥಿತಿಯಲ್ಲಿ ಜೀವನವನ್ನು ಸಾಗಿಸಿದರು. ಏನೆಲ್ಲ ಅವರ ಬಳಿಯಿತ್ತು ಅದರಲ್ಲಿ ಉಳಿಸಿ ದೇವ ಸನ್ನಿಧಿಯಲ್ಲಿ ಅರ್ಪಿಸಿದರು. ಇಂದು ಅವರ ಮಕ್ಕಳು ಗುರುತಿಸಲಾಗದಷ್ಟು ಮುಂದುವರಿದಿದ್ದಾರೆ. ಎಲ್ಲಿ ಇದ್ದರೂ ಎಷ್ಟು ಉನ್ನತವಾಗಿ ಬೆಳೆದಿದ್ದಾರೆ. ಆದರೆ ತದ್ವಿರುದ್ಧವಾಗಿ ಯಾರು ದೇವ ಸನ್ನಿಧಿಯಲ್ಲಿ ಆರ್ಥಿಕ ತ್ಯಾಗ ಮಾಡಲಿಲ್ಲವೋ ಅವರ ಸಂತಾನ ಈಗಲೂ ಹಿಂದೆ ಉಳಿದಿದೆ. ದರಿದ್ರ ಅವರನ್ನು ಬಿಟ್ಟಿಲ್ಲ. ಅವರ ಮುಖಗಳು ಬೇರೆಯಾಗಿದೆ. ಅವರ ಪರಿಸರವೇ ಬೇರೆ. ಬುದ್ಧಿಯೇ ಬೇರೆ. ಜ್ಞಾನವೇ ಬೇರೆ. ಮತ್ತು ಯಾರು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ್ದಾರೆ ಅವರ ಸಂತಾನಕ್ಕೆ ದೇವನು ಅನುಗ್ರಹದ ಮೇಲೆ ಅನುಗ್ರಹ ದಯಪಾಲಿಸಿದ್ದಾನೆ. ಆದರೆ ಅದನ್ನು ಗುರುತಿಸುವ ಆವಶ್ಯಕತೆ ಇದೆ. ಅದನ್ನು ಅರಿತುಕೊಳ್ಳುವ ಆವಶ್ಯಕತೆ ಇದೆ. ಎಲ್ಲಿಯವರೆಗೆ ಅರಿತುಕೊಳ್ಳುವ ಆವಶ್ಯಕತೆ ಇದೆ, ಈ ಸಮೂಹ ಮುಂದೆ ಸಾಗುತ್ತಿದೆ. ಈ ಅರಿಯುವ ಭಾವನೆ (ಕಳೆದು ಹೋದರೆ) ಅಳಿದು ಹೋದರೆ ಹಾಗೂ ತಪ್ಪು ತಿಳುವಳಿಕೆಗೆ ಗುರಿಯಾದರೆ ಹಾಗೂ ತಪ್ಪು ಗ್ರಹಿಕೆಗೆ ಗುರಿಯಾಗಿ ಇದು ನಮ್ಮ ಸ್ವಂತ ಬುದ್ಧಿವಂತಿಕೆಯ ಪ್ರತಿಫಲ ಎಂದು ಭಾವಿಸುವರಾದರೆ

ಬೇಗ ಹೆದರಿರಿ. ಏಕೆಂದರೆ ಇಂತಹ ಹೀನ ಯೋಚನೆಗಳಿಂದ ಅಲ್ಲಾಹನ ಅನುಗ್ರಹವು ಕಸಿದುಕೊಳ್ಳಲಾಗುತ್ತದೆ. ನೆನಪಿಡಿರಿ ದೇವ ಮಾರ್ಗದಲ್ಲಿ ಕೊಡುವ ಕೈಗಳು ಎಂದೂ ಖಾಲಿ ಇರಲಾರವು. (ಖುತ್‌ಬ ಜುಮುಅ 10 ಸೆಪ್ಟಂಬರ್ 1982).

ಆದ್ದರಿಂದ ನಾವು ನಮ್ಮ ಹಣಕಾಸಿನ ತ್ಯಾಗಗಳನ್ನು ವಿಶೇಷವಾಗಿ ಆದಾಯ ಅನುಸಾರ ಕಡ್ಡಾಯ ಚಂದಾದ ಬಗ್ಗೆ ಸರಿಯಾಗಿ ಗಮನ ಹರಿಸಬೇಕಾಗಿದೆ. ದೇವ ಭಯದಿಂದ, ಧರ್ಮ ನಿಷ್ಠೆಯಿಂದ, ಸೌಭಾಗ್ಯದಿಂದ, ಸರಿಯಾದ ಆದಾಯದಿಂದ ಮಾನದಂಡದ ಪ್ರಕಾರ ಆರ್ಥಿಕತೆಯಿಂದ ದೇವನು ಕೊಟ್ಟ ಸ್ವತ್ತಲ್ಲಿ ದೇವನ ಮುಂದೆಯೇ ಆರ್ಥಿಕ ತ್ಯಾಗ ಸಲ್ಲಿಸಬೇಕಾಗಿದೆ. ಆದರೆ ಯಾರಾದರೂ ನೈಜ ದೀನವಾದ ಕಾರಣದಿಂದ ತನ್ನ ಆದಾಯದ ಕಡ್ಡಾಯ ಆದಾಯ ಅನುಸಾರ ಚಂದಾವನ್ನು ಸರಿಯಾಗಿ ಪಾವತಿಸಲು ಆಗದಿದ್ದರೆ ತನ್ನ ಪ್ರಾಮಾಣಿಕತೆಯಿಂದ ಹಝ್ರತ್ ಖಲೀಫತುಲ್ ಮಸೀಹರ ಸನ್ನಿಧಿಯಲ್ಲಿ ಪತ್ರ ಬರೆದು ಅನುಮತಿಯನ್ನು ಪಡೆದು ಕಡಿಮೆ ಆದಾಯದ ಅನುಸಾರ ಚಂದಾ ಸಂದಾಯ ಮಾಡಬಹುದಾಗಿದೆ. ಆದರೆ ಆದಾಯ ಅನುಸಾರ ಕಡ್ಡಾಯ ಚಂದಾದ ಕುರಿತು ಮರೆಮಾಚುವಿಕೆ ಮತ್ತು ತಪ್ಪು ನಿರೂಪಣೆಯಿಂದ ತಪ್ಪಿತಸ್ತರಾಗಬಾರದು. ಅದು ಮಹಾಪಾಪವಾಗಿದೆ.

ಈ ಕುರಿತು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರವರು ನುಡಿಯುತ್ತಾರೆ: ಕೆಲವು ಜನರು ವಿವಶತೆಯಿಂದ ಬಾಷರಹ್ ಸಂದಾಯ ಮಾಡುವುದಿಲ್ಲವೆಂದಾದರೆ ರಿಯಾಯಿತಿ ತೆಗೆದುಕೊಳ್ಳಲಿ. ಸತ್ಯದ ಬೇಡಿಕೆ ಏನೆಂದರೆ ತನ್ನ ಆದಾಯದ ಮೂಲ ಪ್ರಕಾರ ರಿಯಾಯಿತಿ ತೆಗೆದುಕೊಂಡು ಚಂದಾ ಸಂದಾಯ ಮಾಡಲಿ. ಅದನ್ನು ಬಿಟ್ಟು ಆದಾಯದ ಮೂಲವನ್ನು ಮರೆಮಾಚಿ ತಪ್ಪು ನಿರೂಪಣೆಯನ್ನು ಆಶ್ರಯಿಸುವುದು ಸರಿಯಲ್ಲ. ಈ ಕುರಿತು ನಾನು ಅನೇಕ ಬಾರಿ ಹೇಳಿದ್ದೇನೆ. ಇಂತಹ ಜನರಿಗೆ ಯಾವುದೇ ಪ್ರಶ್ನೋತ್ತರಗಳಿಲ್ಲದೆ ರಿಯಾಯಿತಿ ಕೊಡಲಾಗುವುದು. ಅದಕ್ಕಾಗಿ ಯಾವ ಜನರು ತಮ್ಮ ಮೂಲಾದಾಯವನ್ನು ಮರೆಮಾಚಿ ಬಜೆಟ್ ಬರೆಸುತ್ತಾರೆ ಅವರು ಅಲ್ಲಾಹನ ಸನ್ನಿಧಿಯಲ್ಲಿ ಅಪರಾಧಿಗಳಾಗುತ್ತಾರೆ. ಇನ್ನೊಂದು ಕಡೆ ತಪ್ಪು ಹೇಳಿಕೆಯಿಂದ ತಮ್ಮ ಹಣದಲ್ಲಿಯೂ ಅಪನುಗ್ರಹ, ಅತೃಪ್ತಿ ಸೃಷ್ಟಿಮಾಡಿಕೊಳ್ಳುತ್ತಾರೆ. ಸದಾಕಾಲ ನೆನಪಿನಲ್ಲಿಡಬೇಕು. ಯಾವ ದೇವನು ತನ್ನ ಅನುಗ್ರಹದಿಂದ ಒಳ್ಳೆಯ ಪ್ರತಿಕೂಲ ಕಾಲವನ್ನು ದಯಪಾಲಿಸಿದ್ದಾನೆ. ಅದೇ ದೇವನು ಕಷ್ಟದಲ್ಲಿ ಸಿಲುಕಿಸಲು ಕೂಡ ಸಶಕ್ತನಾಗಿದ್ದಾನೆ. ಅದಕ್ಕಾಗಿ ಸದಾ ತನ್ನ ಎಲ್ಲ ಆಗುಹೋಗು ಪ್ರಕರಣಗಳನ್ನು ಶುದ್ಧವಾಗಿರಿಸಬೇಕು.

ಯಥಾರ್ಥದಲ್ಲಿ ನಾನು ಹೇಳಬಯಸುವುದೇನೆಂದರೆ, ದೇವ ಮಾರ್ಗದಲ್ಲಿ ಸ್ವತ್ತನ್ನು ದಾನವಾಗಿ ಕೊಡುವುದು ಸ್ವಯಂ ತರಬೇತಿ ಮತ್ತು ಶುದ್ಧೀಕರಣದ ಸಾಧನವಾಗಿದೆ. ಸ್ವಲ್ಪ ಆರ್ಥಿಕ ತ್ಯಾಗವನ್ನು ಮಾಡಿ ಅದರೊಂದಿಗೆ ತಪ್ಪು ಹೇಳಿಕೆಗಳಿಂದ ಕೆಲಸ ಕೈಗೊಳ್ಳುವುದು ತಮ್ಮ ಮೂಲ ಆದಾಯವನ್ನು ಮರೆ ಮಾಚುವುದು ಇದು ಸರಿಯಲ್ಲ. ಸರ್ವಶಕ್ತನಾದ ಅಲ್ಲಾಹನು ಆರ್ಥಿಕ ತ್ಯಾಗ ಮಾಡುವವರ ಜೀವನಗಳನ್ನು ಶುದ್ಧೀಕರಿಸುವನು ಎಂದು ವಾಗ್ದಾನ ಮಾಡಿರುವನು. ಈ ಶುಭಕಾರ್ಯದಿಂದ ಅವರು ವಂಚಿತರಾಗುವರು. ಏಕೆಂದರೆ ಅಲ್ಲಾಹನು ಪ್ರತಿಯೊಬ್ಬರ ಮನಸ್ಸಿನ ಸ್ಥಿತಿಗತಿಗಳನ್ನು ಬಲ್ಲವನಾಗಿದ್ದಾನೆ. ಅವರ ಎಲ್ಲ ಸಾಮರ್ಥ್ಯಗಳನ್ನು ಪ್ರಕರಣಗಳನ್ನು ಚೆನ್ನಾಗಿ ಬಲ್ಲವನಾಗಿದ್ದಾನೆ. ಅಲ್ಲಾಹನಿಂದ ಏನು ಮರೆ ಇಲ್ಲ. ಮುಚ್ಚಲ್ಪಡಲು ಸಾಧ್ಯವಿಲ್ಲ. ಅದಕ್ಕಾಗಿ ಅವರ ಇಂತಹ ಕಪಟ ದಾನವು ಯಾವುದೇ ರೀತಿಯ ಉಪಯೋಗಕ್ಕೆ ಬಾರದು. (ಖುತ್‌ಬ ಜುಮುಅ 31 ಮಾರ್ಚ್ 2006).

ಬಾಷರಹ್ ಚಂದಾದ ಕುರಿತು ಅದರ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಬೇಕು. ನಾವು ಯಾವಾಗ ಯಥಾರ್ಥ ರೀತಿಯಲ್ಲಿ ಸತ್ಯಸಂಧರಾಗಿ ಭಯಭಕ್ತಿಯುಳ್ಳವರಾಗಿ ಚಂದಾ ಸಂದಾಯ ಮಾಡುವರಾದರೆ (ಖಂಡಿತವಾಗಿಯೂ) ಆವಶ್ಯಕವಾಗಿಯೂ ನಾವು ಆರ್ಥಿಕ ತ್ಯಾಗದ ಕಾರಣದಿಂದ ಅಲ್ಲಾಹನ ಇಷ್ಟಾಶೀರ್ವಾದಗಳನ್ನು, ಅನುಗ್ರಹಗಳನ್ನು, ಲಾಭಗಳನ್ನು ಪಡೆಯುವವರಾಗುತ್ತೇವೆ. ನಮ್ಮ ಸ್ವತ್ತಿನಲ್ಲಿ ಅಲ್ಲಾಹನು ಅನುಗ್ರಹವನ್ನು ದಯಪಾಲಿಸುವನು. ಹಾಗೂ ಅಲ್ಲಾಹನ ಇಷ್ಟಾಶೀರ್ವಾದಗಳನ್ನು ಪಡೆಯುವವರಾಗುತ್ತೇವೆ. ಆದ್ದರಿಂದ ನಾವು ನಮ್ಮ ಬಾಷರಹ್ ಚಂದಾ ಸಂದಾಯ ಮಾಡುವುದರ ಕಡೆಗೆ ಸರಿಯಾಗಿ ಗಮನ ಹರಿಸಬೇಕು. ಹಾಗೂ ಪೂರ್ಣ ಪ್ರಾಮಾಣಿಕತೆಯಿಂದ ಆದಾಯದ ಪ್ರಕಾರ ಚಂದಾಗಳ ಸಂದಾಯ ಮಾಡಬೇಕು. ಅಲ್ಲಾಹನು ನಮಗೆ ಅದರ ಸೌಭಾಗ್ಯ ದಯಪಾಲಿಸಲಿ.

ಈಗ ಈ ವಿಧೇಯನು ತನ್ನ ಭಾಷಣದ ಶೀರ್ಷಿಕೆಯ ಎರಡನೆಯ ಭಾಗದ ಕಡೆಗೆ ಬರುತ್ತೇನೆ. ಅದೇ ನಿಝಾಮೆ ವಸಿಯ್ಯತ್. ವಸಿಯ್ಯತ್‌ನ ಹಾಗೂ ಅದರ ಅನುಗ್ರಹಗಳು.

ವಾಗ್ದತ್ತ ಮಹ್‌ದಿ ಇಮಾಮರು, ಮಸೀಹರು ತಮ್ಮ ಮರಣದ ಸಮೀಪ ಕಾಲದಲ್ಲಿ ತನ್ನ ಜಮಾಅತಿಗೆ ಎರಡು ವಿಷಯಗಳ ಕುರಿತು ವಸೀಯ್ಯತ್ ಮಾಡಿದರು. ಪ್ರಥಮವಾಗಿ ಖುದ್‌ರತೆ ಸಾನಿಯ. ಅರ್ಥಾತ್ ಖಿಲಾಫತಿನ ವ್ಯವಸ್ಥೆ ಸ್ಥಾಪನೆಯಾಗುವುದು. ಎರಡನೆಯದಾಗಿ ವಸೀಯ್ಯತಿನ ವ್ಯವಸ್ಥೆ. ಹುಝೂರ್(ಅ)ರವರು ತನ್ನ ಕೃತಿ ಅಲ್‌ವಸಿಯ್ಯತ್‌ನಲ್ಲಿ ಸವಿವರವಾಗಿ ಉಲ್ಲೇಖಿಸಿದ್ದಾರೆ. ಹುಝೂರ್(ಅ)ರವರು ಸ್ಪಷ್ಟವಾಗಿ ಹೇಳಿದ್ದಾರೆ, ಅಲ್ಲಾಹನು ಇಸ್ಲಾಮಿನ ಉನ್ನತಿಗಾಗಿ ಯಾವ ಬುನಾದಿಯನ್ನು ಹಾಕಿದ್ದಾನೋ ಅದು ಖಿಲಾಫತ್ತಿನ ವ್ಯವಸ್ಥೆಯಾಗಿದೆ. ಇದರೊಟ್ಟಿಗೆ ಕೂಡಿಕೊಂಡು ಇರಿ. ಎರಡನೆಯದಾಗಿ ಇಸ್ಲಾಮಿನ ಸೇವೆಗಾಗಿ, ಉನ್ನತಿಗಾಗಿ ಇಸ್ಲಾಂ ಧರ್ಮದ ಪ್ರಚಾರಕ್ಕಾಗಿ ತನ್ನ ಆಸ್ತಿಯನ್ನು ವಸೀಯ್ಯತ್ತಿನ ವ್ಯವಸ್ಥೆಯಡಿ (ಉಯಿಲು) ಸಮರ್ಪಿಸುವುದು. ಈ ಶುಭ ಸಂದರ್ಭದಲ್ಲಿ ಈ ವಿಧೇಯನು ವಸೀಯ್ಯತ್ ವ್ಯವಸ್ಥೆಯ ಕುರಿತು ಕೆಲವು ವಿನಂತಿಗಳನ್ನು ಇಡುತ್ತೇನೆ - ವಬಿಲ್ಲಾಹಿ ತೌಫೀಕ್. ಅಲ್ಲಾಹನ ಇಚ್ಛೆಯಂತೆ ವಾಗ್ದತ್ತ ಮಹ್‌ದಿ ಇಮಾಮರು ನುಡಿಯುತ್ತಾರೆ: ಒಂದು ಸ್ಥಳದಲ್ಲಿ ನನಗೆ ಬೆಳ್ಳಿಗಿಂತ ಪ್ರಕಾಶಮಾನವಾಗಿ ಹೊಳೆಯುವ ಸಮಾಧಿಯನ್ನು ತೋರಿಸಲಾಯಿತು. ಆದರೆ ಮಣ್ಣು ಬೆಳ್ಳಿಗಿಂತ ಹೆಚ್ಚು ಹೊಳೆಯುತ್ತಿತ್ತು. ಆದರೆ ಎಲ್ಲ ಮಣ್ಣು ಬೆಳ್ಳಿಯದಾಗಿತ್ತು. ಹಾಗೆ ನನಗೆ ಹೇಳಲಾಯಿತು. ಇದು ನಿನ್ನ (ಕಬರ್) ಗೋರಿಯಾಗಿದೆ. ಮತ್ತೊಂದು ಸ್ಥಳ ನನಗೆ ತೋರಿಸಲಾಯಿತು. ಅದರ ಹೆಸರು ಬಿಹಿಶ್ತಿ ಮಕ್‌ಬರ ಎಂದು ಇಡಲಾಯಿತು. ಮತ್ತು ಈ ಗೋರಿಗಳು ಜಮಾಅತಿನ ಸಾತ್ವಿಕ ಜನರ ಗೋರಿಗಳಾಗಿವೆ ಎಂದು. ಯಾರು ಸ್ವರ್ಗಸ್ಥರಾಗಿದ್ದಾರೆ.

ಪುನಃ ನುಡಿಯುತ್ತಾರೆ: ನನ್ನ ಮರಣದ ಕುರಿತು ಸಹ ನಿರಂತರವಾಗಿ ದೇವವಾಣಿಗಳು ಲಭಿಸಿದುವು. ಆದುದರಿಂದ ಖಬರಸ್ಥಾನವನ್ನು ಬೇಗನೆ ಸ್ಥಾಪಿಸಬೇಕೆಂದು ನಾನು ನಿರ್ಧರಿಸಿದೆನು. ನಮ್ಮ ತೋಟದ ಸಮೀಪವಿರುವ ನನ್ನ ಮಾಲಿಕತ್ವದ ಜಮೀನನ್ನು ಇದಕ್ಕಾಗಿ ಉಪಯೋಗಿಸಲು ನಾನು ನಿರ್ಧರಿಸಿರುವೆನು. ನಾನು ಪ್ರಾರ್ಥಿಸುತ್ತೇನೆ. ದೇವನು ಇದರಲ್ಲಿ ಅನುಗ್ರಹವನ್ನು ಸುರಿಸಲಿ. ಇದನ್ನು ಬಿಹಿಶ್ತಿ ಮಕ್‌ಬರವನ್ನಾಗಿ ಮಾಡಲಿ. ಇದು ಧರ್ಮಕ್ಕೆ ಲೌಕಿಕ ಕಾರ್ಯಗಳಿಗಿಂತ ಅಗ್ರಸ್ಥಾನ ನೀಡಿದವರ, ಲೌಕಿಕ ಆಶಾಭಿಲಾಷೆಗಳನ್ನು ತ್ಯಜಿಸಿ ಅಲ್ಲಾಹನಿಗಾಗಿ ಜೀವಿಸಿದವರ ತಮ್ಮಲ್ಲಿ ಪರಿಶುದ್ಧ ಪರಿವರ್ತನೆ ಮಾಡಿದವರ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರವರ ಶಿಷ್ಯರ ಹಾಗೆ ವಿಶ್ವಾಸಾರ್ಹತೆ ಹಾಗೂ ಸತ್ಯದ ಮಾದರಿಯನ್ನು ತೋರಿಸಿದವರ, ಎಂದರೆ ಈ ಜಮಾಅತಿನ ಪರಿಶುದ್ಧ ಹೃದಯಿಯರಾದ ಜನರ ಅಂತಿಮ ನಿದ್ರೆಯ ತಾಣವಾಗಿ ಅಲ್ಲಾಹನು ಮಾಡಲಿ. ಆಮೀನ್. ಯಾರಬ್ಬಲ್ ಆಲಮೀನ್.

ಈ ಖಬರಸ್ಥಾನದ ಕುರಿತು ಬಹಳ ಮಹತ್ವಪೂರ್ಣ ಶುಭವಾರ್ತೆಗಳು ನನಗೆ ಲಭಿಸಿವೆ. ಈ ಖಬರಸ್ಥಾನ ಸ್ವರ್ಗವಾಸಿಗಳಾದ ಜನರದ್ದಾಗುವುದೆಂದು. ಮಾತ್ರವಲ್ಲ ಇದರಲ್ಲಿ ಎಲ್ಲಾ ವಿಧಗಳ ಅನುಗ್ರಹಗಳು ಸುರಿಸಲ್ಪಟ್ಟಿವೆ ಎಂದು ಅಲ್ಲಾಹನು ನನಗೆ ತಿಳಿಸಿರುವನು. ಈ ಖಬರಸ್ಥಾನದಲ್ಲಿ ಪಾಲು ಸಿಗದೆ ಯಾವುದೇ ರೀತಿಯ ಅನುಗ್ರಹವಿಲ್ಲ. ಆದುದರಿಂದ ಅಲ್ಲಾಹನು ತನ್ನ ರಹಸ್ಯ ವಾಣಿಯ ಮೂಲಕ ನನ್ನನ್ನು ಹೀಗೆ ಪ್ರೇರೇಪಿಸಿದ್ದಾನೆ. ಈ ಖಬರಸ್ಥಾನದಲ್ಲಿ ಪ್ರವೇಶ ಪಡೆಯುವವರು ತಮ್ಮ ಸತ್ಯ ಮತ್ತು ಪರಿಪೂರ್ಣವಾದ ನೇರಮಾರ್ಗದಿಂದ ಮೂರು ಷರತ್ತುಗಳನ್ನು ಪಾಲಿಸುವವರಾಗಬೇಕು. ಆ ಮೂರು ಷರತ್ತುಗಳು ಈ ಕೆಳಗಿನವುಗಳಾಗಿವೆ:

ವಾಗ್ದತ್ತ ಮಹ್‌ದಿ ಇಮಾಮರು ಬಿಹಿಶ್ತಿ ಮಕ್‌ಬರದ ನವೀಕರಣ ಹಾಗೂ ನಿರ್ಮಾಣದ ವೆಚ್ಚವನ್ನು ಮೊದಲ ಷರತ್ತು ಎಂದು ಘೋಷಿಸಿದ್ದಾರೆ. ಹುಝೂರ್(ಅ) ಹೇಳುತ್ತಾರೆ:

1. ಮೊದಲ ಷರತ್ತು ಏನೆಂದರೆ ಈ ಖಬರಸ್ಥಾನದಲ್ಲಿ ತನ್ನ ಸಮಾಧಿ ಮಾಡಲು ಬಯಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ಥಿತಿಗೆ ಅನುಗುಣವಾಗಿ ಇದರ ಆವಶ್ಯಕತೆಗಾಗಿ ಚಂದಾ ಸಂದಾಯ ಮಾಡಬೇಕು. ಈ ಚಂದಾವನ್ನು ಅವರಿಂದ ಮಾತ್ರ ವಿನಂತಿಸಲಾಗಿದೆ. ಬೇರೆಯವರಿಂದ ಅಲ್ಲ.

2. ಎರಡನೇ ಷರತ್ತು ಇದಾಗಿದೆ: ನಮ್ಮ ಜಮಾಅತಿನ ಜನರ ಪೈಕಿ ತಮ್ಮ ಮರಣಾನಂತರದ ಸ್ಥಿರ ಚಿರ ಸೊತ್ತುಗಳಲ್ಲಿ ಹತ್ತರಲ್ಲಿ ಒಂದು ಪಾಲನ್ನು ವಸೀಯ್ಯತ್ ಮಾಡುವವರು ಮಾತ್ರ ಈ ಖಬರಸ್ಥಾನದಲ್ಲಿ ದಫನ್ ಗೊಳಿಸಲು ಅರ್ಹರಾಗುವರು. ಈ ಹಣವನ್ನು ಇಸ್ಲಾಮಿನ ಪ್ರಚಾರ ಮತ್ತು ಪವಿತ್ರ ಖುರ್‌ಆನಿನ ಸಂದೇಶವನ್ನು ತಲುಪಿಸಲು ಖರ್ಚು ಮಾಡಲಾಗುವುದು. ಪರಿಪೂರ್ಣವಾದ ವಿಶ್ವಾಸವನ್ನು ಹೊಂದಿದ ಪ್ರತಿಯೊಬ್ಬನಿಗೂ ಇದಕ್ಕಿಂತಲೂ ಹೆಚ್ಚು ವಸೀಯ್ಯತ್ ಮಾಡಲು ಅನುಮತಿ ಇದೆ. ಆದರೆ ಇದಕ್ಕಿಂತ ಕಡಿಮೆ ಮಾಡಲು ಅನುಮತಿ ಇಲ್ಲ.

3. ಮೂರನೆಯ ಷರತ್ತೇನೆಂದರೆ ಈ ಖಬರಸ್ಥಾನದಲ್ಲಿ ದಫನ್ ಆಗುವವರು ಭಯಭಕ್ತಿ ಹೊಂದಿದವರು (ಮುತ್ತಖಿ) ಆಗಿರಬೇಕು. ಇಸ್ಲಾಂ ನಿಷಿದ್ಧಗೊಳಿಸಿದ ಸಂಗತಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವವರಾಗಿರಬೇಕು. ಯಾವುದೇ ಶಿರ್ಕ್ (ಬಹುದೇವಾರಾಧನೆ) ಮತ್ತು ಬಿದ್‌ಅತ್ (ನವೀನ ಆಚಾರ) ಮಾಡದವರಾಗಿರಬೇಕು. ಸತ್ಯವಂತನೂ ಶುದ್ಧ ಹೃದಯನೂ ಆಗಿರುವ

ಮುಸ್ಲಿಮನಾಗಿರಬೇಕು. (ಅಲ್ ವಸೀಯ್ಯತ್ ಪುಟ 224).

ಇಲ್ಲಿ ಒಂದು ವಿಷಯದ ಕುರಿತು ವಿವರಿಸಲಿಕ್ಕೆ ಬಯಸುತ್ತೇನೆ. ಅದೇನೆಂದರೆ ಯಾವೊಬ್ಬ ವ್ಯಕ್ತಿ ವಸೀಯ್ಯತ್ ಮಾಡಿ ವಸೀಯ್ಯತ್ತಿನ ವ್ಯವಸ್ಥೆಯಲ್ಲಿ ಷರತ್ತಿನ ಅನುಗುಣವಾಗಿ ಜೀವನ ನಡೆಸಿ ಮೃತನಾಗಿ ಯಾವುದಾದರೊಂದು ಕಾರಣಕ್ಕೆ ಬಿಹಿಶ್ತಿ ಮಖ್‌ಬರದಲ್ಲಿ ದಫನ್ ಆಗಲಿಲ್ಲವೆಂದಾದರೆ ಅಂತಹ ವ್ಯಕ್ತಿ ಅಲ್ಲಾಹನ ಸನ್ನಿಧಿಯಲ್ಲಿ ಇದೇ ಖಬರ್‌ಸ್ಥಾನದಲ್ಲಿ ದಫನ್ ಎಂದು ಗಣಿಸಲ್ಪಡಲಾಗುವುದು. ಈ ಕುರಿತು ವಾಗ್ದತ್ತ ಮಹ್‌ದಿ ಇಮಾಮರು ಸ್ವತಃ ವಿವರಿಸುತ್ತಾರೆ:

ಯಾರಾದರೂ ತನ್ನ ಸೊತ್ತಿನ ಹತ್ತರಲ್ಲಿ ಒಂದು ಪಾಲನ್ನು ವಸೀಯ್ಯತ್ ಮಾಡಿದ ನಂತರ ಆಕಸ್ಮತಾಗಿ ನದಿಯಲ್ಲಿ ಮುಳುಗಿ ನಿಧನ ಹೊಂದಿದರೆ ಅಥವಾ ವಿದೇಶದಲ್ಲಿ ಮೃತನಾದ ಕಾರಣ ಮೃತದೇಹ ತರುವುದು ಅಸಾಧ್ಯವಾದರೆ ಅಂತಹ ವ್ಯಕ್ತಿಯ ವಸೀಯ್ಯತ್ ಸ್ಥಾಪಿತವಾಗಿರುವುದು ಮತ್ತು ಅಲ್ಲಾಹನ ದೃಷ್ಟಿಯಲ್ಲಿ ಹಾಗೆಯೇ ಆಗಿರುವುದು. ಆ ವ್ಯಕ್ತಿಯ ಮಯ್ಯತ್ (ಮೃತ ಶರೀರ) ಈ ಖಬರಸ್ಥಾನದಲ್ಲಿ ದಫನ್ ಆದ ಹಾಗೆ ಗಣಿಸಲ್ಪಡುವುದು. ಅಂತಹ ವ್ಯಕ್ತಿಯ ಸ್ಮಾರಕ ಶಿಲೆ ಈ ಖಬರಸ್ಥಾನದಲ್ಲಿ ಇರಿಸಿ ಅದರಲ್ಲಿ ಆ ವ್ಯಕ್ತಿಯ ಪರಿಚಯ ಬರೆಯಲಾಗುವುದು. (ಅಲ್ ವಸೀಯ್ಯತ್ ಪುಟ 30).

ಆದರಣೀಯ ಸಭಿಕರೇ, ವಸೀಯ್ಯತ್ತಿನ ವ್ಯವಸ್ಥೆಯ ಸ್ಥಾಪನೆಯ ಭವ್ಯ ಉದ್ದೇಶಗಳನ್ನು ಅರ್ಥ ಮಾಡಿಕೊಳ್ಳುವ ಆವಶ್ಯಕತೆವಿದೆ ಹಾಗೂ ಅದರಲ್ಲಿ ಆಳವಾಗಿ ದುಮುಕಬೇಕು. ಅದರ ಆವಶ್ಯಕತೆ ಇದೆ. ಇದರಲ್ಲಿ ನಮ್ಮ ಈಮಾನ್ ವಿಶ್ವಾಸ ನಂಬಿಕೆ ಪ್ರಾಮಾಣಿಕತೆ ಮತ್ತು ಧರ್ಮ ನಿಷ್ಠೆಯ ಪರೀಕ್ಷೆಯಾಗಿದೆ. ಈ ಕುರಿತು ವಾಗ್ದತ್ತ ಮಹ್‌ದಿ ಮಸೀಹರು ನುಡಿಯುತ್ತಾರೆ: ನೆನಪಿಡಿರಿ, ಇವು ಅಲ್ಲಾಹನ ಕೆಲಸಗಳಾಗಿವೆ. ಅವನು ಇಚ್ಛಿಸುವ ಹಾಗೆ ಮಾಡುತ್ತಾನೆ. ಕಪಟ ವಿಶ್ವಾಸಿ ಮತ್ತು ಸತ್ಯವಿಶ್ವಾಸಿಗಳನ್ನು ಪ್ರತ್ಯೇಕಿಸಿ ತೋರಿಸಲು ಅವನು ನಿಶ್ಚಯವಾಗಿಯೂ ನಿರ್ಧರಿಸಿದ್ದಾನೆ. ಈ ದೈವಿಕ ವ್ಯವಸ್ಥೆಯ ಕುರಿತು ತಿಳಿದಕೂಡಲೆ ಯಾರು ತಮ್ಮ ಸ್ವತ್ತಿನ ಹತ್ತರಲ್ಲಿ ಒಂದಂಶ ಅಲ್ಲಾಹನ ಮಾರ್ಗದಲ್ಲಿ ಕೊಡಲು ಅಥವಾ ಅದಕ್ಕಿಂತ ಹೆಚ್ಚು ಕೊಡಲು ಉತ್ಸಾಹ ತೋರಿಸುತ್ತಾರೋ ಅವರು ತಮ್ಮ ವಿಶ್ವಾಸದ ಕುರಿತು ಮುದ್ರೆ ಒತ್ತುತ್ತಾರೆಂದು ನಾವು ಮನಗಾಣುತ್ತೇವೆ. (ಅಲ್‌ವಸೀಯ್ಯತ್ ಪುಟ 33).

ವಸೀಯ್ಯತ್ತಿನ ವ್ಯವಸ್ಥೆಯೂ ಅತ್ಯಂತ ಸಂಕೀರ್ಣತೆಯ ವಿಷಯವಾಗಿದೆ. ವಾಗ್ದತ್ತ ಮಹ್‌ದಿ ಮಸೀಹರು ಇದಕ್ಕೆ ವೈಶಿಷ್ಟ್ಯತೆಯನ್ನು ನೀಡಿದ್ದಾರೆ. ಹಾಗೂ ಅಲ್ಲಾಹನ ವಿಶೇಷ (ಇಲ್‌ಹಾಮ್) ಆಕಾಶವಾಣಿಗಳ ಅಡಿಯಲ್ಲಿ ಇದನ್ನು ಸ್ಥಾಪಿಸಿದ್ದಾರೆ. ಯಾವೊಬ್ಬ ವಿಶ್ವಾಸಿಯೂ ಇದರ ಪ್ರಾಮುಖ್ಯತೆ ಹಾಗೂ ಶ್ರೇಷ್ಠತೆಯನ್ನು ನಿರಾಕರಿಸುವುದಿಲ್ಲ. ವಾಗ್ದತ್ತ ಮಹ್‌ದಿ ಮಸೀಹರು ಸ್ಥಾಪಿಸಿದ ಸಂಪೂರ್ಣ ವ್ಯವಸ್ಥೆಯೂ ಆಕಾಶದಿಂದ ಸ್ಥಾಪಿತವಾದುದಾಗಿದೆ. ದೈವಿಕ ಹಾಗೂ ಆಕಾಶವಾಣಿಯನ್ವಯ ವ್ಯವಸ್ಥೆಯೂ ಆಗಿದೆ. ಆದರೆ ವಸೀಯ್ಯತ್ತಿನ ವ್ಯವಸ್ಥೆಯೂ ಅಲ್ಲಾಹನ ವಿಶೇಷ ಆಕಾಶವಾಣಿಯ ಸ್ಫೂರ್ತಿಯಡಿಯಲ್ಲಿ ಸ್ಥಾಪಿಸಲಾದ ವ್ಯವಸ್ಥೆಯಾಗಿದೆ. ಹಾಗೂ ವಸೀಯ್ಯತ್‌ನ (ಪ್ರಕರಣವು) ವಿಷಯವು ಧರ್ಮವನ್ನು ಪ್ರಪಂಚದ ಮೇಲೆ ಸ್ಥಿರವಾಗಿ ಮೇಲುಗೈಯಾಗಿ ಇಡುವ ಪ್ರಾಯೋಗಿಕ ಪುರಾವೆಯಾಗಿದೆ. ಧರ್ಮವನ್ನು ಲೌಕಿಕ ಕಾರ್ಯಗಳ ಮೇಲೆ ಮುಂದೆ ಇಡುವ ಪ್ರತಿಜ್ಞೆ ಒಂದು ನಿವೇದನೆಯಾಗಿದೆ. ಬಹಳಷ್ಟು ಜನರು ಕಶ್ಮಲವಾಗಿ ಯೋಚಿಸುತ್ತಿದ್ದರು ಧರ್ಮವನ್ನು ಪ್ರಪಂಚದ ಮೇಲ ಹೇಗೆ ಮೈಲುಗೈ ಸಾಧಿಸುವುದು ಅಥವಾ ಧರ್ಮವನ್ನು ಲೌಕಿಕತೆ ಮೇಲೆ ಹೇಗೆ ಆದ್ಯತೆ ನೀಡುವುದು ಎನ್ನುವ ಕುರಿತು ಯಾವ ವಾಗ್ದಾನವನ್ನು ಅವರು ದೇವ ಸನ್ನಿಧಿಯಲ್ಲಿ ಮಾಡಿದ್ದಾರೆ. ಅದು ಪೂರೈಸಲಾಗಿದೆಯೋ? ಇಲ್ಲವೋ ಎಂಬ ಆತಂಕದಲ್ಲಿದ್ದಾಗ ಆಗ ದೇವನ ಕರುಣೆಯೂ ತ್ವರಿತವಾಗಿ ಕಾರ್ಯರೂಪಕ್ಕೆ ಬಂದು ದೇವನು ವಾಗ್ದತ್ತ ಮಹ್‌ದಿ ಇಮಾಮರ ಕಡೆಯಿಂದ ತಮ್ಮ ವಾಗ್ದಾನವೂ ಈಡೇರಿದೆಯೋ ಇಲ್ಲವೋ ಎಂದು ತಿಳಿಯಬೇಕಾದರೆ ಅವರಿಗಾಗಿ ವಸೀಯ್ಯತಿನ ಮಾರ್ಗವಾಗಿದೆ ಈ ಮೂಲಕ ಅವರು ತಮ್ಮ ವಾಗ್ದಾನವನ್ನು ಈಡೇರಿಸಿಕೊಳ್ಳಬಹುದು. ಏಕೆಂದರೆ ದೇವನಚ್ಛೆಯೂ ಇಂತಹ ಪರಿಪೂರ್ಣವುಳ್ಳ ವಿಶ್ವಾಸಗಳಿಗೆ ಒಂದು ಜಾಗ ಸ್ಥಳದಲ್ಲಿ ದಫನ್ ಆಗಬೇಕು. ಮುಂದಿನ ಪೀಳಿಗೆಯೂ ಇವರ ಸಮಾಧಿಗಳನ್ನು ಕಂಡು ತಮ್ಮ ವಿಶ್ವಾಸವನ್ನು ವರ್ಧಿಸಿಕೊಳ್ಳಬೇಕು. ಆದ್ದರಿಂದ ಯಾವ ರೀತಿ ಯಾವೊಬ್ಬ ವ್ಯಕ್ತಿ ವಾಗ್ದತ್ತ ಮಹ್‌ದಿ ಇಮಾಮರ ಮಸೀಹರು ತಿಳಿಸಿದ ರೀತಿಯಲ್ಲಿ ವಸೀಯ್ಯತ್ ಮಾಡಿ ಅದರ ಮೇಲೆ ನೆಲೆ ನಿಲ್ಲಿಸಬೇಕು. ಆದರೆ ಯಾರ ವಿಶ್ವಾಸ ಪರಿಪೂರ್ಣವಿಲ್ಲವೋ ಹಾಗು ಯಾರ ಮನಸ್ಸಿನಲ್ಲಿ ಮನಶಾಂತಿ ಇಲ್ಲವೋ ಆ ಕಾರಣಕ್ಕೆ ಆ ವ್ಯಕ್ತಿ ಅತೃಪ್ತನಾಗಿದ್ದಾನೋ ಹಾಗು ದೇವ ಸನ್ನಿಧಿಯಲ್ಲಿ ಮಾಡಿದ ವಾಗ್ದಾನವು ಪೂರ್ಣವಾಯಿತೋ ಇಲ್ಲವೋ? ಅಂತಹವರಿಗಾಗಿ ವಾಗ್ದತ್ತ ಮಹ್‌ದಿ ಇಮಾಮರು ಮಸೀಹರು ದೇವನ ಆಕಾಶವಾಣಿಯಡಿಯಲ್ಲಿ ಈ ವಸೀಯ್ಯತ್ತಿನ ವ್ಯವಸ್ಥೆಯನ್ನು ಸ್ಥಾಪಿತಗೊಳಿಸಿದ್ದು.

ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ ಅನ್‌ಹು) ನುಡಿಯುತ್ತಾರೆ: ವಸೀಯ್ಯತ್ ಮಾಡುವುದು ಹಾಗೂ ಅದರ ಮೇಲೆ ಸ್ಥಿರತೆಯಿಂದ ನೆಲೆ ನಿಲ್ಲುವುದು ಬಿಹಶ್ತಿ ಮಕ್‌ಬರದಲ್ಲಿ ದಫನ್ ಆಗುವುದು, ಧರ್ಮವನ್ನು ಪ್ರಪಂಚದ ಮೇಲೆ ಮೇಲುಗೈ ಸಾಧಿಸುವುದು, ಅರ್ಥಾಥ್ ಧರ್ಮವನ್ನು ಲೌಕಿಕತೆಯ ಮೇಲೆ ಆದ್ಯತೆ ನೀಡುವುದು. ಈ ವಸೀಯ್ಯತ್‌ನ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ)ರವರು ಮಿತಿಯನ್ನೂ ಹೇರಿದ್ದಾರೆ. ಗರಿಷ್ಠ 1/3 ಪಾಲು ಮತ್ತು ಕನಿಷ್ಠ 1/10 ಪಾಲನ್ನು ಉಯಿಲು ಮಾಡಬೇಕು. ಇದು ಮರಣ ನಂತರವಾಗಿದೆ. ಆದರೆ ಜೀವನದಲ್ಲಿ ಒಬ್ಬ ವ್ಯಕ್ತಿ ಎಷ್ಟರ ಮಟ್ಟಿಗೆ ದೇವಮಾರ್ಗದಲ್ಲಿ ಖರ್ಚು ಮಾಡಬಹುದೆಂದರೆ ತನ್ನ ಸಂಬಂಧಿಕರಿಗೆ ಯಾರ ವತಿಯಿಂದ ಜೀವನ ಸಾಗುತ್ತಿದೆಯೋ ಅವರು ಬೇರೊಬ್ಬರ ಮುಂದೆ ಕೈ ಚಾಚುವ ಅವಶ್ಯಕತೆ ಇರುವುದಿಲ್ಲ. ಈ ಷರತ್ತಿನ ಅನ್ವಯ ಅನುಗುಣವಾಗಿ ತನ್ನ ಸ್ವತ್ತಿನ ಅರ್ಧ ಭಾಗ ಕೂಡ ದಾನ ಮಾಡಲಿ ಅಥವಾ ಮುಕ್ಕಾಲು ಭಾಗ ಅಥವಾ ನಾಲ್ಕನೆ ಒಂದು ಭಾಗ ಕೊಡಬಹುದು. ಆದರೆ ಎಷ್ಟು ದಾನ ಮಾಡಬೇಕೆಂದರೆ ಯಾವ ಸಂಬಂಧಿಕರ ಪಾಲನೆ ಪೋಷಣೆ ನಿಮ್ಮ ಜವಾಬ್ದಾರಿಯಾಗಿದೆ. ಅವರು ಬೇರೆಯವರ ಮುಂದೆ ಕೈ ಚಾಚುವರಾಗಬಾರದು.

(ಖುತ್‌ಬ ಜುಮುಅ 4ಮೇ 1928)

ಹಝ್ರತ್ ಮುಸ್ಲಿಹ್ ಮೌಊದ್(ರ)ರವರು ವಸೀಯ್ಯತ್ತಿನ ವ್ಯವಸ್ಥೆಯೂ ಲೋಕದ ಎಲ್ಲ ಚಿಂತೆಗಳ ಸಮಸ್ಯೆಗಳ ಪರಿಹಾರವೆಂದು ಹಾಗೂ ಬಡತನ ನಿರ್ಮೂಲನೆಯ ನಿವಾರಣೆಯ, ದುಃಖ ಕಷ್ಟಗಳನ್ನೂ ದೂರೀಕರಿಸುವ ಏಕೈಕ ಮಾರ್ಗವೆಂದು ಪರಿಗಣಿಸಿದರು. ಯಾವಾಗ ವಸೀಯ್ಯತ್ ವ್ಯವಸ್ಥೆ ತನ್ನ ಪರಿಪೂರ್ಣತೆಗೆ ತಲುಪುತ್ತದೆ ಅದರಿಂದ ಧರ್ಮ ಪ್ರಚಾರ ಮಾತ್ರವಾಗದು ಬದಲಾಗಿ ಇಸ್ಲಾಮಿನ ವ್ಯಾಪ್ತಿಯಲ್ಲಿ ಬರುವ ಎಲ್ಲ ಕೆಲಸ ಕಾರ್ಯಗಳನ್ನು ಪೂರೈಸಲು ದಾರಿಯಾಗುವುದು. ಪ್ರತಿಯೊಂದು ಮನುಷ್ಯ ಜೀವಿಯ ಅಗತ್ಯಗಳನ್ನು ಪೂರೈಸಲಾಗುತ್ತಿದೆ. ದುಃಖ ಹಾಗೂ ಕಷ್ಟಗಳನ್ನೂ ದಾರಿದ್ರ್ಯವನ್ನೂ ಪ್ರಪಂಚದಿಂದ ನಿರ್ಮೂಲನೆ ಮಾಡಲಾಗುವುದು. ಇನ್‌ಶಾಅಲ್ಲಾಹ್. ಅಲ್ಲಾಹನು ಇಚ್ಛಿಸಿದರೆ ಅನಾಥರು ಭಿಕ್ಷೆ ಬೇಡುವುದಿಲ್ಲ. ವಿಧವೆಯರು ಜನರ ಮುಂದೆ ತನ್ನ ಕೈಯನ್ನು ಚಾಚುವುದಿಲ್ಲ. ಬಡವರು, ನಿರ್ಗತಿಕರು ತೊಂದರೆಯಾಗಿ ಅಲೆದಾಡುವುದಿಲ್ಲ. ಏಕೆಂದರೆ ವಸೀಯ್ಯತ್ ಮಕ್ಕಳ ತಾಯಿಯಾಗುವುದು. ಯುವಕರ ತಂದೆಯಾಗಿ, ಮಹಿಳೆಯರ ಮಾಂಗಲ್ಯ ಸೌಭಾಗ್ಯ ಮತ್ತು ಬಲತ್ಕಾರವಿಲ್ಲದೆ ಪ್ರೀತಿ ಮತ್ತು (ಮನಸ್ಪೂರ್ವಕ) ಹೃತ್ಪೂರ್ವಕ ಸಂತೋಷದಿಂದ ಈ ಮೂಲದಿಂದ ಸಹೋದರನು ಸಹೋದರಿಯರಿಗೆ ಸಹಾಯ ಮಾಡುವನು. ಹಾಗೂ ಕೊಡುವವರ ದಾನವು ಪ್ರತಿಫಲವಿಲ್ಲದೆ ಇರುವುದಿಲ್ಲ. ಬದಲಾಗಿ ಪ್ರತಿಯೊಬ್ಬ ದಾನಿಯೂ ದೇವ ಸನ್ನಿಧಿಯಿಂದ ಉತ್ತಮ ರೀತಿಯ ಪ್ರತಿಫಲವನ್ನು ಪಡೆಯುವನು. ಶ್ರೀಮಂತರಿಗೆ ಯಾವುದೇ ರೀತಿಯ ಕಡಿಮೆಯಾಗುವುದಿಲ್ಲ. ಹಾಗೂ ಬಡವರಿಗೆ ಕೂಡ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. ರಾಷ್ಟ್ರವು ರಾಷ್ಟ್ರದ ವಿರುದ್ಧ ಹೋರಾಡುವುದಿಲ್ಲ. ಬದಲಾಗಿ ಅವನ ಈ ಪುಣ್ಯಕಾರ್ಯವು ಲೋಕದ ಮೇಲೆ ವಿಸ್ತರಿಸಲಾಗುವುದು. (ನಿಝಾಮೆನೌ ಪುಟ 130).

ನಮ್ಮ ಪ್ರೀತಿಯ ಇಮಾಮರು, ಪ್ರಸ್ತುತ ಖಲೀಫರು ಖಾಮಿಸ್‌ರವರು ವಸೀಯ್ಯತ್ತಿನ ವ್ಯವಸ್ಥೆಯ ಪ್ರಾಮುಖ್ಯತೆಯ ಅನುಗ್ರಹದ ಕುರಿತು ಹಾಗೂ ಇದರಲ್ಲಿ ಶಾಮೀಲಾಗುವುದರ ಬಗ್ಗೆ ಜಮಾಅತಿನ ಸದಸ್ಯರಿಗೆ ಸೇರ್ಪಡೆಯ ಬಗ್ಗೆ ಪದೇ ಪದೇ ಗಮನ ಸೆಳೆಯುತ್ತಿದ್ದಾರೆ. ಈ ವಿಧೇಯನು ಇದರಿಂದ ಕೆಲವು ಆಯ್ದ ಭಾಗಗಳನ್ನು ಪ್ರಸ್ತಾಪಿಸುತ್ತೇನೆ. ಇದು ಎಂತಹ ವ್ಯವಸ್ಥೆಯ ಆಗಿದೆ ಎಂದರೆ ಈ ಕಾಲದಲ್ಲಿ ದೇವನ ಸಾಮೀಪ್ಯವನ್ನು ಪಡೆಯುವ ಖಾತ್ರಿ ಪಡಿಸುವ ವ್ಯವಸ್ಥೆಯಾಗಿದೆ. ಧರ್ಮಕ್ಕಾಗಿ ತ್ಯಾಗ ಮಾಡುವವರ ಪಕ್ಷದ ವ್ಯವಸ್ಥೆಯೇ ಇದು. ಮತ್ತು ಜಗತ್ತಿನಲ್ಲಿ ನರಳುತ್ತಿರುವ ಮಾನವೀಯತೆಗೆ ಸೇವೆ ಸಲ್ಲಿಸುವ ಜಮಾಅತ್ ಆಗಿದೆ. ಆದ್ದರಿಂದ ಪ್ರತಿಯೊಬ್ಬ ಅಹ್ಮದಿ ಈ ಮಾತುಗಳನ್ನು ಆಲಿಸಿದ ನಂತರ ಯೋಚಿಸಬೇಕು ಮತ್ತು ಅವನು ಈ ವ್ಯವಸ್ಥೆಗೆ ಯಾವ ಕಾಳಜಿ ಮತ್ತು ಪ್ರಯತ್ನದಿಂದ ಸೇರಬೇಕೆಂದು ನೋಡಬೇಕು. ನಮ್ಮ ಒಳ್ಳೆಯತನದ ಮಾನದಂಡಗಳ ತನಕ ತಲಪುವಲ್ಲಿ ವಾಗ್ದತ್ತ ಮಸೀಹರು ವಿಧಿಸುವ ಷರತ್ತುಗಳನ್ನು ಪೂರೈಸುವ ಮಟ್ಟವನ್ನು ತಲಪಲು ಎಂದು ಹೇಳುತ್ತಾರೆ. ಅಂತಹ ಜನರು


"ಉಪವಾಸ ಮಾಡಿರಿ, ಆರೋಗ್ಯ ಪಡೆಯಿರಿ."
"ಜನರಿಗೆ ಕೃತಜ್ಞತೆ ಸಲ್ಲಿಸದವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸಲಾರನು."
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.04, Thursday, 14-21 March 2024, Issue No. 11-12

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಆಲಿಸಿರಿ, ವಸೀಯ್ಯತ್ತಿನ ವ್ಯವಸ್ಥೆಯಲ್ಲಿ ಅಂತಹ ಕ್ರಾಂತಿಕಾರಿ ಸುಧಾರಿಸಲು ಪ್ರಯತ್ನಿಸಿದರೆ, ಈ ವ್ಯವಸ್ಥೆಯ ಆಶೀರ್ವಾದದಿಂದ ಅನೇಕ ಮಾರ್ಗಗಳ ದೂರವಿರುವ ಆಧ್ಯಾತ್ಮಿಕ ರೂಪಾಂತರವು ದಿನಗಳು ಮತ್ತು ಗಂಟೆಗಳಲ್ಲಿ ಸ್ಥಿರವಾಗಿರುತ್ತದೆ. ಹಾಗಾಗಿ ಅವರ ಸುಧಾರಣೆಗಾಗಿ ಅಹ್ಮದಿಯರನ್ನು ಈ ವ್ಯವಸ್ಥೆಯಲ್ಲಿ ಸೇರಿಸಿಕೊಳ್ಳಬೇಕು. ಹಾಗೂ ವಾಗ್ದತ್ತ ಮಹ್‌ದಿ ಮಸೀಹರು ಈ ವ್ಯವಸ್ಥೆಯಲ್ಲಿ ಸೇರುವವರಿಗೆ ಮಾಡಿದ ಪ್ರಾರ್ಥನೆಗಳನ್ನು ಮಾಡಿದ್ದಾರೆ. ಆ ಪ್ರಾರ್ಥನೆಗಳ ಪಾಲುದಾರರಾಗಬೇಕು. (ಯು.ಕೆ. 2004 ರ ವಾರ್ಷಿಕ ಸಭೆ).

ನಂತರ ಹುಝೂರ್ 21 ಜುಲೈ 2005ರಲ್ಲಿ ಈ ಪವಿತ್ರ ವ್ಯವಸ್ಥೆಯಲ್ಲಿ ಶಾಮೀಲಾಗಲಿಕ್ಕೆ ತಿಳಿಸುತ್ತಾ ನುಡಿಯುತ್ತಾರೆ. ಪ್ರಪಂಚದ ಎಲ್ಲ ಅಹ್ಮದಿಯರಿಗೆ ನನ್ನ ಸಂದೇಶ ಏನೆಂದರೆ ವಾಗ್ದತ್ತ ಮಹ್‌ದಿ ಮಸೀಹರ ನುಡಿಮುತ್ತುಗಳ ಪ್ರಕಾರ ಅವರ ಆಕಾಂಕ್ಷೆಗಳ ಅಡಿಯಲ್ಲಿ ಅವರು ಸ್ಥಾಪಿಸಿದ ಆರ್ಥಿಕ ತ್ಯಾಗದ ವ್ಯವಸ್ಥೆಯಲ್ಲಿ ಶಾಮೀಲಾಗಿ ನಿಮ್ಮ ಸುಧಾರಣೆಗಾಗಿ ಮತ್ತು ನಿಮ್ಮ ಉತ್ತಮ ಅಂತ್ಯದ ಒಳ್ಳೆಯದರ ಸಲುವಾಗಿ ಅಲ್ಲಾಹನ ಸಾಮೀಪ್ಯ ಗಳಿಸುವುದಕ್ಕಾಗಿ ಮುಂದೆ ಬನ್ನಿ ಹಾಗೂ ಅವನ ಸ್ವರ್ಗದ ವಾರಸುದಾರನಾಗಲಿಕ್ಕಾಗಿ ಬನ್ನಿ. ವಾಗ್ದತ್ತ ಮಹ್‌ದಿ ಇಮಾಮ್, ಮಸೀಹ್‌ರಿಗೆ ಈ ಖಬರ್‌ಸ್ಥಾನದಲ್ಲಿ ದಫನ್ ಆಗುವ ಸಾತ್ವಿಕರ ಗೋರಿಗಳನ್ನು ತೋರಿಸಲಾಯಿತು. ಹಾಗೂ ದೇವನು ಹೇಳಿದನು ಇದು ಬಿಹಿಶ್ತಿ ಮಕ್‌ಬರ ಎಂದು. ಆದ್ದರಿಂದ ನಾನು ಹೇಳಿದಂತೆ ಈ ವ್ಯವಸ್ಥೆಗೆ ಸರಿಯಾದ ಶ್ರದ್ಧೆಯಿಂದ ಸೇರಿಕೊಳ್ಳಿ. ತಮ್ಮನ್ನು ತೊಡಗಿಸಿಕೊಂಡಿರುವವರು ತಮ್ಮ ಪತ್ನಿ ಮತ್ತು ಮಕ್ಕಳು ಮತ್ತು ಇತರ ಪ್ರೀತಿ ಪಾತ್ರರನ್ನು ಒಳಗೊಳ್ಳಲು ಪ್ರಯತ್ನಿಸಬೇಕು. ದೇವನ (ಕ್ರಿಸ್ತನು) ಮಸೀಹರ ಧ್ವನಿಗೆ ಓಗೊಟ್ಟು ತ್ಯಾಗದ ಉನ್ನತ ಗುಣಮಟ್ಟವನ್ನು ಸ್ಥಾಪಿಸಿ. (ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 29 ಜುಲೈ 2005).

ಆದರಣೀಯ ಸಭಿಕರೇ, ಯಾವ ಅಹ್ಮದಿಯರು ಈ ಅನುಗ್ರಹದಾಯಕ ವಸೀಯ್ಯತ್ತಿನ ವ್ಯವಸ್ಥೆಯಿಂದ ದೂರ ಇದ್ದಾರೆ, ವಂಚಿತರಾಗಿದ್ದಾರೆ ಅಂತಹ ಅಹ್ಮದಿ ಸ್ನೇಹಿತರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಚಿಂತಿಸಬೇಕಾದ ಸಮಯವಾಗಿದೆ.

ಈ ಕುರಿತು ಹಝ್ರತ್ ಅಮೀರುಲ್ ಮೂಮಿನೀನ್(ಅ.ಬಿ.ಅ.) ನುಡಿಯುತ್ತಾರೆ: ಕೆಲವು ಜನರು ಹೇಳುತ್ತಾರೆ ನಮ್ಮ ಕೆಲಸ ಕಾರ್ಯಗಳು ಎಂತಹದ್ದು ಇದೆ ಎಂದರೆ ನಮಗೆ ವಸೀಯ್ಯತ್ತಿನ ವ್ಯವಸ್ಥೆಗೆ ಸೇರಲು ಭಯವಾಗುತ್ತದೆ. ಇಂತಹ ಕೆಲಸ ಕಾರ್ಯಗಳು ಇದ್ದರೂ ಕೂಡ ಅಂತಹವರು ಕೂಡ ವಸೀಯ್ಯತ್ತಿನ ವ್ಯವಸ್ಥೆಯಲ್ಲಿ ಶಾಮೀಲಾಗಿ ವಸೀಯ್ಯತ್ ಮಾಡಿ. ಇಂತಹ ಮನೋಭಾವವುಳ್ಳವರು ವಸೀಯ್ಯತ್ ಮಾಡಿದರೆ ಇದರ ಅನುಗ್ರಹ ಪೂರ್ವಕವಾಗಿ ಅಲ್ಲಾಹನು ಇದರಲ್ಲಿ ಸತ್ಕರ್ಮಗಳ ಮನೋಭಾವವನ್ನು ಹುಟ್ಟಿ ಹಾಕುತ್ತಾನೆ. ಬದಲಾಗಿ ವಸೀಯ್ಯತ್ ಮಾಡಿದ ನಂತರ ಬಹಳಷ್ಟು ಜನರು ನನಗೆ ಬರೆಯುತ್ತಾರೆ, ತನ್ನಿಂದ ತಾನಾಗಿಯೇ ಸತ್ಕರ್ಮಗಳ ಕಡೆ ಗಮನ ಹರಿಯುತ್ತಿದೆ. ಹಾಗೂ ಸಾತ್ವಿಕರಾಗುತ್ತಾರೆ. ಅಲ್ಲಾಹನ ಸಾಮೀಪ್ಯವನ್ನು ಪಡೆಯುವವರಾಗುತ್ತಾರೆ. ಪ್ರಾರ್ಥನೆಗಳ ಕಡೆಗೆ ಗಮನ ಹರಿಸುತ್ತಾರೆ. ನಮಾಝ್‌ಗಳನ್ನು ಸರಿಯಾಗಿ ಯಾತಾವತ್ತಾಗಿ ಮಾಡುತ್ತಾರೆ. ಬಲಿದಾನಗಳ ತ್ಯಾಗಗಳ ಮಾನದಂಡ ಮೇಲುಗೈ ಸಾಧಿಸುವಂತಾಗುತ್ತದೆ. (ಮಜ್ಲಿಸ್ ಅನ್ಸಾರುಲ್ಲಾಹ್, ಯು.ಕೆ. 4 ಅಕ್ಟೋಬರ್ 2009ರ ವಾರ್ಷಿಕ ಸಭೆಯ ಭಾಷಣ).

ಪುನಃ ಹುಝೂರ್ ಇನ್ನೊಂದು ಕಡೆ ನುಡಿಯುತ್ತಾರೆ: ನಾವು ವಸೀಯ್ಯತ್ತಿನ ಷರತ್ತುಗಳನ್ನು ಪೂರೈಸಲು ಸಾಧ್ಯವಿಲ್ಲ ಎಂದು ಹೇಳುವವನು ಅದಕ್ಕಾಗಿ ನಾವು ವಸೀಯ್ಯತ್ ಮಾಡುವುದಿಲ್ಲ. ಇಂತಹ ಜನರು ನೆವ ಮಾಡುತ್ತಾರೆ. ಇಂತಹ ಜನರಿಂದ ಕೇಳಬೇಕು ಏನು ನೀವು ಬೈಅತ್ತಿನ ಎಲ್ಲ ಷರತ್ತುಗಳನ್ನು ಪೂರೈಸುತ್ತಿರುವಿರೇನು. ಇಲ್ಲವೆಂದಾದರೆ ಏನು ಅವರು (ಯಥಾರ್ಥ ಧರ್ಮ ಇಸ್ಲಾಂ) ಅಹ್ಮದಿಯ್ಯತ್ ಬಿಡುವಿರೇನು?

ಯಥಾರ್ಥ ವಿಷಯವೆಂದರೆ ಪ್ರಯತ್ನವಾಗಿದೆ. ಒಂದು ಸಂಕಲ್ಪ ಹಾಗೂ ಉದ್ದೇಶವಾಗಿದೆ. ಅದೇನೆಂದರೆ ಬೈಅತ್ತಿನ ಷರತ್ತುಗಳನ್ನು ಪೂರೈಸುವ ಸಾಧ್ಯವಾದಷ್ಟು ಪ್ರಯತ್ನಿಸುವುದು. ಅಲ್ಲಾಹನು ನಮಗೆ ಇದರ ಸೌಭಾಗ್ಯವನ್ನು ದಯಪಾಲಿಸಲಿ. ಸೌಭಾಗ್ಯವನ್ನು ಬೇಡುತ್ತಲೇ ಇರಬೇಕು.

ವಸೀಯ್ಯತ್ತಿನ ವ್ಯವಸ್ಥೆಯಲ್ಲಿ ಸೇರ್ಪಡೆಯಾಗುವವರು ಅನುಗ್ರಹಕ್ಕೆ ಲೆಕ್ಕವಿಲ್ಲದಷ್ಟು ನಿದರ್ಶನಗಳಿವೆ. ಸಮಯದ ಅಭಾವದಿಂದ ಈ ವಿಧೇಯನು ಒಂದು ಅನುಗ್ರಹಪೂರ್ಣ ಘಟನೆಯನ್ನು ಪ್ರಸ್ತಾಪಿಸುವೆನು.

ಜಮಾಅತ್ ಕೊಸೋವೋನ ಒಬ್ಬ ಮಿತ್ರರ ಘಟನೆಯಾಗಿದೆ. ಹುಝೂರ್(ಅ.ಬಿ.ಅ) ನುಡಿಯುತ್ತಾರೆ: ಅವರು ಒಂದು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಒಂದು ಒಳ್ಳೆಯ ನೌಕರಿಯ ಹುಡುಕಾಟದಲ್ಲಿದ್ದರು. ಬಹಳ ಪ್ರಯತ್ನಪಟ್ಟರು. ಸಮಯ ಕಳೆದು ಹೋದರೂ ಒಳ್ಳೆಯ ನೌಕರಿ ಸಿಗಲಿಲ್ಲ. ಅಂತಹ ಸಮಯದಲ್ಲಿ ಅವರು ವಸೀಯ್ಯತ್ ವ್ಯವಸ್ಥೆಯಲ್ಲಿ ಶಾಮೀಲಾಗಲಿಕ್ಕೆ ಮನಸ್ಸು ಮಾಡಿದರು. ಇನ್ನೂ ಫಾರಂ ತುಂಬಿಸಿರಲಿಲ್ಲ. ಕೇವಲ ಚಂದಾ ವಸೀಯ್ಯತ್ ಕೊಡಲು ಪ್ರಾರಂಭಿಸಿದರು. ತ್ವರಿತವಾಗಿ ಅವರಿಗೆ ಅದೇ ನಗರದ ಪ್ರದೇಶದಲ್ಲಿ ಅವರ ಆಸೆಯಂತೆ ಅವರಿಗೆ ನೌಕರಿ ದೊರಕಿತು. ಈ ಘಟನೆಯ ಕುರಿತು ಸಾಕಷ್ಟು ಬಾರಿ ಗೆಳೆಯರ ಮುಂದೆ ಹೇಳುತ್ತಿದ್ದರು. ಹಾಗೂ ಹೇಳಲಿದ್ದಾರೆ, ಇದು ಪ್ರಸ್ತುತ ಖಲೀಫರ ದುವಾ ಹಾಗೂ ವಸೀಯ್ಯತ್ ವ್ಯವಸ್ಥೆಯಲ್ಲಿ ಶಾಮೀಲಾದ ಕಾರಣದಿಂದಾಗಿದೆ ಎಂದು ಹೇಳುತ್ತಿದ್ದರು. ಒಂದು ಪ್ರಮುಖ ವಿಷಯದ ಕುರಿತು ಪ್ರಸ್ತಾಪಿಸುತ್ತಾ ಪ್ರಮುಖವಾದೊಂದ್ದು ಸದಾ ನನ್ನ ಬ್ಯಾಂಕ್ ಖಾತೆಯಲ್ಲಿ ನೌಕರಿ ಮಾಡುವ ಸಮಯದಲ್ಲಿ ಖಾತೆ ಖಾಲಿಯಾಗಿತ್ತು ವಸೀಯ್ಯತ್ತಿನ ವ್ಯವಸ್ಥೆಯಲ್ಲಿ ಶಾಮೀಲಾದ ನಂತರ ಸದಾ ಬ್ಯಾಂಕ್ ಖಾತೆಯಲ್ಲಿ ದುಡ್ಡು ಇರುವುದು. ಬಹಳ ಅನುಗ್ರಹದಾಯಕ ವ್ಯವಸ್ಥೆ ವಸೀಯ್ಯತ್ ಆಗಿದೆ. ಆದರಿಂದ ಇಂತಹ ಬಲಿದಾನಗಳನ್ನು ಕೊಡಬೇಕು. ಇಂತಹ ಘಟನೆಗಳಿಂದ ತಮ್ಮ ವಿಶ್ವಾಸ ವರ್ಧಿಸಬೇಕು. ನಿಮ್ಮಲ್ಲಿ ಒಳ್ಳೆಯ ಬದಲಾವಣೆಗಳು ಉಂಟಾಗಬೇಕು. ಆಗ ಮಾತ್ರ ದೇವನ ಸಾಮೀಪ್ಯ ನಮಗೆ ಸಿಗುವಂತಾಗುತ್ತದೆ ಹಾಗೂ ಧಾರ್ಮಿಕ ಪ್ರಾಪಂಚಿಕ ಎಲ್ಲದರಲ್ಲೂ ನಾವು ಬೆಳವಣಿಗೆಗಳು ಆಗಲು ಸಾಧ್ಯ. (ಅಲ್‌ಫಝ್ಲ್ ಇಂಟರ್‌ನ್ಯಾಶನಲ್ 15 ಆಗಸ್ಟ್ 2014).

ಕೊನೆಯಲ್ಲಿ ಒಂದು ವಿನಂತಿಯನ್ನು ಮುಂದಿಡುತ್ತಾ ನನ್ನ ಭಾಷಣಕ್ಕೆ ವಿರಾಮ ಕೊಡುತ್ತೇನೆ. ಹಝ್ರತ್ ಅಮೀರುಲ್ ಮೂಮಿನೀನ್ ವಾರ್ಷಿಕ ಸಮ್ಮೇಳನ 2004ರಲ್ಲಿ ನುಡಿದರು: ನನ್ನ ಬಯಕೆಯೇನೆಂದರೆ 2008ರಲ್ಲಿ ಖಿಲಾಫತ್ ಸ್ಥಾಪನೆಯಾಗಿ (ಇನ್‌ಶಾಅಲ್ಲಾಹ್) ಒಂದು ನೂರು ವರ್ಷಗಳು ಪೋರೈಸುವುದು. ಆ ಶುಭ ಸಂದರ್ಭದಲ್ಲಿ ಲೋಕದ ಪ್ರತಿಯೊಂದು ದೇಶದ ಪ್ರತಿಯೊಂದು ಜಮಾಅತಿನ ಯಾರು ಚಂದಾ ನೀಡುತ್ತಿದ್ದಾರೆ ಅಂತಹವರು 50% ಪ್ರತಿಶತ ವಾಗ್ದಾನ ಮಾಡಿದರೆ ಈ ಅತ್ಯಂತ ಅನುಗ್ರಹದಾಯಕ ವ್ಯವಸ್ಥೆ ವಸೀಯ್ಯತ್ ಸೇರಬೇಕು.

ಹುಝೂರ್ ಅನ್ವರ್ ರವರ ಬಯಕೆಯಂತೆ ಜಾಗತಿಕ ಅಹ್ಮದಿಯ ಮುಸ್ಲಿಮರು ಸ್ಪಂಧಿಸಿದ್ದಾರೆ. ಹಾಗೂ ಅನೇಕ ದೇಶಗಳು ಅನೇಕ ಜಮಾಅತಿನವರು ಈ (ಟಾರ್‌ಗೆಟ್)) ಗುರಿಯನ್ನು ತಲುಪಿದ್ದಾರೆ. ಹಾಗೂ ಕೆಲವರು (ಮುಂದೆ) ಹಾದು ಹೋಗಿದ್ದಾರೆ. ಮೀರಿದ್ದಾರೆ. ಈವಾಗ ಖಿಲಾಫತ್ ಅಹ್ಮದಿಯಾದ ಎರಡನೆ ಶತಮಾನದ ಹದಿನಾರನೆಯ ವರ್ಷವನ್ನು ಹಾದು ಹೋಗುತ್ತಿದ್ದೇವೆ. ನಾವು ನಮ್ಮ ವ್ಯಕ್ತಿಕ ಹಾಗೂ ಜಮಾಅತಿನ ಮಟ್ಟದಲ್ಲಿ ವ್ಯವಹರಿಸುವ ಮೌಲ್ಯಮಾಪನೆ ಮಾಡುವುದರ ಆವಶ್ಯಕತೆ ಇದೆ. ಏನು ನಾವು ಕನಿಷ್ಠ ಪಕ್ಷ 50% ಪ್ರತಿಶತ ಗುರಿಯನ್ನು ತಲುಪಿದ್ದೇವೆ. ಇಲ್ಲವೆಂದಾದರೆ ಯಾವ ರೀತಿ ಹಝ್ರತ್ ಅಮೀರುಲ್ ಮೂಮಿನೀನ್ ತಿಳಿಸಿರುವರು, ಯಾವ ಸೋಮಾರಿತನ, ನ್ಯೂನತೆಗಳು ಆಗಿ ಹೋಗಿವೆ. ಕ್ಷಮೆಯನ್ನು ಕೇಳುವ ಮೂಲಕ ಹಝ್ರತ್ ಮಸೀಹ್ ಮೌಊದ್(ಅ)ರವರ ಧ್ವನಿಗೆ ಓಗೊಡುವ ಮೂಲಕ ಬೇಗ ಬೇಗನೆ ಈ ದೇವಾನುಗ್ರಹ ವ್ಯವಸ್ಥೆಯಲ್ಲಿ ಶಾಮೀಲಾಗೋಣ. ಮತ್ತು ನಮ್ಮನ್ನು ನಾವು ರಕ್ಷಿಸಿಕೊಳ್ಳುವ. ಹಾಗೂ ನಮ್ಮ ಮುಂದಿನ ಪೀಳಿಗೆಯನ್ನು ರಕ್ಷಿಸಬೇಕು. ಹಾಗೂ ಅಲ್ಲಾಹನ ಅನುಗ್ರಹಕ್ಕೆ ಪಾತ್ರರಾಗಬೇಕು. ಅಲ್ಲಾಹನು ನಮಗೆ ಇದರ ಸೌಭಾಗ್ಯ ನೀಡಲಿ – ಆಮೀನ್. (ಜಲ್ಸ ಸಾಲಾನ 2004).

**Love for All, Hatred for None**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.